7.20 ಪಿಎಂ

ಇಲ್ಲದಿದ್ದರೆ ಕಾನೂನನ್ನು ಅವರೇ ಬದಲಾವಣೆ ಮಾಡಿಕೊಳ್ಳುತ್ತಿದ್ದರು. ತಿದ್ದುಪಡಿ ಮಾಡಿಕೊಳ್ಳುತ್ತಿದ್ದರು. ಯಾವುದೇ ಒಂದು ಕಂಪ್ಲೆಂಟ್ ಬಂದ ತಕ್ಷಣ ಸಿಬಿಐ suo moto ಎಂಟರ್ ಆಗುತ್ತಿತ್ತು. ಅವರು ನಮಗೆ option ಕೊಟ್ಟ ಉದ್ದೇಶವೇನೆಂದರೆ, case by case ನೀವು ನೋಡಿ consent ಕೊಡಬೇಕೆಂಬ ದೃಷ್ಟಿಯಿಂದ ಇದು ಇರತಕ್ಕ ಕಾನೂನು Delhi Police Act, ಅದನ್ನು suo moto ಕೊಡತಕ್ಕದಲ್ಲ. ಅದಕ್ಕೆ ನಾವು every consent ಕೊಡುತ್ತಲೇ ಇದ್ದೇವೆ. ಯಾವುದೂ ಕೂಡ ನಿಲ್ಲಿಸತಕ್ಕದ್ದು ಇಲ್ಲ. ಇದೊಂದೇ ಕೇಸ್‌ನಲ್ಲಿ ಕೊಟ್ಟಿದ್ದೇವೆ ಎಂದಲ್ಲ Public undertaking ಇರುವುದರಿಂದ ಆ case ಅನ್ನು ಸಿಬಿಐಗೆ ರೆಫರ್ ಮಾಡಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ಒಂದೇ ಒಂದು ವಿಚಾರ.

Mr. Speaker : No, I cannot allow. ಬೇಕಾಗಿಲ್ಲ. ಮಾನ್ಯ ಚಂದ್ರೇಗೌಡರೆ, ತಾವು ಹೇಳಿ. No. I am very sorry. ಮಾನ್ಯ ಚಂದ್ರೇಗೌಡರೆ ತಾವು ಪ್ರಾರಂಭ ಮಾಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಒಬ್ಬರು ಐಎಎಸ್ ಮತ್ತು ಐಪಿಎಸ್ ಆಫೀಸರ್ ಮೇಲೆ ದೊಡ್ಡ allegation ಆಯಿತು. ಅದನ್ನು ಇದುವರೆಗೆ ಏಕೆ ಸಿಬಿಐಗೆ ಕೊಟ್ಟಿಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಿಬಿಐ ಗೆ ಕೊಡಬೇಕೋ ಬೇಡವೋ ಎಂಬ ಬಗ್ಗೆ ಸರ್ಕಾರ ಯೋಚನೆ ಮಾಡಿ ಅದಕ್ಕೆ ಇರುವ ಸಾಧಕಬಾಧಕಗಳನ್ನು ನೋಡಿ ಕೊಡಬಹುದು. ನೀವು ಕೊಡು ಎನ್ನುವುದನ್ನು ಕೊಡುವುದು, ಬಿಡಿ ಎನ್ನುವುದನ್ನು ಬಿಡುವುದಲ್ಲ. ನೀವು ಬೇಕಾದವರಿಗೆ ಅಲಿಗೇಷನ್ ಮಾಡುತ್ತೀರಿ, ಕೊಡು ಅನ್ನುವುದು Yes. If we have got evidence, we will do it. Otherwise, if we are convinced that a particular officer is not involved we will not give our duty to defend any officer who is not in doubt.

ಶ್ರೀ ಜಗದೀಶ್‌ಶೆಟ್ಟರ್ : ನೀವು ಸಿಬಿಐ ಗೆ ಕೊಟ್ಟಿದ್ದನ್ನು ನಾವು question ಮಾಡಿಲ್ಲ. ಕೊಟ್ಟು ಒಳ್ಳೆಯದನ್ನು ಮಾಡಿದ್ದೀರೆಂದು ಹೇಳಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಂದ್ರ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಏನೆಂದು ಹೇಳಿದ್ದಾರೆಂದರೆ, ಈ ಕೇಸನ್ನು ಏನು ರೆಫರ್ ಮಾಡಿದರು, ಇದನ್ನು ಸಿಬಿಐ ಗೆ ತೆಗೆದುಕೊಳ್ಳುತ್ತೇವೆಂದು ಅವರು ಪಾರ್ಲಿಮೆಂಟ್‌ನಲ್ಲೇ ಹೇಳಿದರು. ಹಾಗಿದ್ದರೆ ತೆಗೆದುಕೊಳ್ಳಲಿ.

9) ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸೂಚಿಸುವ ಚರ್ಚೆಗೆ ಸರ್ಕಾರದಿಂದ ಉತ್ತರ :-

† **ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** : ಮಾನ್ಯ ಸಭಾಧ್ಯಕ್ಷರೆ, ರಾಜ್ಯ ವಿಧಾನ ಮಂಡಳದಲ್ಲಿ ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ವಂದನಾ ನಿರ್ಣಯದ ಮೇಲೆ ಸುಮಾರು 15 ಜನ ಸದಸ್ಯರುಗಳು ತಮ್ಮ ಅಮೂಲ್ಯವಾದಂಥ ಅಭಿಪ್ರಾಯಗಳನ್ನು, ಸಲಹೆಗಳನ್ನು ಸೂಚನೆಗಳನ್ನು, ಮಾರ್ಗದರ್ಶನವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಚರ್ಚೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳೆಲ್ಲವೂ ತುಂಬಾ ಉಪಯುಕ್ತವೂ ಚರ್ಚೆ ಬಹಳ ಗಂಭೀರವಾಗಿ ನಡೆದಿದೆ. ಬಹಳ ಸಂತೋಷದ ಮೊದಲ ವಿಚಾರವೇನೆಂದರೆ, ಶಾಸನಸಭೆ ನಡೆಯುವ

ಕಾಲಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಪಕ್ಷದ ಸದಸ್ಯರು ಸದನದಲ್ಲಿ ಭಾಗವಹಿಸುವ ಸೂಚನೆಗಳು ಇಲ್ಲದಿದ್ದ ಕಾರಣ ನಮಗೆ ಒಂದು ರೀತಿಯ ಅಸಮಾಧಾನ ಏನೋ ಒಂದು ಕೊರತೆ ಎದ್ದು ಕಾಣುತ್ತಿತ್ತು. ಅವರುಗಳು ಪುನಹ ಸಭೆಗೆ ಬಂದು ಚರ್ಚೆ ಮಾಡಿ ಆ ಕೊರತೆಯನ್ನು ತುಂಬಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮೊದಲು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎರಡನೆಯದಾಗಿ ಬಹಳ ಮುಖ್ಯವಾಗಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಸದನದಲ್ಲಿ ನಡೆದರೆ ಮಾನ್ಯ ಮುಖ್ಯಮಂತ್ರಿಗಳೇ ಅದಕ್ಕೆ ಉತ್ತರವನ್ನು ಕೊಡುವುದು ಸಂಪ್ರದಾಯ. ಈ ಸಂಪ್ರದಾಯಕ್ಕೆ ವಿರುದ್ಧವಾಗಿ ಈ ಸಾರಿ ನಾನು ಉತ್ತರ ಕೊಡಲು ಸರ್ಕಾರದ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನುಮತಿಯನ್ನು ಪಡೆದು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನೂ ಅವರನ್ನೂ ಅಭಿನಂದಿಸಿ ನನ್ನ ಕೆಲವು ಅಭಿಪ್ರಾಯಗಳನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ನಾಲ್ಕೂವರೆ ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಈ ರಾಜ್ಯದ ಜನ ಹಿಂದೆ ಇದ್ದಂಥ ಪರಿಸ್ಥಿತಿಗೂ, ಅದರಲ್ಲೂ ವಿಶೇಷವಾಗಿ ಸರ್ಕಾರ ನಡೆಸುವಂಥವರ ಮಧ್ಯೆ ಇದ್ದಂಥ ಆಂತರಿಕ ವೈಷಮ್ಯಗಳು, ಗುಂಪುಗಾರಿಕೆ, ಅಧಿಕಾರಕ್ಕಾಗಿ ಕಚ್ಚಾಟ ಈ ಎಲ್ಲಾ ಕಾರಣಗಳಿಂದ ಬೇಸರಗೊಂಡಿದ್ದಂಥ ಕಾಲದಲ್ಲಿ ನಾವು ರಾಜ್ಯದ ಜನರಿಗೆ ಒಂದು ಪ್ರಣಾಳಿಕೆಯನ್ನು ಕೊಟ್ಟೆವು. ಆ ಪ್ರಣಾಳಿಕೆಯಲ್ಲಿ ಮೊದಲನೆಯ ಭರವಸೆ ಈ ರಾಜ್ಯದ ಜನರಿಗೆ ಕೊಟ್ಟಂಥದ್ದನ್ನು ನಾನು ಮತ್ತೊಮ್ಮೆ ದಾಖಲಿಸಲು ಅಪೇಕ್ಷೆ ಪಡುತ್ತೇನೆ. ನಾವೇನು ಮಾತನ್ನು ಜನರಿಗೆ ಕೊಟ್ಟಿದ್ದೆವೋ ಅದರಂತೆ, ಪುಟ ನಾಲ್ಕರಲ್ಲಿ ಕಾಂಗ್ರೆಸ್ ಪಕ್ಷ ಈ ಹಿಂದಿನಂತೆ ಐದು ವರ್ಷಗಳ ಪೂರ್ಣಕಾಲ ಸ್ಥಿರ ಸರ್ಕಾರವನ್ನು ನೀಡುವುದೆಂದು ಮಾನ್ಯ ಮತದಾರರಿಗೆ ಭರವಸೆ ನೀಡುತ್ತದೆ. ಇದು ಸಾಧನೆಯಲ್ಲವೆಂದು ನೀವು ಹೇಳುತ್ತೀರೇನು? ನಿಮ್ಮ ದೃಷ್ಟಿಯಿಂದ ಅಲ್ಲವೆಂದರೆ ಏನೂ ಮಾಡಲು ಆಗುವುದಿಲ್ಲ. ಆದರೆ ನನ್ನ ದೃಷ್ಟಿಯಿಂದ ನನ್ನ ಸಾಧನೆಯೇನು ಎಂದು ಹೇಳಬೇಕಾಗುತ್ತದೆ. ಇದು ಈ ಸರ್ಕಾರದ ಅತ್ಯಂತ ದೊಡ್ಡ ಮತ್ತು ಮಹತ್ತರವಾದಂಥ ಸಾಧನೆ. ನಾಲ್ಕುವರೆ ವರ್ಷಗಳ ಕಾಲ ಸರ್ಕಾರವನ್ನು ನಡೆಸಿದ್ದೇವೆ. ಆರುಬಾರಿ ರಾಜ್ಯಪಾಲರ ವಂದನಾನಿರ್ಣಯ ಈ ಸಭೆಯಲ್ಲಿ ಮಂಡಿತವಾಗಿ ಚರ್ಚೆಯಾಗಿ ಅನುಮೋದನೆಯಾಗಿ ಅವರಿಗೆ ನಮ್ಮ ಗೌರವವನ್ನು ಸಮರ್ಪಣೆ ಮಾಡಿದ್ದೇವೆ. ನಾನು ಅದನ್ನು ಪ್ರಸ್ತಾಪ ಮಾಡಿದ ಉದ್ದೇಶವೇನೆಂದರೆ, ಯಾವುದೇ ಒಂದು ರಾಜ್ಯದ ಅಭಿವೃದ್ಧಿಯ ದಿಕ್ಕು ದಾರಿ ಮಾನ್ಯ ಸಭಾನಾಯಕರು ಹೇಳಿದಂತೆ ಹೋಗತಕ್ಕ ರೀತಿ ನೀತಿಗಳು, ಇದನ್ನು ಒಂದು ಸದೃಢವಾದಂಥ ಸರ್ಕಾರ ಇದ್ದರೆ ಹೇಗೆ ಸಾಧ್ಯ ಮಾಡಬಹುದು ಎನ್ನುವುದಕ್ಕೆ ಇದೊಂದು ಉದಾಹರಣೆ ಅಷ್ಟೆ. ಈ ಹಿಂದೆ ನಡೆದಿರತಕ್ಕ ಎಲ್ಲಾ ಸಂಗತಿಗಳ ಬಗ್ಗೆ ನಾನು ಬಹಳ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ, ಪ್ರತಿಪಕ್ಷದ ನಾಯಕರು ಬಹಳ ವಿಶೇಷವಾಗಿ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಿದ್ದಾರೆ. ಆ ಚರ್ಚೆಯಲ್ಲಿ ನೀವು ಬರ ಪರಿಸ್ಥಿತಿಯ ಬಗ್ಗೆ ಒಂದು ದಾಖಲೆಯ ನಮಗೆ ಕೊಡುತ್ತೇವೆಂದು ಹೇಳಿದ್ದಿರಿ, ಅದನ್ನು ಇದುವರೆಗೆ ಕೊಟ್ಟಿಲ್ಲವೆಂದು ಹೇಳಿದರು. ಸುಮಾರು ನಾಲ್ಕೈದು ದಿವಸಗಳ ಕೆಳಗೆ ತಮಗೆ ಬರ ಪರಿಸ್ಥಿತಿ ಸಂಪನ್ಮೂಲ ಮತ್ತು ಆಹಾರಧಾನ್ಯಗಳ ಬಳಕೆಯ ಬಗ್ಗೆ ಮಾಹಿತಿಯ ವರದಿಯನ್ನು 4.8.2003ರಲ್ಲಿ ಇದ್ದಂತೆ ಮತ್ತು 31.12.2000ರವರೆಗಿನ ಸ್ಥಿತಿಗತಿಯನ್ನು ತಮ್ಮ ಅವಗಾಹನೆಗೆ ತಂದಿದ್ದೇವೆ. ಒಂದು ವೇಳೆ ಅದು ತಮಗೆ ತಲುಪಿಲ್ಲವೆಂದರೆ ಅದನ್ನು ಪುನಹ ಈ ಸಭೆಯ ಮುಂದಿಡಬಯಸುತ್ತೇನೆ. ಬಹಳ ಮುಖ್ಯವಾಗಿ ಈ ನಾಲ್ಕೂವರೆ ವರ್ಷಗಳ ಮತ್ತೊಂದು ವಿಶೇಷ ಈ ಸಭೆಯಲ್ಲಿ ಏನು ಎಂದರೆ,

ಇದುವರೆಗೆ ಪ್ರತಿಪಕ್ಷಗಳಿಂದ ಈ ಸರ್ಕಾರದ ವಿರುದ್ಧ ಒಂದೇ ಒಂದು ಅವಿಶ್ವಾಸದ ನಿರ್ಣಯ ಪ್ರಸ್ತಾಪವಾಗಿಲ್ಲ. ಇದು ಮೊದಲನೆಯ ಸಾಧನೆ. ಇದುವರೆಗೆ ಒಂದೇ ಒಂದು ಅವಿಶ್ವಾಸ ನಿರ್ಣಯವಾಗಿಲ್ಲ. ಚರ್ಚೆಗೋಸ್ಕರ, ಗಂಭೀರವಾಗಿ ಚರ್ಚೆ ಮಾಡತಕ್ಕದ್ದು ಸಲಹೆಯನ್ನು ಕೊಡತಕ್ಕದ್ದು, ಇದು ಈ ರಾಜ್ಯದ ಈ ಸಾರಿಯ ಆಡಳಿತಕ್ಕೆ ಸಂದಂಥ ಗೌರವ. ಇದರಲ್ಲಿ ನಿಮ್ಮನ್ನೂ ಮೆಚ್ಚುತ್ತೇನೆ. ಸರ್ಕಾರ ನಡೆಸಿದವರನ್ನೂ ಮೆಚ್ಚುತ್ತೇನೆ. ಆದ್ದರಿಂದ ಯಾವುದೇ ರೀತಿಯ ಬಲವಾದ ಶಂಕೆಗಳು ನಿಮಗೆ ಇಲ್ಲ. ಯಾವುದೇ ರೀತಿಯ ಅನುಮಾನಗಳು ಈ ಸರ್ಕಾರದ ಮೇಲಿಲ್ಲ. ಯಾವುದೇ ರೀತಿಯ ದೋಷಾರೋಪಣೆ ಕೂಡ ಪ್ರಭಲವಾಗಿ ಸದನದಲ್ಲಿ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವ ಮೂಲಕಮಾಡಿಲ್ಲ. ಅದು ನಮ್ಮ ಸರ್ಕಾರಕ್ಕೆ ಸಂದಿರತಕ್ಕ ಗೌರವ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಅರ್ಥಾತ್ ಆಳುವ ಮತ್ತು ಪ್ರತಿಪಕ್ಷಗಳು ಒಟ್ಟಾಗಿ ಸೇರಿ ಈ ರಾಜ್ಯದ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದೇವೆ ಎಂಬ ಸಂಕೇತವೆಂದು ನಾನು ಭಾವಿಸುತ್ತೇನೆ. ಎರಡನೆಯದು, ಬಹಳ ಮುಖ್ಯವಾಗಿ ಯಾವುದೇ ಮುಖ್ಯಮಂತ್ರಿ ಅನುಭವಿಸದೇ ಇರುವಷ್ಟು ಏಕತೆಯನ್ನು, ಯಾವುದೇ ಮುಖ್ಯಮಂತ್ರಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೆಯೇ ನಾಲ್ಕೂವರೆ ವರ್ಷಗಳ ಕಾಲ ಆಳುವ ಪಕ್ಷದ ಸದಸ್ಯರಿಂದ ಯಾವುದೇ ಕೊರತೆಗಳೂ ಆಗದ ಹಾಗೆ ಏಕಮೇವದ್ವಿತೀಯ ನಾಯಕನಾಗಿ ನಾವು ಒಪ್ಪಿಕೊಂಡು ಈ ರಾಜ್ಯದಲ್ಲಿ ಕಳೆದ ನಾಲ್ಕೂವರೆ ವರ್ಷದಿಂದ ರಾಜ್ಯಭಾರ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಹೆಚ್.ಕೆ. ಪಾಟೀಲರು ಎಲ್ಲಿ? ಅವರಿಂದ ನಿಮಗೆ ತಕರಾರು ಇಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಮೇಲ್ಮನೆಯ ನಾಯಕರು. ಅಲ್ಲಿದ್ದಾರೆ. ನಿಮಗೆ ಅದು ತಕರಾರು ನಾವು ಅವರಿಗೆ ಪ್ರಮೋಷನ್ ಕೊಟ್ಟಿದ್ದೇವೆ. ಕೇವಲ ನೀರಾವರಿಗಾಗಿ ಅವರು ಸೀಮಿತವಾಗಿ ಇರುವುದು ಬೇಡ ಎಂದು ಖಾತೆಯನ್ನು ಬದಲಾವಣೆ ಮಾಡಿ ಕೃಷಿಯಂಥ ವಿಶಾಲವಾದಂಥ ಖಾತೆಯನ್ನು ಕೊಡಲಾಗಿದೆ. ಸಾಧನೆಗೆ ಅಳತ್ಗೆಗೋಲು ಯಾವುದು? ಒಂದು ರಾಜ್ಯ ಸರ್ಕಾರ ಎಷ್ಟು ದೀರ್ಘಕಾಲ ಯಾವುದೇ ಬಾಧಕ ಇಲ್ಲದೆಯೇ ಕೆಲಸ ಮಾಡಿದೆ ಎನ್ನುವುದು ಅಳತೆಗೋಲು. ಅವಿಶ್ವಾಸ ನಿರ್ಣಯ ತಾರದಿರುವುದು ಮೊದಲನೆಯದು ನಮ್ಮಲ್ಲಿ ಸಂಪೂರ್ಣವಾದ ವಿಶ್ವಾಸವನ್ನು ನಾಯಕರ ಮೇಲೆ ಇಟ್ಟಿರುವಂಥದ್ದು ಎರಡನೆಯದು, ಇದನ್ನು ತಾವೂ ಮತ್ತು ರಾಜ್ಯದ ಜನರು ಗಮನಿಸಿದ್ದಾರೆಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ; ಬಹಳ ಮುಖ್ಯವಾಗಿ ನಾನು ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪ್ರಸ್ತಾಪಿಸುವುದಕ್ಕೆ ಮುಂಚೆ ಪಂಚಾಯತ್ ರಾಜ್ ಬಗ್ಗೆ ಹೇಳಬಯಸುತ್ತೇನೆ. ಪಂಚಾಯತ್ ರಾಜ್‌ನಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಸಾಕಷ್ಟು ಚರ್ಚೆ ಈ ಸದನದಲ್ಲಿ ನಡೆದಿದೆ. ಈ ಚರ್ಚೆಯಲ್ಲಿ ಬಹಳ ಮುಖ್ಯವಾಗಿ ತಾವು ಗಮನಿಸಬೇಕಾದುದು ಏನೆಂದರೆ, ಯಾವ್ಯಾವ ಸರ್ಕಾರಕ್ಕೆ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಎಷ್ಟೆಷ್ಟು, ತಾವು ಹೇಳಿದ ಹಾಗೆ, ಇಚ್ಛಾಶಕ್ತಿ ಇದೆ, ವಿಕೇಂದ್ರೀಕರಣದಲ್ಲಿ ನಂಬಿಕೆ ಇದೆ, ವಿಕೇಂದ್ರೀಕರಣದಲ್ಲಿ ವಿಶ್ವಾಸ ಇದೆ ಅನ್ನತಕ್ಕಂಥದ್ದು ನಮ್ಮ ನಡವಳಿಕೆಯಿಂದ ಹೋಗುತ್ತದೆ. ಗ್ರಾಮ ಪಂಚಾಯಿತಿಗಳಿಗೆ ಕಾಂಗ್ರೆಸ್ ಸರ್ಕಾರ 1993ರಲ್ಲಿ ಚುನಾವಣೆ ಮಾಡಿತು. 1998ರಲ್ಲಿ ಅವುಗಳ ಐದು ವರ್ಷಗಳ ಅವಧಿ ಮುಗಿಯಿತು. ಅಲ್ಲಿಂದ ಮುಂದೆ ಎರಡು ವರ್ಷಗಳ ಕಾಲ ಆಳುತ್ತಿದ್ದಂತಹ ಸರ್ಕಾರ ಚುನಾವಣೆ ಬಗ್ಗೆ ಆಲೋಚನೆ ಕೂಡ ಮಾಡಲಿಲ್ಲ. ಆ ಚುನಾವಣೆಯ ಬಗ್ಗೆ ಆಲೋಚನೆಯನ್ನು ಮಾಡಿದ್ದು, ಶ್ರೀ ಕೃಷ್ಣರವರು ಅಧಿಕಾರ

ವಹಿಸಿಕೊಂಡು, ಈ ಸರ್ಕಾರ ಬಂದಮೇಲೆ. 2000ನೇ ಇಸವಿಯಲ್ಲಿ ಪುನಃ ಅವುಗಳಿಗೆ ಚುನಾವಣೆಯನ್ನು ಮಾಡಿರತಕ್ಕದ್ದು ನಾವು ಎಂಬುದನ್ನು ಸದನದ ಗಮನಕ್ಕೆ ಸದನದ ಮೂಲಕ ನಾಡಿನ ಜನತೆಗೆ ನಾನು ತರಬಯಸುತ್ತೇನೆ. 1998ರಲ್ಲಿ ಅವುಗಳ ಅವಧಿ ಮುಗಿದಿದ್ದರೂ, ಚುನಾವಣೆ ನಡೆಸದೇ ಅವುಗಳ ಅವಧಿಯನ್ನು ಎರಡು ವರ್ಷಗಳ ಕಾಲ ವಿಸ್ತರಣೆ ಮಾಡಲಾಗಿತ್ತು. ನಮ್ಮ ಸರ್ಕಾರ ಬಂದ ಮೇಲೆ ಪುನಃ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆಯನ್ನು ಮಾಡಿ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ 5600 ಗ್ರಾಮ ಪಂಚಾಯಿತಿಗಳಿಗೆ ಮತ್ತು ಎಲ್ಲಾ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆಯನ್ನು ಮಾಡಿ, ಅದರ ಜೊತೆಯಲ್ಲಿ ಹೆಣ್ಣು ಮಕ್ಕಳಿಗೆ ಮೀಸಲಾತಿ, ಹಿಂದುಳಿದ ವರ್ಗಕ್ಕೆ ಮೀಸಲಾತಿ, ಹರಿಜನ-ಗಿರಿಜನರಿಗೆ ಮೀಸಲಾತಿಯನ್ನು ಕೊಟ್ಟಂತಹ ಕೀರ್ತಿ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪುತ್ತಾರೆ ಎಂದು ನಾನು ಭಾವಿಸುತ್ತೇನೆ. ನಮ್ಮ ಸಾಧನೆಗಳೇನು ಎಂಬುದನ್ನು ಹೇಳುವಾಗ ಇದೆಲ್ಲವನ್ನೂ ನಾವು ಹೇಳಬೇಕಾಗುತ್ತದೆ. ನಾಲ್ಕು ವರ್ಷಗಳಿಂದ ನೀವೇನು ಮಾಡಿದ್ದೀರಿ ಎಂದು ನೀವು ಆಗಾಗ್ಗೆ ಕೇಳುವುದರಿಂದ ಇದನ್ನು ಹೇಳಬೇಕಾಯಿತು. ಆಗ ಚುನಾವಣೆಯನ್ನು ನೀವು ಏಕೆ ಮಾಡಲಿಲ್ಲ ಎಂಬುದನ್ನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಅವಿಶ್ವಾಸ ನಿರ್ಣಯ ನಮ್ಮ ಸರ್ಕಾರದ ವಿರುದ್ಧ ನೀವು ತರಲಿಲ್ಲ. ನಾವು ಚೆನ್ನಾಗಿ ಕೆಲಸ ಮಾಡಿದ್ದೇವೆ ಎಂಬುದನ್ನು ಇದು ತೋರಿಸುತ್ತದೆ ಎಂದು ನೀವು ಆಗಲೇ ಹೇಳಿಕೊಂಡಿರಲ್ಲಾ, ಇದು ಆ ರೀತಿ ಆಗುತ್ತದೆ. ಹಾಗಾದರೆ ನಿಮ್ಮ ಪ್ರಕಾರ ನಾವು ಅವಿಶ್ವಾಸ ತರಬೇಕಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಪಾಟೀಲ್‌ರವರೇ, ಇದು ಹೇಗಾದರು ಇರಲಿ. ಸಂಗತಿ ಸಂಗತಿಯೇ, facts are facts. ಆ ವಾಸ್ತವಿಕ ಸತ್ಯಗಳನ್ನು ನಾವು ಎಷ್ಟರಮಟ್ಟಿಗೆ ಅರ್ಥ ಮಾಡಿಕೊಳ್ಳುತ್ತೇವೆಯೋ ಅಷ್ಟರಮಟ್ಟಿಗೆ.......

ಶ್ರೀ ಎಸ್.ಎಸ್. ಪಾಟೀಲ್ : ಮಾನವಂತರು ಮಾನಕ್ಕೆ ಅಂಜಿದರು ಎಂಬ ಗಾದೆಯಂತ ಈ ಮಾತು ಆಗುತ್ತದೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ನೀವು ಅವಿಶ್ವಾ ನಿರ್ಣಯವನ್ನು ಕೇಂದ್ರ ಸರ್ಕಾರದ ಮೇಲೆ ತರುತ್ತಲೇ ಇದ್ದೀರಿ ಆದರೆ ನಾವು ಇಲ್ಲಿ ಅವಿಶ್ವಾಸ ನಿರ್ಣಯ ತಂದರೆ ನಿಮ್ಮನ್ನೂ ತೆಗೆಯುತ್ತಲೇ ಇದ್ದೆವು. ಅದರಿಂದಾಗಿ ನಾವು ಅದನ್ನು ಇಲ್ಲಿ ತರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು, ಹೌದು, ನೀವು ಜೆ.ಹೆಚ್. ಪಟೇಲ್‌ರವರ ಭಾಷೆಯಲ್ಲಿ ಹೇಳುವುದಾದರೆ, ಖಾಯಂ ಜಗಳಹರಕರು. ಇದು ಜೆ.ಹೆಚ್. ಪಟೇಲ್‌ರವರ ಭಾಷೆ, ನನ್ನದಲ್ಲ. ನೀವು ಖಾಯಂ ಜಗಳಹರಕರು, ಇಚ್ಛಾ ಮರಣಿಗಳು. ಈ ಇಚ್ಛಾ ಮರಣಿಗಳು ಹೇಗೆ ಎಂಬುದನ್ನು ಬೇಕಾದರೆ ನಾನು ಹೇಳುತ್ತೇನೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಆ ಜಗಳವೆಲ್ಲಾ ಇಲ್ಲೇ ಮಾಡಿಕೊಂಡ ನಂತರವೇ ನಾವು ಅಲ್ಲಿ ಬಂದು ಕುಳಿತಿದ್ದೆವು.

ಅಧ್ಯಕ್ಷರು : ಗೌಡರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ದಯವಿಟ್ಟು ಯಾರಿಗೂ ಯೀಲ್ಡ್ ಆಗಬಾರದು.

ಶ್ರೀ ಡಿ.ಬಿ. ಚಂದ್ರೇಗೌಡ : ಇಚ್ಛಾ ಮರಣಿಗಳ ಬಗ್ಗೆ ನಾನೇನೂ ಹೆಚ್ಚಿಗೆ ಹೇಳಬಯಸುವುದಿಲ್ಲ......

ಶ್ರೀ ಎಸ್.ಎಸ್. ಪಾಟೀಲ್ : ದಿವಂಗತ ಜೆ.ಹೆಚ್. ಪಟೇಲ್‌ರವರು ನಮಗೆ ಏನೊಂದು ಹಾದಿ ತೋರಿಸಿದ್ದರೋ, ಏನು ಹೇಳಿ ಹೋಗಿದ್ದಾರೋ, ಆ ರೀತಿಯಾಗಿ ನಾವು ನಡೆದುಕೊಂಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೌದಾ, ಬಹಳ ಸಂತೋಷ ಸ್ವಾಮಿ.

ಶ್ರೀ ಎಸ್.ಎಸ್. ಪಾಟೀಲ್ : ಸುಮ್ಮ ಸುಮ್ಮನೆ ಧರಣಿ ಮಾಡುವುದು, ವಾಕೌಟ್ ಮಾಡುವುದು, ಇಂತಹ ಕೆಲಸಗಳನ್ನೆಲ್ಲಾ ನಾವು ಮಾಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಅದನ್ನೆಲ್ಲಾ ಮಾಡಿಲ್ಲ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಅವಿಶ್ವಾಸ ನಿರ್ಣಯವನ್ನೇ ತರಬೇಕೆಂದಿದ್ದರೆ, ಅದಕ್ಕೆ ಬೇಕಾದಷ್ಟು ವಿಷಯಗಳಿದ್ದವು. ಮೂರು ದಿವಸ ಮಾತನಾಡುವಷ್ಟು ವಿಚಾರಗಳು ಇದ್ದವು. ಆದರೆ ನಾವು ಅಂತಹ ಅವಿಶ್ವಾಸ ನಿರ್ಣಯ ತರಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಅದನ್ನೆಲ್ಲಾ ಮಾಡಿದಿರಿ ಎಂದು ನಾನು ನಿಮಗೆ ಹೇಳಲೇ ಇಲ್ಲ. ನಾನು ಹೇಳಿದ್ದು ಏನೆಂದರೆ, ಈ ಕೂಡಿಕೆ ಮತ್ತು ವಿಚ್ಛೇದನ, ಇದು ನಿಮ್ಮಲ್ಲಿ ನಿರಂತರವಾಗಿ ನಡೆಯುತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ಐದು ವರ್ಷಗಳ ಕಾಲ ನಾವು ಸಂಪೂರ್ಣವಾಗಿ ಆಡಳಿತ ನಡೆಸಿದ್ದೇವೆ. ಜನರ ಅಭಿವೃದ್ಧಿ ದೃಷ್ಟಿಯಿಂದ ಉತ್ತಮವಾದ ಆಡಳಿತ ನೀಡಿದ್ದೇವೆ. ಈ ಬಗ್ಗೆ ತಾವು ಎಲ್ಲಿಯಾದರೂ ಜನಗಳ ಮಧ್ಯೆ ಹೋಗಿ ಕೇಳಿ ನೋಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮಲ್ಲಿ ಮುಖ್ಯಮಂತ್ರಿಗಳು ಎಷ್ಟು ಸಲ ಬದಲಾವಣೆಯಾದರು?

ಶ್ರೀ ಹೆಚ್. ವಿಶ್ವನಾಥ್ : ನೀವು ಅಧಿಕಾರಕ್ಕೆ ಬಂದಾಗಲ್ಲಾ abortion ಆಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ನಾವು ಉತ್ತಮವಾದ ಅಧಿಕಾರ ನಡೆಸಿದ್ದೆವು. ನಿಮ್ಮ ಸರ್ಕಾರ ಬಂದ ನಂತರ ಬರ ಬಂದು ರಾಜ್ಯವೇ ನಾಶವಾಗಿದೆ. ನದಿಗಳು ಒಣಗಿವೆ, ಕುಡಿಯುವ ನೀರಿಗೆ ತೊಂದರೆಯಾಗಿದೆ. ಇದಕ್ಕೇನು ಹೇಳುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಪಂಚಾಯತ್ ರಾಜ್ ವಿಚಾರ ಹೇಳುತ್ತಿದ್ದೆ. ಬರದ ವಿಚಾರಕ್ಕೆ ನಂತರ ಬರೋಣ. 1993 ರಿಂದ 2000ರವರೆಗೆ 7 ವರ್ಷಗಳ ಕಾಲ ಪಂಚಾಯತ್ ರಾಜ್‌ಗಳಿಗೆ ಅನುದಾನ 1 ಲಕ್ಷ ರೂ.ಗಳು ಇತ್ತು. 2000ನೇ ಇಸವಿಯಾದ ಮೇಲೆ ನಾವು ಈ 1 ಲಕ್ಷ ರೂ. ಇದ್ದುದ್ದನ್ನು 2 ಲಕ್ಷ ರೂ ಮಾಡಿ, 2 ಲಕ್ಷ ರೂ ಇದ್ದುದ್ದನ್ನು 3½ ಲಕ್ಷ ರೂ ಮಾಡಿ, ಪ್ರಸ್ತುತ ವರ್ಷದಲ್ಲಿ 5 ಲಕ್ಷ ರೂ.ಗಳೆಂದು ಮಾಡಿದ್ದೇವೆ. ಇದನ್ನಾದರೂ ನೀವು ಒಪ್ಪಿಕೊಳ್ಳಬಹುದಲ್ಲವೇ?

ಶ್ರೀ ಆರಗ ಜ್ಞಾನೇಂದ್ರ : ಅದರಲ್ಲಿ ಬಿಡುಗಡೆ ಮಾಡಿದ್ದು ಎಷ್ಟು? ಧಾರವಾಡದಲ್ಲಿ ಇದೇ 23ನೇ ತಾರೀಖು 60 ಸಾವಿರ ಜನರನ್ನು ಸೇರಿಸುತ್ತಿದ್ದೀರಿ. ಇದಕ್ಕಾಗಿ ಎಲ್ಲಾ ತಾಲ್ಲೂಕು ಕೇಂದ್ರಗಳಿಂದ ಬಸ್ ಮಾಡುತ್ತಿದ್ದೀರಿ ಭಾರೀ ದರ್ಬಾರು.

ಶ್ರೀ ಡಿ.ಬಿ. ಚಂದ್ರೇಗೌಡ : ಬಿಡುಗಡೆ ಮಾಡಿರುವುದು ಎಷ್ಟು ಎಂಬ ವಿವರಗಳನ್ನೂ ಸಹ ನಾನು ಇಲ್ಲಿ ಕೊಡುತ್ತೇನೆ. ಈ ವರ್ಷ......

ಶ್ರೀ ಎಸ್.ಎಸ್. ಪಾಟೀಲ್ : ಆಗ ಪ್ಲಾನ್ ಎಷ್ಟು ಇತ್ತು? ಬಜೆಟ್ ಎಷ್ಟು ಇತ್ತು? ಇಗ ಅದು ಎಷ್ಟು ಇದೆ ಎಂಬುದನ್ನು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದರ ಬಗ್ಗೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಡಿಸ್ಕಷನ್‌ಗೆ ಬಂದಾಗ ಚರ್ಚೆ ಮಾಡೋಣ. ಈಗ ನಾನು ಪಂಚಾಯತ್ ರಾಜ್ ಬಗ್ಗೆ ಹೇಳುತ್ತಿದ್ದೇನೆ. ಪಂಚಾಯತ್ ರಾಜ್ ಬಗ್ಗೆ ನಾವು ಚರ್ಚೆ ಮಾಡುತ್ತಿರುವಾಗ ನಾನು ಪ್ಲಾನಿಂಗ್ ವಿಚಾರಕ್ಕೆ ಏಕೆ ಹೋಗಲಿ? ಪ್ಲಾನಿಂಗ್‌ಗೆ ನಂತರ ಹೋಗೋಣ. ನಮ್ಮಲ್ಲಿ ಒಂದು ಮಾತು ಉಂಟು. ಉಂಡಿದ್ದು ತುಂಡು ಕಂಬಳಿಗೆ ನ್ಯಾರ್ ಎಂದು ಒಂದು ಮಾತನ್ನು ಹೇಳುತ್ತಾರೆ. ಎಷ್ಟು ಸಂಪಾದನೆ ಮಾಡುತ್ತೇವೋ ಅಷ್ಟು ಖರ್ಚು. ಎಷ್ಟು ಸರ್ಕಾರ ಬಿಡುಗಡೆ ಮಾಡುತ್ತಿತ್ತೋ, ಅಷ್ಟನ್ನು ಖರ್ಚಿನ ರೂಪದಲ್ಲಿ ಇಲ್ಲೇ ಹಿಡಿದುಕೊಳ್ಳುತ್ತಿತ್ತು. KPTCLಗೆ ಕೊಡಬೇಕಾದಂತಹ ಬಾಕಿಯನ್ನು ಇಲ್ಲಿ ಮುರಿದುಕೊಂಡರೆ, ಪಂಚಾಯಿತಿಯ ಕೆಲಸ ಮುಗಿದೇ ಹೋಯಿತು. ಇವತ್ತು KPTCLಗೆ ವಿದ್ಯುತ್ ಬಾಕಿಗೆ ನಮ್ಮ ಸರ್ಕಾರವು 1 ಲಕ್ಷ 80 ಸಾವಿರ ರೂಪಾಯಿಗಳನ್ನು ಮುರಿದುಕೊಂಡಿದೆ. ಇಲ್ಲವೆಂದು ನಾನು ಹೇಳುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸಚಿವರ ಉತ್ತರದ ಮಧ್ಯೆ ಯಾರೂ ಮಾತನಾಡಬೇಡಿ. ಅವರು ಪೂರ್ಣ ಉತ್ತರ ಕೊಟ್ಟು ಮುಗಿಸಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರಿ ಖಜಾನೆ ಮುಖಾಂತರ ನವೆಂಬರ್ 2003ವರೆಗೆ 1 ಲಕ್ಷ 40 ಸಾವಿರ ರೂಪಾಯಿಗಳ ಹಣವನ್ನು ನೇರವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಗ್ರಾಮ ಪಂಚಾಯಿತಿಗಳಿಗೆ ಬ್ಯಾಂಕ್‌ನ ಮುಖಾಂತರ 1 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಹೀಗೆ ಒಟ್ಟು ಬಿಡುಗಡೆ ಮಾಡಿರತಕ್ಕಂಥ ಹಣ 4 ಲಕ್ಷ 20 ಸಾವಿರ ರೂಪಾಯಿಗಳು. ಇನ್ನು 80 ಸಾವಿರ ರೂಪಾಯಿಗಳ ಅನುದಾನವನ್ನು 2004ನೇ ಇಸವಿ ಮಾರ್ಚ್ ತಿಂಗಳೊಳಗಾಗಿ ಸಂಪೂರ್ಣವಾಗಿ ಬಿಡುಗಡೆ ಮಾಡುತ್ತೇವೆ ಎಂದು ಈ ಗೌರವಾನ್ವಿತ ಸದನದ ಮೂಲಕ......

ಶ್ರೀ ಬಿ. ಸೋಮಶೇಖರ್ : ಒಂದು ವರ್ಷದಲ್ಲೇ ಇಷ್ಟೊಂದು ಬಿಡುಗಡೆ ಮಾಡಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವರ್ಷದಲ್ಲೇ ನಾವು 5 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಬಗ್ಗೆ ನಾನಿಲ್ಲಿ ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಚಂದ್ರೇಗೌಡರೇ, ಒಂದು ಕೆಲಸ ಮಾಡಿ. ಪಾಪ! ನೀವು ಉತ್ತರ ಕೊಡಿ....

ಶ್ರೀ ಡಿ.ಬಿ. ಚಂದ್ರೇಗೌಡ : ನನಗ್ಯಾಕೆ ಪಾಪ! ಎನ್ನುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಮ್ಮನ್ನು ನೋಡಿದರೆ ನನಗೆ ಪಾಪ! ಎಂದು ಅನಿಸುತ್ತದೆ. ಏಕೆ ಎಂದು ನಾನು ಹೇಳುತ್ತೇನೆ. ನಾನು intervene ಆದಾಗ ನೀವು ಯೀಲ್ಡ್ ಆಗುವ ಸೌಜನ್ಯ ತೋರಿಸಿದ್ದೀರಿ. ಅದಕ್ಕಾಗಿ I am grateful to you. ಕಳೆದ ಏಳು ತಿಂಗಳುಗಳಿಂದ ಗ್ರಾಮ ಪಂಚಾಯಿತಿಗಳಲ್ಲಿ ಬಲ್ಬ್‌ಗಳನ್ನು ಹಾಕಿಸಲಿಕ್ಕೂ ಸಹ ಹಣ ಇಲ್ಲ. Mini Water Supplyಗಳಲ್ಲಿ ನೀರು ಬಿಡತಕ್ಕಂಥವರಿಗೆ ಸಂಬಳ ಕೊಟ್ಟಿಲ್ಲ. ಆದರೆ ಇಲ್ಲಿ ನಾವು ದುಡ್ಡನ್ನು ರಿಲೀಸ್ ಮಾಡಿದ್ದೇವೆ ಎಂದು ನೀವು ಹೇಳುತ್ತಿದ್ದೀರಿ. ಕೈ ಪಂಪ್ ರಿಪೇರಿ ಮಾಡುವುದಕ್ಕೆ ಪಂಚಾಯಿತಿಗಳ ಹತ್ತಿರ ದುಡ್ಡು ಇಲ್ಲ. ನೀವು ಹಣವನ್ನು ಎಲ್ಲಿ ರಿಲೀಸ್ ಮಾಡಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ನಾವು ಹಣವನ್ನು ರಿಲೀಸ್ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಕೃಷ್ಣಪ್ಪನವರೇ, ನಿಮಗೆ ಪಂಚಾಯಿತಿಗಳ ವ್ಯವಹಾರ ಗೊತ್ತಿಲ್ಲ. ನಿಮಗೆ ಮುನಿಸಿಪಾಲಿಟಿಗಳ ವ್ಯವಹಾರ ಮಾತ್ರ ಗೊತ್ತು. ನಮ್ಮ ಪಂಚಾಯಿತಿಗಳಿಗೆ ಈಗಲೇ ಬನ್ನಿ, ಹೋಗೋಣ. ಅಲ್ಲಿ ಏನಾಗಿದೆ ಎಂದು ನಾನು ನಿಮಗೆ ತೋರಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾರವರೇ, ಅದಕ್ಕಾಗಿಯೇ ನಾನು ನಿಮಗೆ ಏನು ಹೇಳಿದೆ ಎಂದರೆ, ತಾವು ಕೇಳಿದಂತಹ ಉಳಿದಿರತಕ್ಕಂಥ ಹಣವನ್ನು ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. 1993ರ ಪಂಚಾಯತ್ ರಾಜ್ ಅಧಿನಿಯಮಕ್ಕೆ ತಿದ್ದುಪಡಿ ತಂದು, ವಿಶೇಷವಾದಂತಹ ಅನುದಾನಗಳನ್ನು ನೇರವಾಗಿ ಬಿಡುಗಡೆ ಮಾಡತಕ್ಕಂಥದ್ದರ ಜೊತೆಗೆ, ಅವರಿಗೆ ಹೆಚ್ಚಿನ ಜವಾಬ್ದಾರಿಗಳನ್ನೂ ಸಹ ಕೊಡತಕ್ಕಂಥದ್ದನ್ನು ಮಾಡಿದ್ದೇವೆ. ಅದಕ್ಕೆ ತಾವೇ ಇಲ್ಲಿ ಮಂಜೂರು ಮಾಡಿ ಕೊಟ್ಟಿರತಕ್ಕಂಥ ಮಸೂದೆ ಇದೆ. ಗ್ರಾಮ ಸಭೆಗಳ ಜೊತೆಗೆ ಈಗ ವಾರ್ಡ್ ಸಭೆಗಳನ್ನು ರಚಿಸಿ, ಜನರು ನೇರವಾಗಿ ಅಭಿವೃದ್ಧಿ ಕಾರ್ಯದಲ್ಲಿ ಭಾಗವಹಿಸಬೇಕೆಂದು ಮಾಡಿದ್ದೇವೆ. ಸುಮಾರು ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳ ಗಣಕೀಕರಣ ಮಾಡುವಂತಹ ಕಾರ್ಯವನ್ನು ಈಗಾಗಲೇ ನಾವು ಹಮ್ಮಿಕೊಂಡಿದ್ದೇವೆ. ಪ್ರಸ್ತುತ ವರ್ಷದಲ್ಲಿ ಸುಮಾರು 3100 ಗ್ರಾಮ ಪಂಚಾಯಿತಿಗಳನ್ನು ಗಣಕೀಕರಣದ ವ್ಯಾಪ್ತಿಗೆ ತರತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ. ಈಗಾಗಲೇ ಸುಮಾರು 80 ಸಾವಿರ ಜನಕ್ಕೆ ತರಬೇತಿ ಕಾರ್ಯಕ್ರಮವನ್ನೂ ಸಹ ಕೊಟ್ಟಿರತಕ್ಕಂಥದ್ದು ತಮಗೆ ಗೊತ್ತಿದೆ. ಗ್ರಾಮೀಣ ಸಂಪರ್ಕ ಜಾಲಕ್ಕಾಗಿ 1999–2000ನೇ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ ತಲಾ ಒಂದು ಕೋಟಿ ರೂಪಾಯಿಗಳ ವಿಶೇಷ ಅನುದಾನ ಒದಗಿಸಿ 3340 ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಿಸಿದ್ದೇವೆ......

ಶ್ರೀ ಜಗದೀಶ್ ಶೆಟ್ಟರ್ : ಒಂದು ಕೋಟಿ ರೂಪಾಯಿಗಳ ಹಣ ಯಾವುದು?

ಶ್ರೀ ಡಿ.ಬಿ. ಚಂದ್ರೇಗೌಡ : ಜಿಲ್ಲಾ ಪಂಚಾಯಿತಿಗಳ ಮೂಲಕ ಆ ಹಣವನ್ನು ವೆಚ್ಚ ಮಾಡಿದ್ದೇವೆ. ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಬಂದಂತಹ ಹಣವನ್ನು ಸಮರ್ಪಕವಾಗಿ ಉಪಯೋಗ ಮಾಡಿದ್ದೇವೆ. ಪ್ರತಿಯೊಂದು ಗ್ರಾಮ ಸಡಕ್ ಯೋಜನೆಗೂ ನಿಯಮಗಳಿವೆ. ಆ ನಿಯಮಗಳ್ನನು ಬಿಟ್ಟು ನಾವು ಬೇರೆ ರಸ್ತೆಗಳನ್ನೇನೂ ಅಭಿವೃದ್ಧಿ ಮಾಡಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ ಇನ್ನೂ ನೂರಾರು ಕೋಟಿ ರೂಪಾಯಿಗಳ ಹಣ ಬಳಕೆಯಾಗದೆ ಹಾಗೆಯೇ ಉಳಿದಿದೆ. ಕೇಂದ್ರದಿಂದ ಎಷ್ಟು ಹಣ ಬಂದಿದೆ? ಎಷ್ಟು ಬಳಸಿದ್ದೀರಿ ಎಂದು ಹೇಳಿ ಬಿಡಿ?

ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ವ್ಯವಹಾರಗಳು ಹಾಗೂ ಕಾನೂನು ಸಚಿವರು) : 266 ಕೋಟಿ ರೂಪಾಯಿ ಹಣ ಬಂದಿದೆ. ಅದನ್ನು ಅಷ್ಟೂ ಬಳಕೆ ಮಾಡಿದ್ದೇವೆ. ಸದರಿ ಯೋಜನೆ ಅಡಿಯಲ್ಲಿ ಮೂರನೆ ಹಂತದ ಯೋಜನೆಗಾಗಿ 118.4 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದು 1096 ಕಿಲೋ ಮೀಟರ್ ರಸ್ತೆಯನ್ನು ಸರ್ವ ಋತು ರಸ್ತೆಯನ್ನಾಗಿ ಮೇಲ್ದರ್ಜೆಗೆ

ಏರಿಸುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ನಬಾರ್ಡ್ ಸಂಸ್ಥೆಯ ನೆರವಿನಡಿ ಗ್ರಾಮೀಣ ರಸ್ತೆ ಸುಧಾರಣೆಗಾಗಿ ಆರ್‌ಎಫ್‌ಡಿ 8ರ ಅಡಿಯಲ್ಲಿ ಸುಮಾರು 88.31 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 1220 ಕಿಲೋ ಮೀಟರ್ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ತೆಗೆದುಕೊಂಡಿದ್ದೇವೆ. ನಬಾರ್ಡ್ ಸಂಸ್ಥೆಯ ನೆರವಿನಡಿಯಲ್ಲಿ ಗ್ರಾಮೀಣ ರಸ್ತೆ ಸುಧಾರಣೆ ಆರ್‌ಐಡಿಎಫ್ 9ರ ಅಡಿಯಲ್ಲಿ 94.11 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ 1484 ಕಿಲೋ ಮೀಟರ್ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶ ಮಾಡಿದ್ದೇವೆ. ಈ ವರ್ಷ ಮಾರ್ಚ್ ಅಂತ್ಯದೊಳಗೆ ಮುಖ್ಯಮಂತ್ರಿಗಳ ಅಭಿವೃದ್ಧಿ ನಿಧಿ ಎಂದರೇನು ಹೇಳಿದ್ದೇವೆ ಅದಕ್ಕಾಗಿ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಆರ್. ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) : ಪ್ರಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಸಿ.ಎಂ. ರೋಡ್ ಫಂಡ್ ಏನು ಇದೆಯಲ್ಲಾ, ಅದಕ್ಕಾಗಿ ನಿನ್ನೆ ನಾವು 40 ಕೋಟಿ ರೂಪಾಯಿಯನ್ನು ಪ್ರತಿ ಅಸೆಂಬ್ಲಿ ಕ್ಷೇತ್ರಕ್ಕೆ 20–20 ಲಕ್ಷ ರೂ ಬಿಡುಗಡೆ ಮಾಡಿದ್ದೇವೆ. ಬೇಕಾದರೆ ಗವರ್ನಮೆಂಟ್ ಆರ್ಡರ್ ಕೂಡ ತಮಗೆ ಕೊಡುತ್ತೇನೆ. ಎಲ್ಲಾ ಕಡೆ ಹೋಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದುಡ್ಡು ಬಂದಿಲ್ಲ.

ಶ್ರೀ ಆರ್. ಧರ್ಮಸಿಂಗ್ : ಮುಖ್ಯಮಂತ್ರಿಗಳ ರಸ್ತೆ ನಿಧಿ ಏನು ಇದೆಯಲ್ಲಾ ಅದರ ಪ್ರಕಾರ 40 ಕೋಟಿ ರೂಪಾಯಿ ಮೊನ್ನೆ ಬಿಡುಗಡೆ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ದುಡ್ಡೇ ಬಂದಿಲ್ಲ.

ಮಾನ್ಯ ಸದಸ್ಯರು : ಬಂದಿದೆ ಸಾರ್.

ಶ್ರೀ ಆರ್. ಧರ್ಮಸಿಂಗ್ : ಪ್ರತಿ ತಾಲ್ಲೂಕಿಗೆ 20 ಲಕ್ಷ ರೂ ಬಿಡುಗಡೆ ಮಾಡಿದ್ದೇವೆ.

(ಗೊಂದಲ)

ಶ್ರೀ ಆರ್. ಧರ್ಮಸಿಂಗ್ : ಬೇಕಾದರೆ ಸರ್ಕ್ಯುಲರ್ ನಾಳೆ ನಿಮಗೆ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮಗೆ ಸರ್ಕ್ಯುಲರ್ ಬೇಡ, ದುಡ್ಡು ಕೊಡಿ.

ಶ್ರೀ ಆರ್. ಧರ್ಮಸಿಂಗ್ : ದುಡ್ಡು ಕೊಟ್ಟಾಗಿದೆ, ನಿಮ್ಮ ಕೈಗೆ ಕೊಡುವುದಕ್ಕೆ ಬರುವುದಿಲ್ಲ.

Sri D.B. Chandre Gowda : Proceedings of the Government of Karnataka, guidelines for the implementation of the Chief Minister Grameena Rastha Abhivridhi Nidhi.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ಇದೇನು ಕನ್ನಡವಾ?

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರಿ ಆಜ್ಞೆ ನಂಬರ್.

ಶ್ರೀ ಎಸ್.ಎಸ್. ಪಾಟೀಲ್ : ಇಂಗ್ಲೀಷ್‌ನಲ್ಲಿ ಆರ್ಡರ್ ಮಾಡುತ್ತಾರೆ. ಕನ್ನಡದ ಬಗ್ಗೆ ಅಭಿಮಾನ ಇಟ್ಟು ಇಂಗ್ಲೀಷ್‌ನಲ್ಲಿ ಓದುತ್ತಾರೆ. ಎಲ್ಲಾ ಕನ್ನಡ ಕನ್ನಡ ಎಂದು ರಾಜ್ಯಪಾಲರ ಭಾಷಣದಲ್ಲಿ ಓದಿದ್ದೀರಿ. ಎಲ್ಲಾ ಕನ್ನಡ ಸಂಪೂರ್ಣವಾಗಿ ಆಡಳಿತ ಭಾಷೆ ಎಂದು ಮಾಡಿ ಇಂಗ್ಲೀಷ್‌ನಲ್ಲಿ ಇಲ್ಲಿ ಓದುತ್ತೀರಿ. ಇಂಗ್ಲೀಷ್‌ನಲ್ಲಿ ನಿಮ್ಮ ಆಡಳಿತ ವ್ಯವಹಾರವೆಲ್ಲಾ ನಡೆದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಮುಖ್ಯಮಂತ್ರಿಗಳು 2003–04ನೇ ಸಾಲಿನಲ್ಲಿ ಒಂದು ಡೆಡಿಕೇಟೆಡ್ ರೋಡ್ ಫಂಡ್ ಎಂದು ಹೇಳಿ ಏನು ಅನೌನ್ಸ್ ಮಾಡಿದ್ದರೋ ಸರ್ಕಾರೀ

ಆಜ್ಞೆ ನಂಬರ್ ಪಿಡಬ್ಲ್ಯುಡಿ 4 ಸಿಆರ್‌ಎಂ 2004, ಬೆಂಗಳೂರು 14.01.2004ರಲ್ಲಿ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಪ್ರತಿ ತಾಲ್ಲೂಕಿಗೆ ದೊರಕುವಂತೆ ಮಾಡಿದ್ದಾರೆ. 14.01.2004ರ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ......

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮಂತ್ರಿ ಆಗಿದ್ದವರು. ನೀವು ಹೀಗೆ ಮಾತನಾಡಿದರೆ ನಾನೇನು ಹೇಳಲಿ? ನೀವು ಮಂತ್ರಿಗಳೇ ಆದವರು ಹೀಗೆ ಮಾತನಾಡಿದರೆ ಹೇಗೆ?

ಅಧ್ಯಕ್ಷರು : ಮಧ್ಯೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ 9 ಗಂಟೆಯೂ ಆಗುತ್ತದೆ, ಹತ್ತು ಗಂಟೆಯೂ ಆಗಬಹುದು ಹೇಳುವುದಕ್ಕೆ ಆಗುವುದಿಲ್ಲ. ಅವರು ಪೂರಾ ಮುಗಿಸಲಿ, ಸುಮ್ಮನಿರಿ.

ಶ್ರೀ ಎಸ್.ಎಸ್. ಪಾಟೀಲ್ : ತಪ್ಪು ಉತ್ತರ ಕೊಟ್ಟು ಸುಮ್ಮನೇ ಕುಳಿತರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ : ಎಲ್ಲಿ ತಪ್ಪು ಇದೆ ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಪೂರ್ತಿ ಮುಗಿಸಿದ ಮೇಲೆ ಮತ್ತೆ ಕೇಳಲು ಟೈಮ್ ಇರುವುದಿಲ್ಲ. ಟೈಮ್ ಆಗಿದೆ ಎಂದು ಪ್ರಶ್ನೆ ಕೇಳಲು ಆಗದೇ ನೀವು ಮುಚ್ಚಿ ಬಿಡುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅಲ್ಲ ಸ್ವಾಮಿ, ಸರ್ಕಾರಿ ಆಜ್ಞೆ ಆಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ನಡುವೆ ನಾವು ಪ್ರಶ್ನೆ ಕೇಳುತ್ತೇವೆ. ಹಾಗೆಯೇ ಅವರು ಏನು ಹೇಳುತ್ತಾರೆ, ಪ್ರಶ್ನೆ ಉತ್ತರ ಮುಗಿದು ಹೋಗಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರೀ ಆಜ್ಞೆ ಅದರ ನಕಲು ಓದಿದರೂ ಕೂಡ ನಿಮಗೆ ವಿಶ್ವಾಸ ಇಲ್ಲದಿದ್ದರೆ ನಾವು ಇನ್ನೇನು ಮಾಡುವುದು? ನನಗೆ ಅರ್ಥ ಆಗುತ್ತಿಲ್ಲ. ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ 1300 ಗ್ರಾಮಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು 260 ಕೋಟಿ ರೂಪಾಯಿ ವೆಚ್ಚ ಈಗಾಗಲೇ ಮಾಡಿದ್ದೇವೆ. ಪೂರ್ಣಗೊಳಿಸಿದ್ದೇವೆ. ಪ್ರಸ್ತುತ ವರ್ಷದಲ್ಲಿ ಗ್ರಾಮೀಣ ಪ್ರದೇಶದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಪ್ರತಿ ಗ್ರಾಮಕ್ಕೆ 10 ಲಕ್ಷ ರೂಪಾಯಿಗಳಂತೆ ಒಂದು ಸಾವಿರ ಗ್ರಾಮಗಳನ್ನು ಮತ್ತೆ ಕೈಗೆತ್ತಿಕೊಂಡು 2004-05ನೇ ಸಾಲಿನಲ್ಲಿ ಹೊಸ ಕಾರ್ಯಕ್ರಮಗಳನ್ನು ಸ್ವಚ್ಛ ಗ್ರಾಮಕ್ಕೆ ಹಾಕಿಕೊಂಡಿದ್ದೇವೆ. ಅದರಿಂದ ಈ ಗ್ರಾಮೀಣ ಅಭಿವೃದ್ಧಿಯಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ 4 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಎರಡೂ ಸೇರಿ 879.55 ಕೋಟಿ ರೂಪಾಯಿಯನ್ನು ಕುಡಿಯುವ ನೀರಿನ ಬಾಬ್ತು ಒಂದಕ್ಕೇ ಖರ್ಚು ಮಾಡಿದ್ದೇವೆ. ವಿದೇಶಿ ನೆರವಿನ ಯೋಜನೆಯಡಿ 218.73 ಕೋಟಿ ರೂಪಾಯಿ ವೆಚ್ಚದಲ್ಲಿ 476 ಯೋಜನೆಗಳನ್ನು ಕಾರ್ಯಗತಗೊಳಿಸಿದ್ದೇವೆ. ನಿಮಗೆ ಡೀಟೈಲ್ಸ್ ಇಲ್ಲಿದೆ ಕೊಡುತ್ತೇನೆ. ಈ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆ ಬಂದಿತ್ತು. ಆ ಸಮಸ್ಯೆಗಾಗಿ ಸುಮಾರು ಸುರಕ್ಷಿತ ಕುಡಿಯುವ ನೀರಿನ ಯೋಜನೆಗಾಗಿ 118.98 ಕೋಟಿ ರೂಪಾಯಿ ಅಂದಾಜಿನಲ್ಲಿ 50 ಯೋಜನೆಗಳನ್ನು ಕೈಗೆತ್ತಿಕೊಂಡು ಈಗಾಗಲೇ 9 ಯೋಜನೆಗಳು ಪೂರ್ಣವಾಗಿದ್ದಾವೆ. ಡೀಫ್ಲೋರೈಡ್ ಮಾಡುವುದು, ಅದಕ್ಕೆ ಕನ್ನಡ ಶಬ್ದ ಹುಡುಕಿದೆ ಅದು ಬರುತ್ತಿಲ್ಲ. ಡೀಫ್ಲೋರೈಡ್ ಘಟಕಗಳು ಸುಮಾರು 50 ಸಾವಿರ ಕೌಟುಂಬಿಕ ಡೀಫ್ಲೋರೈಡ್ ಫಿಲ್ಟರ್‌ಗಳನ್ನು ಒದಗಿಸಲು ಕ್ರಮ ತೆಗೆದುಕೊಂಡಿದ್ದೇವೆ. ರಾಜ್ಯ ಸರ್ಕಾರದಿಂದ ಸುಮಾರು 34,562 ಜನವಸತಿಗಳನ್ನು ಈ ಕುಡಿಯುವ ನೀರಿನ ವ್ಯವಸ್ಥೆಗೆ

ಅಳವಡಿಸಿಕೊಂಡಿದ್ದೇವೆ. ಉಳಿದ 22,120 ಜನ ವಸತಿಗಳಿಗೂ ಸಹ ಈ ವ್ಯವಸ್ಥೆಯ ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ದೊರಕುತ್ತದೆ. 3268ಕ್ಕೂ ಹೆಚ್ಚಿನ ಕೊಳವೆ ಬಾವಿಗಳನ್ನು ಹೈಡ್ರೋ ಫ್ರಾಕ್ಚರ್‌ನಿಂದ ಶುಚಿಗೊಳಿಸಿರುವುದು ಒಂದು, ಹಾಗೂ ಅದನ್ನು ಪುನಶ್ಚೇತಗೊಳಿಸಲು ಕ್ರಮ ತೆಗೆದುಕೊಂಡಿದ್ದೇವೆ. ಇವುಗಳಲ್ಲಿ ಶೇಕಡಾ 89ರಷ್ಟು ಪುನಶ್ಚೇತನ ಆಗಿದೆ. ನಮ್ಮ ಹತ್ತಿರ ಇರುವ ವರದಿ ನಿಮಗೆ ಕೊಡುತ್ತಿದ್ದೇನೆ. ಯಶಸ್ವಿ ಆಗಿರತಕ್ಕಂಥದ್ದು. 260 ಕೋಟಿ ರೂಪಾಯಿ ಅಂದಾಜಿನಲ್ಲಿ 1300 ಗ್ರಾಮಗಳಲ್ಲಿ ಪಂಚಸೂತ್ರ ಆಧಾರಿತ ಗ್ರಾಮೀಣ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯಲ್ಲಿ ಸ್ವಚ್ಛ ಗ್ರಾಮ ಯೋಜನೆಯನ್ನು ಯಶಸ್ವಿಯಾಗಿ ಮುಗಿಸುತ್ತಿದ್ದೇವೆ. ಈಗ ಕುಡಿಯುವ ನೀರಿನಲ್ಲಿ ಕೆಲವು ತೊಂದರೆಗಳನ್ನು ನಮ್ಮ ಮಾನ್ಯ ಸಿಂಧ್ಯಾರವರು ಹಾಗೂ ಮತ್ತಿತರ ಮಿತ್ರರು ಪ್ರಸ್ತಾಪ ಮಾಡಿದರು. ಸಮಸ್ಯೆಗಳು ಏನು ಇದ್ದಾವೆ ಎಂದು ಪ್ರಸ್ತಾಪ ಮಾಡಿದರು. ಬಹಳ ಮುಖ್ಯವಾಗಿ ನಮ್ಮ ಕುಡಿಯುವ ನಿರಿನ ಯೋಜನೆಯಲ್ಲಿ ಹೆಚ್ಚು ಕಡಿಮೆ ಶೇಕಡಾ 95ರಷ್ಟು ಗ್ರಾಮೀಣ ಪ್ರದೇಶದಲ್ಲಿರತಕ್ಕ ಕುಡಿಯುವ ನೀರಿನ ಯೋಜನೆಗಳು ಅಂತರ್ಜಲವನ್ನೇ ಅವಲಂಬಿಸಿದ್ದಾವೆ. 3 ವರ್ಷಗಳ ಸತತ ಬರಗಾಲದಿಂದ ಅಂತರ್ಜಲ ಕೆಳಗೆ ಹೋಗಿರುವುದನ್ನು ಸಾಕಷ್ಟು ಸಾರಿ ಬರ ವಿಚಾರದಲ್ಲಿ ಚರ್ಚೆ ಮಾಡಿದ್ದೇವೆ. ಬೇರೆ ಬೇರೆ ರೂಪದಲ್ಲಿ ಚರ್ಚೆ ಮಾಡಿದ್ದೇವೆ. ಈ ವರ್ಷ ಸುಮಾರು 7175 ಗ್ರಾಮೀಣ ಜನ ವಸತಿಗಳು ಕುಡಿಯುವ ನೀರಿನ ಸಮಸ್ಯೆಗೆ ಒಳಗಾಗಬಹುದು ಎನ್ನತಕ್ಕಂಥ ಒಂದು ಅಂದಾಜನ್ನೂ ಕೂಡ ತರಿಸಿಟ್ಟುಕೊಂಡಿದ್ದೇವೆ. ಈಗಾಗಲೇ 1353 ಕೊಳವೆ ನೀರು ಸರಬರಾಜು ಯೋಜನೆಗಳು 1995 ಕಿರು ಸರಬರಾಜು ಯೋಜನೆಗಳು ಮತ್ತು 5835 ಬೋರ್‌ಗಳು ಕೂಡ ಬಾಧಿತವಾಗಿದ್ದಾವೆ ಎನ್ನತಕ್ಕದ್ದನ್ನು ಗುರುತು ಹಾಕಿಕೊಂಡಿದ್ದೇವೆ. ಮೇಲಾಗಿ ಈ ಕುಡಿಯುವ ನೀರಿನ ಯೋಜನೆ ಕೆಳಗೆ ಹೋಯಿತು ಎಂದು ಹೇಳಿ ಈ ರಾಜ್ಯದಲ್ಲಿ ನಾಲ್ಕು ವರ್ಷದಿಂದ ಸತತ ಬರಗಾಲದಲ್ಲಿ ಕೂಡ ಕುಡಿಯುವ ನೀರಿಗಾಗಿ, ಹೊಟ್ಟೆಗೆ ಅನ್ನ ಇಲ್ಲದೇ ಯಾರೂ ಸತ್ತಿಲ್ಲ. ಅದಕ್ಕಾಗಿ ನಾವು ಬೆನ್ನು ಚಪ್ಪರಿಸಿಕೊಳ್ಳಬೇಕು, – ಎಂದಲ್ಲ. ಇದನ್ನು ಎಲ್ಲರು ಸೇರಿ ಮಾಡಿದ್ದೇವೆ. ಹೊಟ್ಟೆಗೆ ಅನ್ನ ಇಲ್ಲದೇ ಸತ್ತಿರುವವರಾಗಲೀ ಕುಡಿಯುವ ನೀರಿಲ್ಲದೇ ಸೊರಗಿರತಕ್ಕಂಥ ಯಾವುದೇ ಪ್ರಸಂಗಗಳು ನಮ್ಮ ಗಮನಕ್ಕೆ ಬಂದಿಲ್ಲ. ಆದರೂ ಕೂಡ ಕೆಲವು ಪ್ರಯತ್ನ ಆಗಿದೆ. ಇವೆಲ್ಲ ಪ್ರಯತ್ನಗಳಿಂದ ಸಾಧ್ಯವಾಗದೇ ಇರತಕ್ಕದ್ದನ್ನು ಈ 133 ಹಳ್ಳಿಗಳಿಗೆ ಸಾಗಾಣಿಕೆಯ ಮೂಲಕ ನೀರು ಪೂರೈಕೆ ಮಾಡತಕ್ಕಂಥದ್ದು ಎಲ್ಲರ ಗಮನಕ್ಕೂ ಬಂದಿರಬೇಕು ಎಂದು ನಾನು ಭಾವನೆ ಮಾಡುತ್ತಿದ್ದೇನೆ. ಮೇಲಾಗಿ ಸುಮಾರು 180 ಕೋಟಿ ರೂಪಾಯಿಯ ಅಂದಾಜಿನ ತುರ್ತು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಈಗ ಕೆಲವು ಬೋರ್‌ವೆಲ್‌ಗಳನ್ನು ತೆಗೆಯುವುದಕ್ಕೆ ಬಹಳ ತೊಂದರೆ ಇದೆ ಎನ್ನತಕ್ಕದ್ದಕ್ಕೆ ನಾನು ಬರ ಪರಿಹಾರ ಕಾಮಗಾರಿಗಳನ್ನು ಹೇಳುವಾಗ ಕೆಲವು ಮಾಹಿತಿಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಅಂಟಿಕೊಂಡಿರತಕ್ಕದ್ದು ಬರ ಪರಿಸ್ಥಿತಿ. ಈ ಬರ ಪರಿಸ್ಥಿತಿಯಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಬಹಳ ಮುಖ್ಯವಾದಂತಹದು ಮೊದಲನೆಯ ಪ್ರಕರಣವೇ ತಾವೇನು ಹೇಳುತ್ತಿದ್ದೀರಿ, ಕೊಳವೆ ಬಾವಿ ತೆಗೆಯುವುದಕ್ಕೆ ಅನುಮತಿ ಕೇಂದ್ರ ಸರ್ಕಾರ ಕೊಡುತ್ತಿಲ್ಲ. ಸಿಆರ್‌ಎಫ್ ಫಂಡ್‌ನಿಂದ ಕೊಳವೆ ಬಾವಿಗಳನ್ನು ತೆಗೆಯತಕ್ಕಂಥದ್ದು ಅಸಾಧ್ಯ ಅಥವಾ ಕೇಂದ್ರ ಸರ್ಕಾರಕ್ಕೆ ಅದಕ್ಕೆ ಮಿತಿ ಇದೆ. ಅಥವಾ ಅದನ್ನು ಮಾಡಬಾರದು ಎನ್ನುವ

ಆದೇಶ ಇದೆ ಎನ್ನುವ ಕಾರಣಕ್ಕಾಗಿ ನಾವು ಮಿನಿಮಮ್ ನೀಡ್ಸ್ ಕಾರ್ಯಕ್ರಮದಿಂದ ಕೊಳವೆ ಬಾವಿಗಳನ್ನು ತೆಗೆಯತಕ್ಕ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿರತಕ್ಕಂಥದ್ದು. ಜೊತೆಗೆ ಕೇಂದ್ರ ಸರ್ಕಾರಕ್ಕೆ ಕೆಲವು ಪ್ರಕರಣದಲ್ಲಿ ಆದರೂ ಹೊಸ ಕೊಳವೆ ಬಾವಿಗಳ ಅವಶ್ಯಕತೆ ಇರುವುದರಿಂದ ನೀವು ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ಅನುಮತಿ ಕೊಡಿ ಎಂದು ಹೇಳಿ, ಕೇಂದ್ರ ಸರ್ಕಾರ ಪರಿಶೀಲಿಸಬೇಕು ಎಂದು ಹೇಳಿ ನಾವು ಈಗಾಗಲೇ ಪತ್ರವನ್ನು ಬರೆದಿದ್ದೇವೆ. ಹಾಗೆನೇ ಬೇರೆ ವಿಚಾರ ಹೇಳುವುದಕ್ಕೆ ಮುಂಚೆ ಸತತವಾಗಿ ನಾಲ್ಕು ವರ್ಷಗಳ ಈ ಬರಪರಿಹಾರಕ್ಕೆ ಸಾಕಷ್ಟು ಬಾರಿ ನಮ್ಮ ಬರ ಪರಿಹಾರ ಕಾಮಗಾರಿಯ ಉಪ ಸಮಿತಿಯ ಅಧ್ಯಕ್ಷರಾಗಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಈ ಸದನದಲ್ಲಿ ಅನೇಕ ರೀತಿಯ, ಅನೇಕ ವಿಧವಾದಂತಹ, ತಾವು ಮಾಡಿದ ಪ್ರಯತ್ನಗಳನ್ನು ಸದನದ ಮುಂದೆ ಇಟ್ಟಿದ್ದಾರೆ.

7.50 ಪಿಎಂ

ರಾಜ್ಯದಲ್ಲಿ ಮಳೆ ಪರಿಸ್ಥಿತಿ 2001, 2002 ಮತ್ತು 2003ರಲ್ಲಿ ಕಳೆದ 33 ವರ್ಷಗಳ ಮಳೆಯ ಪರಿಸ್ಥಿತಿಗೆ ಹೋಲಿಸಿದರೆ ಸಾಮಾನ್ಯ ಮಳೆಗಿಂತ ಕಡಿಮೆ ಮಳೆ ಬಂದಿದೆ. ಕಳೆದ 33 ವರ್ಷಗಳ ಹೋಲಿಕೆ ತೆಗೆದುಕೊಂಡರೆ ಸತತವಾಗಿ ಮೂರು ವರ್ಷಗಳ ಕಾಲ ಮಳೆಯ ಪ್ರಮಾಣ ಕಡಿಮೆ ಆಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ಅಧಿಕಾರಕ್ಕೆ ಬಂದಮೇಲೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆಗಬಹುದು. ನಾವು ಅಧಿಕಾರಕ್ಕೆ ಬಂದಮೇಲೆಯೇ, ಬಹಳ ಒಳ್ಳೆಯ ಮಾತು ತಾವು ಹೇಳಿದಿರಿ. ಆದರೂ, ಆದರೂ ಯಾರಿಗೂ ಕುಡಿಯುವ ನೀರಿಲ್ಲ ಎಂದು ಇದುವರೆವಿಗೂ ಹೇಳಿಲ್ಲ. ಈ ಮೂರು ವರ್ಷಗಳಲ್ಲೂ ಯಾರೂ ಹೊಟ್ಟೆಗೆ ಅನ್ನ ಇಲ್ಲ ಎಂದು ಹೇಳಿಕೊಂಡು ಸತ್ತಿಲ್ಲ. ಸಾಲವನ್ನು ಮಾಡಿ ಸತ್ತಿರಬಹುದು, ಆ ಮಾತು ಬೇರೆ. ಆದರೆ ಹೊಟ್ಟೆಗೆ ಅನ್ನವಿಲ್ಲದೇ ಸತ್ತಂತ ಒಂದು ಉದಾಹರಣೆಯನ್ನೂ ಕೂಡ ನಾವೂ, ನೀವೂ ನೋಡಿಲ್ಲ. 2002–03ನೇ ಸಾಲಿನಲ್ಲಿ ರಾಜ್ಯದ 27 ಜಿಲ್ಲೆಗಳಲ್ಲಿ ಸತತವಾಗಿ ಸಾಮಾನ್ಯ ಮಳೆಗಿಂತ ಕಡಿಮೆ ಮಳೆ ಬಂದಿದೆ. 17 ಜಿಲ್ಲೆಗಳಲ್ಲಿ ಸತತವಾಗಿ ಮೂರು ವರ್ಷಗಳಿಂದ, 6 ಜಿಲ್ಲೆಗಳಲ್ಲಿ ಸತತವಾಗಿ ಕಳೆದ ನಾಲ್ಕು ವರ್ಷಗಳಿಂದ, 5 ಜಿಲ್ಲೆಗಳು ಸತತವಾಗಿ ಐದು ವರ್ಷಗಳಿಂದ ಸಾಮಾನ್ಯ ಮಳೆಗಿಂತ ಕಡಿಮೆ ಮಳೆಯಾಗಿದೆ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ಜನರ ಕಷ್ಟ–ಸುಖಗಳಿಗೆ ಸರ್ಕಾರ ಸ್ಪಂದಿಸಿದೆ ಎಂದು ಹೇಳಿದರೆ ಅದನ್ನೂ ನೀವು ಉಡಾಫೆ ಮಾತು ಎಂದು ನಾನು ನಿಮಗೆ ಏನು ಹೇಳಲಿ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಉಡಾಫೆ ಎಂದು ನಾವು ಹೇಳಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಇದುವರೆಗೂ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಹೇಳಿದೆ. ಇನ್ನು ತಾಲ್ಲುಕುವಾರು ಹೇಳುವುದಾದರೆ ರಾಜ್ಯದ 176 ತಾಲ್ಲೂಕುಗಳಲ್ಲಿ 2001ನೇ ಸಾಲಿನಲ್ಲಿ 154 ತಾಲ್ಲೂಕುಗಳಲ್ಲಿ, 2002ರಲ್ಲಿ 159 ತಾಲ್ಲೂಕುಗಳಲ್ಲಿ, 2003–04ನೇ ಸಾಲಿನಲ್ಲಿ ಇದುವರೆಗೆ 155 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳು ಎಂದು ನಾವು ಘೋಷಣೆಯನ್ನು ಮಾಡಿದ್ದೇವೆ. ಈ ರೀತಿಯ ಘೋಷಣೆಯನ್ನು ಮಾಡಿ ರಾಜ್ಯ ಸರ್ಕಾರ ಮೊದಲು ಮಾಡಿದ ಕೆಲಸವೇನು ಎಂದರೆ ಆಡಳಿತಾತ್ಮಕ ವ್ಯವಸ್ಥೆಯನ್ನು ಮೊದಲು ಮಾಡಬೇಕೆಂದು ಹೇಳಿ ಶ್ರೀಮಾನ್ ಖರ್ಗೆಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಯಿತು. ಈ ಸಮಿತಿ ಕಳೆದ ಒಂದೂವರೆ ಅಥವಾ ಎರಡು

ವರ್ಷಗಳಲ್ಲಿ 27 ಬಾರಿ ಸಭೆ ಸೇರಿದೆ, ಪ್ರತಿ ವಾರ ಮಾನಿಟರಿಂಗ್ ಮಾಡಿದ್ದೇವೆ. ರಾಜ್ಯ ಮಟ್ಟದಲ್ಲಿ ಸಮಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ, ತಾಲ್ಲೂಕು ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಯ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ ಬರಪರಿಹಾರ ಕಾಮಗಾರಿಯನ್ನು ನಾವು ಮಾನಿಟರಿಂಗ್ ಮಾಡುತ್ತಾ ಬಂದಿದ್ದೇವೆ. ಅದರಲ್ಲಿ ಮಾಡಿರತಕ್ಕಂಥ ಬಹಳ ಮುಖ್ಯವಾದ ಕೆಲಸವೇನು ಎಂದರೆ ಪರ್ಯಾಯ ಕೃಷಿ ಬೆಳೆ ಯೋಜನೆಯನ್ನು ಹಮ್ಮಿಕೊಳ್ಳತಕ್ಕಂಥದ್ದರ ಬಗ್ಗೆ ಸಲಹೆ, ಮಾರ್ಗದರ್ಶನವನ್ನು ನಾವು ಕೊಟ್ಟಿದ್ದೇವೆ. ಬರಪೀಡಿತ ತಾಲ್ಲೂಕುಗಳಲ್ಲಿ ಸಿ.ಆರ್.ಎಫ್ ಮತ್ತು ಎನ್.ಸಿ.ಸಿ.ಎಫ್. ಅನುದಾನ ಮತ್ತು ಆಹಾರ ಧಾನ್ಯಗಳ ಬಳಕೆ ಹಾಗೂ ಭೂ ಕಂದಾಯ ಮನ್ನಾ, ಸಾಲ ವಸೂಲಿ ತಡೆ, ಇವುಗಳು ಇದುವರೆವಿಗೂ ನಡೆದಿರತಕ್ಕಂಥ ಕಾಮಗಾರಿಗಳು; ನಾನು ಮೊದಲೇ ಹೇಳಿದ ಹಾಗೆ ಬರ ಪರಿಸ್ಥಿತಿಯನ್ನು ಅವಲೋಕಿಸುವುದಕ್ಕಾಗಿ ಗೃಹ ಸಚಿವರು ಮತ್ತು ಸಣ್ಣ ನೀರಾವರಿ ಸಚಿವರ ಅಧ್ಯಕ್ಷತೆಯಲ್ಲಿ ಸಂಪುಟದ ಸಮಿತಿಯನ್ನು ನಾವು ಏನು ರಚನೆ ಮಾಡಿದ್ದೇವೆ ಅದು 27 ಬಾರಿ ಸಭೆ ಸೇರಿ ಪರಿಸ್ಥಿತಿಯು ಅವಲೋಕನವನ್ನು ಮಾಡಿದ್ದಾರೆ. ರಾಷ್ಟ್ರೀಯ ವಿಪತ್ತು ನಿಧಿಯಿಂದ ಬರತಕ್ಕಂಥ ಹಣ ಕೇಂದ್ರ ಸರ್ಕಾರದಿಂದ ಶೇಕಡ ನೂರರಷ್ಟು ಕೇಂದ್ರದ್ದು ರಾಜ್ಯದ ಪಾಲು ಇರುವುದಿಲ್ಲ. ವಿಪತ್ತು ಪರಿಹಾರ ನಿಧಿಯಿಂದ ಬರತಕ್ಕಂಥ ಹಣದಲ್ಲಿ ಸಿ.ಆರ್.ಎಫ್.ನಲ್ಲಿ ಶೇಕಡ 75 ಕೇಂದ್ರ ಸರ್ಕಾರದ್ದು, ಶೇಕಡ 25 ರಾಜ್ಯ ಸರ್ಕಾರದ್ದು. ನಾವು ಸುಮಾರು ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ಮಾಡಿರತಕ್ಕಂಥದ್ದು, ಆಹಾರ ಧಾನ್ಯಗಳ ಬಳಕೆ ಮೂಲಕ ಉದ್ಯೋಗ ಸೃಜನೆಗಾಗಿ ರಾಜ್ಯದ ಆಯವ್ಯಯದ ಸಂಪನ್ಮೂಲದಿಂದ ನಗದು ಹಣವನ್ನು ಅದರ ಜೊತೆಗೆ ಮ್ಯಾಚಿಂಗ್ ಗ್ರ್ಯಾಂಟ್‌ನ್ನು ಕೊಟ್ಟು ರಚನೆ ಮಾಡತಕ್ಕಂಥದ್ದು, ಜಲದ ಸಂರಕ್ಷಣೆ ಹಾಗೂ ಜಲಾನಯನ ಅಭಿವೃದ್ಧಿಗಾಗಿ ಮತ್ತು ಉದ್ಯೋಗ ಸೃಜನೆ ಕಾರ್ಯಕ್ರಮದಡಿಯಲ್ಲಿ ಆದ್ಯತೆಯನ್ನು ಕೊಟ್ಟು ಕೆಲಸವನ್ನು ಮಾಡಿದ್ದೇವೆ. ಮೇವು ಗಳಿಸುವಿಕೆ ಮತ್ತು ಮೇವಿನ ಆಮದು ಹಾಗೂ ಜಿಲ್ಲೆ ಹಾಗೂ ಅಂತರ್‌ಜಿಲ್ಲೆಯ ಮೇಲಿದ್ದ ನಿರ್ಬಂಧಗಳನ್ನು ಸಡಿಲಿಸಿ ಮೇವನ್ನು ತರುವುದಕ್ಕೆ ಮುಕ್ತವಾದಂಥ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಗೋಶಾಲಿ ಮತ್ತು ಮೇವು ಬ್ಯಾಂಕ್‌ಗಳನ್ನು ತೆಗೆಯುವುದು, ಕುಡಿಯುವ ನೀರಿನ ಸಾಗಾಣಿಕೆಯನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮಾಡತಕ್ಕಂಥದ್ದು, ಖಾಸಗಿ ಕುಡಿಯುವ ನೀರಿನ ಮೂಲವನ್ನು ಸಧ್ಯಕ್ಕೆ ಅದರಲ್ಲಿಯೂ ಕೂಡ ಇರತಕ್ಕಂಥ ನೀರನ್ನು ಸರ್ಕಾರ ಪಡೆದುಕೊಂಡು ಹೆಚ್ಚುವರಿ ನೀರನ್ನು ಬಳಕೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಹೆಚ್ಚು ನೀರೂಣಿಸುವ ಬೆಳೆಗಳನ್ನು ಬೆಳೆಸದಂತೆ ರೈತರಿಗೆ ನಾವು ಮನವಿ ಮಾಡಿಕೊಂಡಿದ್ದೇವೆ. ಎಲ್ಲಾ ಪ್ರಯತ್ನಗಳನ್ನೂ ಮಾಡಲೇಬೇಕಾದ್ದನ್ನು ಮಾಡಿದ್ದೇವೆ. ಇದರ ಜೊತೆಗೆ ಮೋಡ ಬಿತ್ತನೆ ಕಾರ್ಯಕ್ರಮವನ್ನು ಮಾಡಿ ಸುಮಾರು 9 ಚಿಲ್ಲರೆ ಕೋಟಿಯಷ್ಟು ಹಣವನ್ನು ಖರ್ಚು ಮಾಡಿದ್ದೇವೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ದುಡ್ಡು ಎಷ್ಟು ಖರ್ಚಾಯಿತು ಮತ್ತು ಎಷ್ಟು ಮಳೆ ಬಂತು?

ಶ್ರೀ ಡಿ.ಬಿ. ಚಂದ್ರೇಗೌಡ : ಸುಮಾರು ಹತ್ತತ್ತಿರ ಹತ್ತು ಕೋಟಿ ರೂಪಾಯಿಗಳು ಖರ್ಚಾಗಿದೆ. ಮಳೆ ಎಷ್ಟು ಬಂದಿದೆ ಎಂಬುದಕ್ಕೆ ನನ್ನ ಹತ್ತಿರ ದಾಖಲೆಗಳಿಲ್ಲ, ಪ್ರಯತ್ನ ಮಾಡಿದೆ ಸಿಗಲಿಲ್ಲ. ಇನ್ನು ಒಟ್ಟಾರೆ ಖರೀಫ್ ಮತ್ತು ರಬಿ, ಎರಡೂ ಬೆಳೆಗಳ ಮೇಲಿನ ಸಾಲದ ಮೇಲಿನ

ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಸೆಪ್ಟೆಂಬರ್ 2002–03ರಲ್ಲಿ ಮಾನ್ಯ ಸಹಕಾರಿ ಸಚಿವರ ಅಧ್ಯಕ್ಷತೆಯಲ್ಲಿ...

ಶ್ರೀ ಎಸ್.ಎಸ್. ಪಾಟೀಲ್ : ರೈತರಿಗೆ ನೀವು ತುಂಬಿಲ್ಲ. ನೀವು ಎಷ್ಟು ರಿಲೀಸ್ ಮಾಡಿ ತುಂಬಿದ್ದೀರಿ ಹೇಳಿ. ಆ ಅಂಕಿಯನ್ನು ನಮಗೆ ಕೊಡಿ. ಆಮೇಲೆ ನೋಡೋಣ. ಎಷ್ಟು ಜಮಾ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನನಗೂ ಸ್ವಲ್ಪ ಸಮಯ ಬೇಕಲ್ಲವೇ ಹೇಳುವುದಕ್ಕೆ? ನನಗೆ ಒಂದಿಷ್ಟು ಸಮಯ ಕೊಟ್ಟರೆ ಹೇಳುತ್ತೇನೆ. ಒನ್‌ಬೈ ಒನ್ ಹೇಳಿಕೊಂಡು ಬರುತ್ತಿದ್ದೇನೆ. ಇಂಥ ಒಂದು ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಏನು ಮಾಡಬೇಕು. ಏನು ಪ್ಯಾಕೇಜ್ ಇರಬೇಕು, ಹೇಗೆ ನಡೆದುಕೊಳ್ಳಬೇಕು ಎನ್ನುವುದಕ್ಕಾಗಿ ಸಹಕಾರಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಅವರು ಕೊಟ್ಟಂಥ ವರದಿಯ ಮೇಲೆ 880 ಕೋಟಿ ರೂಪಾಯಿಗಳ ಪರಿಹಾರದ ಪ್ಯಾಕೇಜ್‌ನ್ನು ನಾವು ಕೊಟ್ಟಿದ್ದೇವೆ ಎನ್ನುವುದನ್ನಾದರೂ ತಾವು ಒಪ್ಪಿಕೊಳ್ಳುತ್ತೀರೋ? ಆ ಸಮಿತಿಯವರು ಸರ್ಕಾರಕ್ಕೆ ಕೊಟ್ಟಂಥ ವರದಿಯನ್ನಾಧರಿಸಿ ಪ್ಯಾಕೇಜ್ ಮಾಡಲಾಯಿತು. ಜಿಲ್ಲಾವಾರು ವಿವರ ಬೇಕು ಎಂದರೆ ಮುಂದೆ ಕೊಡುತ್ತೇನೆ. ಇನ್ನು ಆತ್ಮಹತ್ಯೆ ಮಾಡಿಕೊಂಡಂಥ ರೈತನ ಕುಟುಂಬಕ್ಕೆ ತಲಾ ಒಂದು ಲಕ್ಷ ರೂಪಾಯಿಯನ್ನು ಕೊಡಬೇಕೆಂದು ನಾವೇನು ಮಾಡಿದ್ದೇವೋ ಅದರಲ್ಲಿ 151 ಪ್ರಕರಣಗಳಲ್ಲಿ ನಾವು ಈಗಾಗಲೇ ವಿತರಣೆಯನ್ನು ಮಾಡಿದ್ದೇವೆ. ಇನ್ನು 24 ಪ್ರಕರಣಗಳಲ್ಲಿ ಬಾಕಿ ಇದೆ ಎಂದು ನನಗೆ ಬಂದಿರತಕ್ಕಂಥ ಮಾಹಿತಿಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಇನ್ನು ಜಾಸ್ತಿ ರೈತರು ಸತ್ತಿದ್ದಾರೆ. ಆದರೆ ನೀವು ಒಂದು ಆದೇಶ ಹೊರಡಿಸಿ ಅದರಲ್ಲಿ ಒಂದು ದಿನಾಂಕ ತಿಳಿಸಿ ಆ ದಿನಾಂಕಕ್ಕೂ ಮೊದಲು ಸತ್ತವನು ಯಾರಿದ್ದನೋ ಅವನ ಕುಟುಂಬಕ್ಕೆ ಮಾತ್ರ ಪರಿಹಾರ ಕೊಟ್ಟಿದ್ದೀರಿ. ಆದರೆ ಎಲ್ಲಾ ರೈತರಿಗೂ ಕೊಟ್ಟಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಪರಿಹಾರವನ್ನು ಕೊಡುವುದಕ್ಕೆ ಮೊದಲು ಅರ್ಹತೆ ಏನು? ಆ ಅರ್ಹತೆ ರೈತ ಕಮರ್ಶಿಯಲ್ ಬ್ಯಾಂಕ್‌ಗಳಿಂದಾಗಲಿ, ಮತ್ತೆ ಇನ್ನ್ಯಾವುದೇ ಬ್ಯಾಂಕ್‌ಗಳಲ್ಲಿ ಸಾಲ ಮಾಡಿರಬೇಕು. ಆ ಸಾಲದ ಬಾಕಿಯಿಂದಲೇ ಅವನು ಸತ್ತಿದ್ದರೆ ಅವನ ಕುಟುಂಬಕ್ಕೆ ಪರಿಹಾರ ಕೊಡಬೇಕು ಎಂದು ಇದೆ. ಸತ್ತವರಿಗೆಲ್ಲರಿಗೂ ಪರಿಹಾರ ಕೊಡಿ ಎಂದರೆ ಹೇಗೆ ಸಾಧ್ಯವಾಗುತ್ತದೆ? ಅರ್ಹರಿದ್ದವರು ಇದ್ದರೆ ಅಂಥವರ ಬಗ್ಗೆ ದಯಮಾಡಿ ತಮ್ಮ ಹತ್ತಿರ ಮಾಹಿತಿ ಇದ್ದರೆ ನಮಗೆ ಕಳುಹಿಸಿಕೊಡಿ. ಖಂಡಿತ ಅದಕ್ಕೆ ಪರಿಹಾರ ಕೊಡಿಸುವುದಕ್ಕೆ ನಾನು ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಒಂದು ಆದೇಶವನ್ನು ಹೊರಡಿಸಿ ಒಂದು ದಿನಾಂಕವನ್ನು ಮೆನ್‌ಶನ್ ಮಾಡಿದ್ದೀರಿ. ಅದರ ಹಿಂದೆ ಸತ್ತಂಥವರಿಗೆ ಇಲ್ಲ ಪರಿಹಾರ ಎನ್ನಲಾಗಿದೆ. ಆದ್ದರಿಂದ ಮೊದಲು ಆ ಆದೇಶದಲ್ಲಿರುವ ದಿನಾಂಕ ಯಾವುದು ಎಂಬ ಬಗ್ಗೆ ನನಗೆ ತಿಳಿಸಿ. ನಾನೂ ಕೂಡ ನೋಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಆ ಆದೇಶದಲ್ಲಿ ಇರುವುದನ್ನು ಓದುತ್ತಿದ್ದಾರೆ ಮತ್ತೇನು ಓದುವುದು? ಅದರಲ್ಲಿ ಏನಿದೆಯೋ ಅದೇ ಖಾಯಂ.

ಶ್ರೀ ಎಸ್.ಎಸ್. ಪಾಟೀಲ್ : ಅದರ ಹಿಂದೆಯೇ ಸತ್ತವರು ಇದ್ದಾರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಯಾವ ಯಾವ ಜಿಲ್ಲೆಯದು ಎಂದು ನನ್ನ ಹತ್ತಿರ ಇದೆ. ಆದೇಶವನ್ನು ತಮಗೆ ಕಳುಹಿಸಿಕೊಡುತ್ತೇನೆ. ಈ ವಿಚಾರ ಈಗ ಏನು ಹೇಳುತ್ತೇನೆ ಆ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ನಾನು ಅಭಿನಂದಿಸಬೇಕು. ನಾವು ಕೇಳಿದಷ್ಟು ಕೊಡದೇ ಇದ್ದರೂ, ನಮಗೆ ಅಗತ್ಯವಿದ್ದಷ್ಟು ಕೊಡದೇ ಇದ್ದರೂ ಕೂಡ ನಮ್ಮ ನೆರವಿಗೆ ಕೇಂದ್ರದವರು ಬಂದಿದ್ದಾರೆ. ಎಷ್ಟರಮಟ್ಟಿಗೆ ನೆರವಿಗೆ ಬಂದಿದ್ದಾರೆಂದರೆ, ರಾಜ್ಯ ಸರ್ಕಾರ ಏನು ಖರ್ಚು ಮಾಡಿದ್ದೀರಿ, ಏನು ಖರ್ಚು ಮಾಡಿದ್ದೀರಿ ಎಂದು ತಾವು ಕೇಳಿದಿರಿ. 764.28 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ತನ್ನ ಸ್ವಂತ ಬಂಡವಾಳದಿಂದ ಖರ್ಚು ಮಾಡಿದೆ. ಕೇಂದ್ರ ಸರ್ಕಾರ ಸುಮಾರು 323.51 ಹಾಗೂ 126.41 ಒಟ್ಟು 1214 ಕೋಟಿ ರೂಪಾಯಿ ಇದುವರೆಗೆ ಬರ ಪರಿಹಾರ ಕಾಮಗಾರಿಗೆ ಒಟ್ಟು ಹಣ ಖರ್ಚಾಗಿರತಕ್ಕಂಥದ್ದು. ನಿಮಗೆ ವಿವರ ಬೇಕು ಎಂದರೆ, 2001 ಆಗಸ್ಟ್‌ನಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದು 903.45 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿದ್ದೆವು. ಹಾಗೂ ಒಂದು ಲಕ್ಷ ಟನ್ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿ ಎಂದು ಕೇಳಿದ್ದೆವು. ಆದರೆ ಅವರು ಬಿಡುಗಡೆ ಮಾಡಿದ್ದು ಒಂದು ಲಕ್ಷ ಟನ್ ಆಹಾರ ಧಾನ್ಯಗಳನ್ನು ಮಾತ್ರ. ರಾಜ್ಯ ಸರ್ಕಾರ ಎನ್.ಸಿ.ಸಿ.ಎಫ್. ಹಾಗೂ ಸಿ.ಆರ್.ಎಫ್. ನ್ನು ಹೊರತುಪಡಿಸಿ ತನ್ನ ಸಂಪನ್ಮೂಲದಿಂದ ಖರ್ಚು ಮಾಡಿದ್ದು 56.28 ಕೋಟಿ ರೂಪಾಯಿಗಳು.

ಶ್ರೀ ಬಿ. ಸೋಮಶೇಖರ್ : ಇದರ ಬಗ್ಗೆ ಪೂರ್ಣ ಮಾಹಿತಿ ಕೊಡಿ. ಈಗ ನಮಗೆ ಕೊಟ್ಟಿರುವುದು ಅಧಿಕೃತ ದಾಖಲೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾಹಿತಿ ಕೊಡುತ್ತೇನೆ. ಈಗ ಕೊಟ್ಟಿರುವುದು ಅಫಿಶಿಯಲ್ ಡಾಕ್ಯುಮೆಂಟ್. ಮಾನ್ಯ ಅಧ್ಯಕ್ಷರಿಗೆ ಕಳುಹಿಸಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಈಗೇನು ತಾವು ಸರ್ಕ್ಯುಲೇಟ್ ಮಾಡಿಸಿದ್ದೀರಲ್ಲಾ ಅದು ಅಫಿಶಿಯಲ್ ಡಾಕ್ಯುಮೆಂಟೇ?

ಅಧ್ಯಕ್ಷರು : ಸಹಿ ಮಾಡಿ ಕೊಟ್ಟಿಲ್ಲವೇನು?

ಶ್ರೀ ಬಿ. ಸೋಮಶೇಖರ್ : ಇದಕ್ಕೆ ಯಾವ ಮಂತ್ರಿಗಳು ಸಹಿ ಮಾಡಿಲ್ಲ, ಅಧಿಕಾರಿಗಳು ಸಹಿ ಮಾಡಿಲ್ಲ. ಯಾರೋ ಟೈಪ್ ಮಾಡಿ ಕೊಟ್ಟಿರುವಂತಿದೆ. How can you take it as an official document? ಮಾನ್ಯ ಅಧ್ಯಕ್ಷರೆ, ಇದು ಬೋಗಸ್ ದಾಖಲೆಯೋ ಅಥವಾ ಇಲ್ಲವೋ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಅಧ್ಯಕ್ಷರು : ಕವರಿಂಗ್ ಲೆಟರ್ ಹಾಕಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ನಾಗಪ್ಪ ಸಹಿ ಮಾಡಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಯಾರು ಸೈನ್ ಮಾಡಿದ್ದಾರೆ? ಎಲ್ಲಿ ಮಾಡಿದ್ದಾರೆ?

ಶ್ರೀ ಡಿ.ಬಿ. ಚಂದ್ರೇಗೌಡ : ಇದೇನೂ ದೊಡ್ಡ ವಿಚಾರ ಅಲ್ಲ.

ಶ್ರೀ ಬಿ. ಸೋಮಶೇಖರ್ : ಇದನ್ನು ಹೇಗೆ ನಾವು ಅಧಿಕೃತವಾಗಿ ತೆಗೆದುಕೊಳ್ಳುವುದಕ್ಕೆ ಆಗುತ್ತದೆ?

Sri D.B. Chandre Gowda :- When it is placed on the table of the House ಅದಕ್ಕಿಂತ ಅಧಿಕೃತ ಯಾವುದು? It is a public document.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಲ್ಲಿಕಾರ್ಜುನ ನಾಗಪ್ಪನವರು ಸಹಿ ಮಾಡಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಎಲ್ಲಿ ಮಾಡಿದ್ದಾರೆ? ಕ್ವೆಶ್ಚನ್ ಅಂಡ್ ಅನ್ಸರ್ ಪ್ಲೇಸ್ ಮಾಡುತ್ತಾರಲ್ಲಾ, ಅದಕ್ಕೆ ಯಾರು ಸೈನ್ ಮಾಡುವುದಿಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಸೈನ್ ಮಾಡಿ ಕಳುಹಿಸಿಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈಗ ತಾವು ರೈತರದ್ದು ಹೇಳಿ. ಅಧಿಕೃತವಾಗಿ ಬಂದಂತಹ ವರದಿಯ ಪ್ರಕಾರ 321 ಜನ ರೈತರು ಸತ್ತಿದ್ದಾರೆ ಎಂದು ಇವತ್ತು ಉತ್ತರ ಕೊಟ್ಟಿರಿ.

ಶ್ರೀ ಡಿ. ಬಿ. ಚಂದ್ರೇಗೌಡ : ಇಲ್ಲ, ಅದಕ್ಕಿಂತ ಹೆಚ್ಚು ಜನ ಎಂದರೆ 598 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ ನೀವು ತಪ್ಪು ಉತ್ತರ ಹೇಳುತ್ತಿದ್ದೀರಿ ಅಂದಹಾಗೆ ಆಯಿತು. ನನಗೆ ಅಧಿಕೃತ ಉತ್ತರ ಬಂದಿದೆ.

Sri. D.B. Chandre Gowda :- This is the latest information as on today.

ಶ್ರೀ ಎಸ್.ಎಸ್. ಪಾಟೀಲ್ : ನಾನು ಲೇಟೆಸ್ಟ್ ಉತ್ತರನೇ ಹೇಳುತ್ತಿದ್ದೇನೆ. ಇವತ್ತು ಬಂದಿದೆ ಉತ್ತರ.

ಶ್ರೀ ಡಿ.ಬಿ. ಚಂದ್ರೇಗೌಡ : ಆಯಿತು, ಅದರ ಮೇಲೆ ಪ್ರಿವಿಲೇಜ್ ಹಾಕಿ.

ಶ್ರೀ ಎಸ್.ಎಸ್. ಪಾಟೀಲ್ : ಲೇಟೆಸ್ಟ್ ಎಂದರೆ ಇವತ್ತು ನನಗೆ ಬಂದಿದೆ. ಮಾನ್ಯ ಅಧ್ಯಕ್ಷರೆ, ಪ್ರಿವಿಲೀಜ್ ಹಾಕಿ ಎಂದು ಹೇಳುತ್ತಾರೆ. ಇನ್ನೇನು ಹೇಳಬೇಕು? ಇವತ್ತು ಬಂದಿದೆ. ಇದು ಮೊಂಡುವಾದ. ಇದನ್ನು ಪ್ರಿವಿಲೇಜ್‌ಗೆ ಹಾಕಿ ಎಂದು ಹೇಳುತ್ತೀರಿ. ಎಂದರೆ ಸದನಕ್ಕೆ ಉತ್ತರ ಕೊಡುವಾಗ ತಪ್ಪು ಉತ್ತರ ಕೊಡುತ್ತೀರಿ. ಮಾನ್ಯ ಅಧ್ಯಕ್ಷರೆ, ತಾವು ನೋಡಬೇಕು ಇದನ್ನು ಕಳುಹಿಸುತ್ತೇನೆ. ತಾವು ನೋಡಿ ಸದನಕ್ಕೆ ತಪ್ಪು ಉತ್ತರ ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮ್ಮ ಪ್ರಶ್ನೆಗೆ ಉತ್ತರ ಬರತಕ್ಕಂಥಾದ್ದು ತಾವು ಯಾವ ಡೇಟ್‌ಗೆ ಪ್ರಶ್ನೆ ಕೊಟ್ಟಿರುತ್ತೀರಿ ಆ ಡೇಟ್‌ಗೆ ಮಧ್ಯದಲ್ಲಿ ಇರತಕ್ಕಂಥ ಇನ್‌ಫರ್ಮೇಷನ್ ಪ್ರಕಾರ ಉತ್ತರ ಬರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಅಂದರೆ ನಾವು ಮೊನ್ನೆ ಕೊಟ್ಟಿದ್ದೇವೆ. ಹಾಗಾದರೆ ನಾಲ್ಕು ದಿವಸದಲ್ಲಿ 200 ಮಂದಿ ಸತ್ತಿದ್ದಾರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಲೇಟೆಸ್ಟ್ ಆಗಿ ಏನಾದರೂ ಇನ್‌ಫರ್ಮೇಷನ್ ಬಂದರೆ, ಅದನ್ನು ಅಡಿಷನಲ್ ಇನ್‌ಫರ್ಮೇಷನ್ ಆಗಿ ಕೊಡುವುದು ತಪ್ಪಾ? As on that date ಏನು ಆನ್ಸರ್ ಅವೇಲ್‌ಬಲ್ ಇತ್ತು ಅದನ್ನು ಕೊಟ್ಟಿದ್ದಾರೆ. ಲೇಟೆಸ್ಟ್ ಇನ್‌ಫರ್ಮೇಷನ್ ಕೊಡುವುದು ತಪ್ಪು ಎಂದರೆ ಬೇಕಾದರೆ ಬಿಟ್ಟು ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತೇನೆ. ತಾವು ಸೀನಿಯರ್ ಇದ್ದೀರಿ, ಇಲ್ಲಿ ನಿಮ್ಮ ಅಧಿಕಾರಿಗಳು ಉತ್ತರ ಕೊಡುತ್ತಾರೆ. ಅದನ್ನು ಇಲ್ಲಿ ಓದುತ್ತೇನೆ. ಇಲ್ಲಿ ನೋಡಿ ದಯವಿಟ್ಟು ದಿ: 19.12.2003 ರವರೆಗೆ 324 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 12ನೇ ತಿಂಗಳವರೆಗೆ ಇದೆ. ದಿ: 19.12 ಎಂದು ಹೇಳುತ್ತೀರಿ. ಉತ್ತರ ಕೊಟ್ಟಿರುವ ದಿನಾಂಕ ದಿ: 9.1.04ಕ್ಕೆ ಅಲ್ಲಿಯವರೆಗೆ ಬಂದಿದ್ದು ಬರೆದುಕೊಂಡಿರುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಫಿಗರ್ಸ್ ತಪ್ಪಿದ್ದರೆ ಸರಿ ಮಾಡಿಕೊಡಬಹುದು.

ಶ್ರೀ ಎಸ್.ಎಸ್. ಪಾಟೀಲ್ : ಏನು ನೀವು ಹಾಗೆ ಹೇಳಿದರೆ?

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಹೇಳಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಶಾಸಕರ ಪ್ರಶ್ನೆಗೆ ನೀವು ಉತ್ತರ ಈ ರೀತಿ ಹೇಳುವುದಾದರೆ ಅದಕ್ಕೆ ಪ್ರಿವಿಲೇಜ್ ಹಾಕಬೇಕಾ? ಅಲ್ಲ, ನಮ್ಮ ಅಧ್ಯಕ್ಷರು ಇದು ಪ್ರಿವಿಲೇಜ್ ಆಗುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದು ಅವರಿಗೆ ಬಿಟ್ಟಿದ್ದು.

ಶ್ರೀ ಎಸ್.ಎಸ್. ಪಾಟೀಲ್ : ಅದು ನಿಮಗೆ ಗೊತ್ತಿದೆ, ಈ ರೀತಿಯಾದರೆ ತಾವು ಇದನ್ನು ನೋಡಬೇಕು. ಇದು ಗಂಭೀರವಾದಂತಹ ಪರಿಸ್ಥಿತಿ. ಈ ಉತ್ತರವನ್ನು ದಿ: 9.1ಕ್ಕೆ ಕೊಟ್ಟಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾಮಿ, ಸ್ವಲ್ಪ ಫಿಗರ್ಸ್ ಹೆಚ್ಚು ಕಡಿಮೆಯಾದರೆ ಸರಿ ಮಾಡಿಕೊಡೋಣ.

ಶ್ರೀ ಎಸ್.ಎಸ್. ಪಾಟೀಲ್ : ಹೆಚ್ಚು ಕಡಿಮೆ ಎಂದರೆ 200 ಆಗಲಿ, 500 ಜನ ರೈತರು ಸತ್ತಿದ್ದರೆ ನೀವು ಪರಿಹಾರ ಕೊಟ್ಟಿರುವುದು 102. ಮಂದಿಗೆ ಮಾತ್ರ

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಹತ್ತಿರ ಫಿಗರ್ಸ್ ಸರಿ ಇದ್ದರೆ ಸಂತೋಷ.

ಶ್ರೀ ಆರಗ ಜ್ಞಾನೇಂದ್ರ : ಬೇರೆ ಏನಾದರೂ ಆಗಿದ್ದರೆ ಅಡ್ಡಿ ಇಲ್ಲ. ಅದನ್ನು ಹತ್ತಿಪ್ಪತ್ತು ವ್ಯತ್ಯಾಸ ಮಾಡಿಕೊಳ್ಳಬಹುದಿತ್ತು. ಆದರೆ ಇದು ಸತ್ತಿರುವುದು. ಇವರು ಇಷ್ಟು ಕ್ಯಾಶುಯಲ್ ಆಗಿ ತೆಗೆದುಕೊಳ್ಳುತ್ತಾರೆ ಎಂದರೆ ಏನು ಮಾನ್ಯ ಅಧ್ಯಕ್ಷರೆ? ಆ ಕ್ವೆಶ್ಚನ್ ಅಂಡ್ ಆನ್ಸರ್ಸ್‌ಗೆ ಸ್ಯಾಂಟಿಟಿ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ.

ಅಧ್ಯಕ್ಷರು : ಅವರು ಯೀಲ್ಡ್ ಆಗಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಪರಿಹಾರ ಎಷ್ಟು ಜನ ರೈತರಿಗೆ ಕೊಟ್ಟಿರಿ? ನೋಡಿ ಅಲ್ಲಿ ಮುಚ್ಚಿ ಹಾಕುತ್ತಿದ್ದಾರೆ.

ಅಧ್ಯಕ್ಷರು : ನೀವು ಕೊನೆಯಲ್ಲಿ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಅವರು ಹೇಳಿದ್ದಕ್ಕೆಲ್ಲಾ ಹೂಂ ಎಂದು ಹೇಳಬೇಕಾ?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹೂಂ ಅನ್ನಬೇಡಿ, ನಿಮಗೆ ಕನ್‌ಫ್ಯೂಷನ್ ಇದ್ದರೆ ಕುಳಿತು ಸರಿ ಮಾಡೋಣ ಎಂದು ಹೇಳಿದೆ.

ಶ್ರೀ ಶ್ರೀನಿವಸ ಗೌಡ ಕುದುವನಹಳ್ಳಿ : ಇವರಿಗೆ ಏನಾಗಿದೆ ಎಂದರೆ ದಿನಾ ಸಾಯುವವರಿಗೆ ಅಳುವವರು ಯಾರು ಎಂದು ನಂಬರ್ಸ್ ಕೂಡ ಮೆರೆತು ಹೋಗಿವೆ.

ಶ್ರೀ ಎಸ್.ಎಸ್. ಪಾಟೀಲ್ : ಎಷ್ಟು ಜನ ರೈತರಿಗೆ ಪರಿಹಾರ ಕೊಟ್ಟಿದ್ದೀರಿ?

ಅಧ್ಯಕ್ಷರು : ಪಾಟೀಲ್, ಅವರು ಯೀಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಅವರು ಯೀಲ್ಡ್ ಆಗಿಲ್ಲವೆಂದರೆ, ಅವರು ತಪ್ಪು ಮಾಹಿತಿ ಕೊಟ್ಟರೂ ಸುಮ್ಮನೆ ಇರಬೇಕಾ?

ಅಧ್ಯಕ್ಷರು : ನೀವು ಕೊನೆಯಲ್ಲಿ ಕೇಳಿ, ಅವರು ಉತ್ತರ ಮುಗಿಸಲಿ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಕೊನೆಯಲ್ಲಿ ಟೈಂ ಆಯಿತು ಎಂದು ಹೋಗಿ ಬಿಡುತ್ತೀರಿ

ಅಧ್ಯಕ್ಷರು : ತಾವು ಕೊನೆಯಲ್ಲಿ ಕೇಳಿ, ಮಧ್ಯದಲ್ಲಿ ಡಿಸ್ಟರ್ಬ್ ಮಾಡಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಉತ್ತರ ತಪ್ಪಾಗಿದ್ದರೆ ಕೊನೆಯಲ್ಲಿ ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಒಂದೂವರೆ ಗಂಟೆ ಮಾತನಾಡಿದ್ದನ್ನು ನಾವು ಕುಳಿತುಕೊಂಡು ಕೇಳಿದ್ದೇವೆ. ಉತ್ತರ ಕೊಡುವಾಗ ಬೇಡ ಎಂದರೆ. ಆಮೇಲೆ ಕೇಳಿ.

ಅಧ್ಯಕ್ಷರು : ನಂಬರ್ ಒನ್ ಯೀಲ್ಡ್ ಆಗಿಲಲ. ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ರಾತ್ರಿ 12 ಗಂಟೆಯಾದರೂ ಸಹ ನಾವು ಕುಳಿತುಕೊಳ್ಳುತ್ತೇವೆ. ನೀವು ಕೊನೆಯಲ್ಲಿ ಟೈಂ ಆಯಿತು ಎಂದು ಎದ್ದು ಹೋಗಬಾರದು. ಆಮೇಲೆ ನಮಗೆ ಏನೂ ಕೇಳುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, 2001ರಲ್ಲಿ ನಾವು ಕೇಳಿದ 903 ಕೋಟಿ ರೂಪಾಯಿಗೆ ಒಂದು ರೂಪಾಯಿ ಹಣ ಕೂಡ ಬರಲಿಲ್ಲ. ಒಂದು ಲಕ್ಷ ಟನ್ ಆಹಾರ ಧಾನ್ಯ ಮಾತ್ರ ಬಂದಿತ್ತು. ರಾಜ್ಯ ಸರ್ಕಾರ ತನ್ನ ಸಂಪನ್ಮೂಲದಿಂದ 56.28 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಇನ್ನು 2002ರ ಜುಲೈನಲ್ಲಿ ಪುನಃ ಮಾನ್ಯ ಗೃಹಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸಾರಿ ಹೋದರು. 553 ಕೋಟಿ ರೂಪಾಯಿ ಮತ್ತು 3.1 ಲಕ್ಷ ಟನ್ ಆಹಾರ ಧಾನ್ಯ ಕೇಳಿದರು. ಆದರೂ ಸರ್ಕಾರದಿಂದ ಏನೂ ಮಾಹಿತಿ ಬರಲಿಲ್ಲ. ನಾವು ಬೆನ್ನುಹತ್ತಿದ ಬೇತಾಳದ ರೀತಿಯಲ್ಲಿ ಸೆಪ್ಟೆಂಬರ್‌ನಲ್ಲಿ ಹಿಡಿಯುತ್ತಾ ಹೋಗಿದ್ದರಿಂದ ಮತ್ತೆ 1562.85 ಕೋಟಿ ರೂಪಾಯಿಗಳು ಹಾಗೂ 11 ಲಕ್ಷ ಟನ್ ಆಹಾರ ಧಾನ್ಯ ಬೇಕು ಎಂದು ಕೇಳಿದರೆ 196.88 ಕೋಟಿ ರೂಪಾಯಿಗಳನ್ನು ಮಾತ್ರ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. 5.3 ಲಕ್ಷ ಟನ್ ಆಹಾರ ಧಾನ್ಯವನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ತನ್ನ ಸ್ವಂತ ಸಂಪನ್ಮೂಲದಿಂದ 366 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. 2003 ಜುಲೈ ರಲ್ಲಿ ಪುನಃ 1881.55 ಕೋಟಿ ರೂಪಾಯಿಗಳನ್ನು ಹಾಗೂ 9.9 ಲಕ್ಷ ಟನ್ ಆಹಾರ ಧಾನ್ಯವನ್ನು ಕೇಳಿದ್ದು, ಅದರಲ್ಲಿ 126.63 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿತು. ಹಾಗೂ 5.2 ಲಕ್ಷ ಟನ್ ಆಹಾರ ಧಾನ್ಯವನ್ನು ಬಿಡುಗಡೆ ಮಾಡಿತು. ಹಾಗೆ ಡಿಸೆಂಬರ್‌ನಲ್ಲಿ ಪುನಃ 2877.99 ಕೋಟಿ ರೂಪಾಯಿಗಳನ್ನು ಹಾಗೂ 15.6 ಲಕ್ಷ ಟನ್ ಆಹಾರ ಧಾನ್ಯವನ್ನು ಕೊಡಬೇಕೆಂದು ಕೇಳಿದ್ದೆವು. ಆದರೆ ಇನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿಲ್ಲ. ರಾಜ್ಯಸರ್ಕಾರ ಈಗಾಗಲೆ 342 ಕೋಟಿ ರೂಪಾಯಿಗಳನ್ನು ಜುಲೈವರೆಗೆ ಖರ್ಚು ಮಾಡಿದೆ. ಹೀಗಾಗಿ

ಒಟ್ಟಾಗಿ ರಾಜ್ಯ ಸರ್ಕಾರ 2001ರಲ್ಲಿ 56.28, 2002ರಲ್ಲಿ 366, ಹಾಗೂ 2003ರಲ್ಲಿ 342 ಒಟ್ಟು 764.28 ಕೋಟಿ ರೂಪಾಯಿ ರಾಜ್ಯಸರ್ಕಾರ ಖರ್ಚು ಮಾಡಿದೆ. ಕೇಂದ್ರ ಸರ್ಕಾರದಿಂದ 2002–03ರಲ್ಲಿ 61.66, 2003–04ರಲ್ಲಿ 64.71 ಒಟ್ಟು 126.40 ಕೋಟಿ ರೂಪಾಯಿ ಹಾಗೂ 11.5 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯ ಇದುವರೆಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿದೆ. ನಿನ್ನೆ ತಾನೆ 9ನೇ ಜನವರಿ 2004ರಲ್ಲಿ Government of India, Ministry of Finance (Expenditure and Planning) ನಿಂದ ಪತ್ರ ಬಂದಿದೆ. ಇದು ಇಂಗ್ಲೀಷ್‌ನಲ್ಲಿ ಇದೆ. ನಾನು ಬರೆದಿರುವುದು ಅಲ್ಲ. ಆಂಧ್ರಪ್ರದೇಶಕ್ಕೆ ಡ್ರಾಟ್ ರಿಲೀಫ್‌ಗೆ 50.58 ಕೋಟಿ ರೂಪಾಯಿ, ಅರುಣಾಚಲ ಪ್ರದೇಶಕ್ಕೆ 26.79 ಕೋಟಿ ರೂಪಾಯಿ, ಗುಜರಾತಿಗೆ 20.8 ಕೋಟಿ ರೂಪಾಯಿ, ಕರ್ನಾಟಕಕ್ಕೆ 7 ಕೋಟಿ 54 ಲಕ್ಷ, ರೂ ಮಧ್ಯಪ್ರದೇಶಕ್ಕೆ 12 ಕೋಟಿ 84 ಲಕ್ಷ ರೂ, ಮಹಾರಾಷ್ಟ್ರಕ್ಕೆ 44 ಕೋಟಿ 25 ಲಕ್ಷ ರೂ ಉತ್ತರ ಪ್ರದೇಶಕ್ಕೆ 40 ಕೋಟಿ 85 ಲಕ್ಷ ರೂ, ಇದನ್ನು ನೋಡಿದರೆ ಬಹಳ ಕಡಿಮೆ ಬಂದಿರುವುದು ನಮಗೆ. ಇಲ್ಲಿ ನಾವು ಅವರ ಸಹಾಯವನ್ನು ನಿರೀಕ್ಷೆ ಮಾಡಲಿಲ್ಲ. ನಾವು ಮುಖ್ಯವಾಗಿ ಎಷ್ಟು ಹಣ ಇಲ್ಲಿ ಖರ್ಚು ಮಾಡಿದ್ದೇವೆ ಹೇಗೆ ಮಾಡಿದ್ದೇವೆ ಅಕ್ಕಿ ಏನು ಖರ್ಚು ಮಾಡಿದ್ದೇವೆ ಎನ್ನುವುದಕ್ಕಿಂತಲೂ ಕೂಡ ಇಲ್ಲಿ ನಮ್ಮ ಸರ್ಕಾರದ ಬಹಳ ಮುಖ್ಯ ಸಾಧನೆಗಳು ಏನು ಎನ್ನುವುದು. ನಾನು ಮೊದಲೆ ಹೇಳಿದೆ, ಹಸಿವಿನಿಂದ ಸಿಕ್ಕಿ ಸತ್ತಿರುವವರು ಒಬ್ಬನೇ ಒಬ್ಬ ವ್ಯಕ್ತಿ ಇದುವರೆಗೂ ಒಂದು ಪ್ರಕರಣ ಕೂಡ ಬಂದಿಲ್ಲ. ಉದ್ಯೋಗ ಅರಸಿ ಜನರು ಬೃಹತ್ ಪ್ರಮಾಣದಲ್ಲಿ ಬೇರೆ ಬೇರೆ ಕಡೆಗೆ ವಲಸೆ ಹೋದಂತಹ ಪ್ರಕರಣ ಇಲ್ಲ. ನಾನು ಕಾಫಿ ಬೆಳೆಗಾರರ ಜಿಲ್ಲೆಯಿಂದ ಬಂದಿರತಕ್ಕಂಥವನು. ಪ್ರತಿವರ್ಷ ನಿಮ್ಮ ಕಡೆಯಿಂದ ನಮ್ಮ ಊರಿಗೆ ಸಾವಿರಾರು ಜನ ಕೆಲಸಕ್ಕೆ ಬರುತ್ತಿದ್ದರು. ಈಗ ಕಾಫಿ ಬೆಳೆಗಾರರು ತೊಂದರೆಯಲ್ಲಿರುವ ಕಾರಣ, ಜನರು ಬರುವವರು ಇಲ್ಲ. ಏಕೆ ಬರುತ್ತಿಲ್ಲವೆಂದರೆ....

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ನೀವು ಕೂಲಿಯನ್ನು ಕೊಡುತ್ತಿಲ್ಲ, ಅದಕ್ಕೆ ಅವರು ಬರುತ್ತಾ ಇಲ್ಲ. ನಿಮಗೆ ಕೂಲಿಯನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಎಸ್ಟೇಟ್ ಒಳಗೆ ಸೇರಿಸಿಕೊಳ್ಳುತ್ತಿಲ್ಲ. ನೀವು ಬೇಕೆಂದರೆ ಇನ್ನೂರು ಜನರನ್ನು ಕಳುಹಿಸೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಕಾರಣವಿರಬಹುದು, ಮತ್ತೊಂದು ಕಾರಣ ಇಲ್ಲಿ ಕೂಲಿ ಅವರಿಗೆ ಸಿಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನನ್ನ ಒಂದೇ ಕ್ಷೇತ್ರದಲ್ಲಿ ಐದು ಸಾವಿರ ಜನರು ಗೋವಾಕ್ಕೆ ಹೋಗಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಹೋಗಿದ್ದಾರೆ, ನೀವು ಸರಿಯಾಗಿ ನಿಂತು ಕೂಲಿಯನ್ನು ಕೊಟ್ಟಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ನೀವು ಅವರಿಗೆ ತಿಂಗಳಿಗೆ ಎರಡು ದಿವಸವೂ ಕೆಲಸವನ್ನು ಕೊಟ್ಟಿಲ್ಲ. ಅದೆಲ್ಲ ಲೆಕ್ಕವನ್ನು ನೀವು ನಮಗೆ ಕೊಡಬೇಕು. ನೀವು ಇಷ್ಟು ಜನ ಕೂಲಿಕಾರರು ಇಲ್ಲಿದ್ದಾರೆ, ಅವರಿಗೆ ಇಷ್ಟು ಕೂಲಿಯನ್ನು ದಿವಸಕ್ಕೆ ಕೊಡುತ್ತಿದ್ದೇವೆ. ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಇದೆಲ್ಲವನ್ನೂ ನೀವು ಹೇಳುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಆ ಲೆಕ್ಕವನ್ನು ಕೊಡುತ್ತೇನೆ 1,74,465 ಕಾಮಗಾರಿಗಳನ್ನು ತೆಗೆದುಕೊಂಡು, ಅದರಲ್ಲಿ ಈಗಾಗಲೇ 1,52,000 ಕಾಮಗಾರಿಗಳು ಪೂರ್ಣಗೊಂಡಿದೆ. ಇದರಲ್ಲಿ

ನೀವು ಸಂಗ್ರಹಣೆಯ ಕಾಮಗಾರಿ ಇರಬಹುದು. ಇತರೇ ಎಲ್ಲವೂ ಸೇರಿರಬಹದು. ಮತ್ತೆ ನೀರಿನ ಮಿತ ಬಳಕೆ, ಈ ಎಲ್ಲವೂ ಬರಗಾಲ ಪರಿಹಾರ ಕಾಮಗಾರಿಯಲ್ಲಿ, ನಮ್ಮ ರಾಜ್ಯ ಸರ್ಕಾರವೂ ಕೈಲಾದುದೆಲ್ಲವನ್ನೂ ಮಾಡಿದೆ. ಅದಕ್ಕೆ ಹೊಂದಿಕೊಂಡ ಹಾಗೆ ವಿದ್ಯುಚ್ಛಕ್ತಿ, ನಮ್ಮ ರಾಜ್ಯಕ್ಕೆ ಸತತವಾಗಿ ಕಳೆದ ಮೂರು ವರ್ಷಗಳಿಂದಲೂ ಬರಗಾಲ ಇದ್ದು, ಇಲ್ಲಿಯವರೆಗೂ ಸರಿಯಾಗಿ ಮಳೆ ಬಾರದ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ತೀರಾ ಸಂಕಷ್ಟಕ್ಕೆ ಸಿಕ್ಕಿಕೊಂಡಿರುವಂಥಾದ್ದು ಎಲ್ಲಾ ಸೆಕ್ಟಾರ್‌ಗಳ ಮೇಲೂ ಪರಿಣಾಮವಾಗಿದೆ. ಅದರಲ್ಲೂ ವಿಶೇಷವಾಗಿ ವಿದ್ಯುಚ್ಛಕ್ತಿ ನಾವು ಜಲ ವಿದ್ಯುತ್ ಅನ್ನು ನಂಬಿಕೊಂಡು ಬದುಕುತ್ತಿರುವಂಥವರು, ಕ್ರಿ.ಶ. 1902ರ ಹಳೆಯ ಮೈಸೂರಿನಲ್ಲಿ ಜೋಗ್ ಜಲಪಾತದ ಮೂಲಕ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಲು ಪ್ರಾರಂಭ ಮಾಡಿದವರು, 1960ರಲ್ಲಿ ಲಿಂಗನ ಮಕ್ಕಿಯಲ್ಲಿ ಉತ್ಪಾದಿಸಿದಂತಹ ವಿದ್ಯುಚ್ಛಕ್ತಿಯನ್ನು ಏನು ಮಾಡಬೇಕೆಂಬ ಪ್ರಶ್ನೆ ಇತ್ತು. ಆದರೆ ಈಗ ವಿದ್ಯುಚ್ಛಕ್ತಿಯನ್ನು ಎಲ್ಲಿಂದ ತರಬೇಕೆಂಬ ಪ್ರಶ್ನೆ ಇದೆ. ನಮ್ಮ ಉತ್ಪಾದನೆಯ ಶೇ. 66ರಷ್ಟು ಜಲ ವಿದ್ಯುತ್‌ನಿಂದಲೇ ಆಗಬೇಕು. ಈ ಕಳೆದ ಮೂರು ವರ್ಷಗಳಿಗೆ ಹೋಗುವುದು ಬೇಡ. ಈ ಸಾಲಿನಲ್ಲಿ ಲಿಂಗನಮಕ್ಕಿಯಲ್ಲಿ 1,819 ಅಡಿ ನೀರು ಬಂದರೆ ತುಂಬುತ್ತದೆ. 1,796 ಅಡಿ ನೀರು ಬಂದಿದೆ. ಮೂರನೇ ಒಂದರಷ್ಟು ನೀರು ಬಂದರೆ, ವಿದ್ಯುಚ್ಛಕ್ತಿ ಅದಕ್ಕಿಂತ ಶೇಕಡವಾರು ಕಡಿಮೆಯಾಗುತ್ತದೆ. ನೀವು ಮೇಲೆ ಮೇಲೆ ಬಂದಹಾಗೆ ಆದರ ವಿಸ್ತಾರವೂ ಹೆಚ್ಚಿಗೆ ಆಗುತ್ತಾ ಬರುತ್ತದೆ. ನೀರು ಜಾಸ್ತಿ ಇರುತ್ತದೆ. ಇದರಿಂದ ಉತ್ಪತ್ತಿಯೂ ಹೆಚ್ಚಿಗೆ ಆಗುತ್ತದೆ. ಈ ರೀತಿ ಆಗಿ ವಿದ್ಯುಚ್ಛಕ್ತಿಯ ಕೊರತೆಯೂ ಆಗಿದೆ. ಮತ್ತೆ ಆರ್ಥಿಕ ಹೊರೆಯೂ ರಾಜ್ಯ ಸರ್ಕಾರದ ಮೇಲೆ ಬಿದ್ದಿದೆ, ಆದುದರಿಂದ ಈ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ, ರಾಜ್ಯ ಸರ್ಕಾರ ಅನೇಕ ತೊಂದರೆಗಳನ್ನು ಅನುಭವಿಸುವುದರ ಜೊತೆಗೆ, ಕೊಳವೆ ಬಾವಿಗಳನ್ನು ಏನು ಹಾಕುತ್ತಿದ್ದೇವೆ. ಅದು ಕೂಡ ಆಳಕ್ಕೆ ಹೋಗಿದೆ, ಇವು 800 ಅಡಿ ಆಳಕ್ಕೆ ಹೋಗಿವೆ, ಒಂದು ಕಡೆ ಕುಡಿಯುವುದಕ್ಕೆ ನೀರು ಇಲ್ಲ. ಮತ್ತೊಂದು ಕಡೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೂ ನೀರಿಲ್ಲ. ಈ ರೀತಿ ನೀರು ಇಲ್ಲದೇ ಇರುವ ಕಾರಣ, ರಾಜ್ಯ ಸರ್ಕಾರದ ಬಂಡವಾಳದ ಮೇಲೆ ಭಾರೀ ಹೊರೆ ಬಿದ್ದಿರುವಂಥಾದ್ದು ಸರ್ವವಿಧಿತವಾದದ್ದು, ನಮಗೆ ಜಲವಿದ್ಯುತ್‌ನಿಂದ ನಮಗೆ 9,741 ಮಿಲಿಯನ್ ಯೂನಿಟ್‌ಗಳು, ಬರುತ್ತಿತ್ತು. ಆದರೆ ಈ ವರ್ಷ ನಮಗೆ ಕೇವಲ 6,799 ಮಿಲಿಯನ್ ಯೂನಿಟ್‌ಗಳು, ಅಂದರೆ ಸುಮಾರು ಹತ್ತಿರ 3,000 ಮಿಲಿಯನ್ ಯೂನಿಟ್ ಶಾರ್ಟ್‌ಫಾಲ್ ಇದೆ. ಈ ಡೆಫಿಸಿಟ್ ಅನ್ನು ನಾವು ಕೂಡಿಸಿಕೊಳ್ಳುವುದಕ್ಕಾಗಿ, ಹೊರಗಡೆಯಿಂದ ನಾವು ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳುವಂತಹ ಪರಿಸ್ಥಿತಿಗೆ ನಮ್ಮ ಸರ್ಕಾರವನ್ನು ದೂಡಿದೆ, ಇದರ ಪರಿಣಾಮ ಏನಾಗಿದೆ, ಎಂದರೆ ನಮ್ಮ ವಿದ್ಯುತ್ ಉತ್ಪಾದನೆ ಪರ್ ಯೂನಿಟ್‌ಗೆ ಇವತ್ತಿನ ಲೆಕ್ಕಕ್ಕೆ 62 ಪೈಸೆ ಇರುವಂಥಾದ್ದು, ಆದರೆ ನಾವು ಹೊರಗಡೆಯಿಂದ ತರಿಸುವಂಥ ವಿದ್ಯುತ್ ಪರ್ ಯೂನಿಟ್‌ಗೆ 2ರೂ.ಗಳು ಅಡಿಷನಲ್ ಕಾಸ್ಟ್ ಆಗುತ್ತಿದೆ, ಈ ರೀತಿಯಾಗಿ ಸುಮಾರು 600 ಕೋಟಿ ರೂಪಾಯಿಗಳಷ್ಟು ಹಣವನ್ನು ಕೆಪಿಟಿಸಿಎಲ್‌ಗೆ ಈ ಒಂದು ಜಲ ವಿದ್ಯುತ್‌ನಿಂದ ಲುಕ್ಸಾನ್ ಆಗಿರುವಂಥಾದ್ದನ್ನು ಈ ನಮ್ಮ ದೇಶದ ಜನತೆಗೆ ಸದನದ ಮೂಲಕ ಗಮನಕ್ಕೆ ತರಬಯಸುತ್ತೇನೆ. ಈ ರೀತಿ ವಿದ್ಯುಚ್ಛಕ್ತಿಯ ಉತ್ಪಾದನೆ ಕಡಿಮೆಯಾಗಿರುವುದರ ಜೊತೆಗೆ ಇದರ ಬೇಡಿಕೆ ಹೆಚ್ಚು ಆಗಿದೆ. ಸಾಧಾರಣವಾಗಿ ಮಳೆಯಾದರೆ ಯಾರೂ ವಿದ್ಯುಚ್ಛಕ್ತಿಯನ್ನು ಕೇಳುವುದಕ್ಕೆ ಹೋಗುವುದಿಲ್ಲ. ರೈತರು ತಮ್ಮ ಪಾಡಿಗೆ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾರೆ. ಆದರೆ ಇತ್ತೀಚೆಗೆ

ಮಳೆಯೂ ಕಡಿಮೆಯಾಗಿ, ವಿದ್ಯುತ್ ಉತ್ಪಾದನೆಯೂ ಕಡಿಮೆಯಾಗಿ ಬೇಡಿಕೆ ಮಾತ್ರ ಪ್ರತಿ ದಿವಸ ಹೆಚ್ಚಿಗೆ ಆಗುತ್ತಾ ಹೋಗುತ್ತಿದೆ, ಈ ವರ್ಷ ಸುಮಾರು ಅಂದಾಜು 29,946 ಮಿಲಿಯನ್ ಯೂನಿಟ್ಸ್ ಪವರ್ ಕನ್ಸಂಪ್‌ಶನ್‌ಗೆ ಬೇಕು, ಇದು ಈಗ 32,377 ಮೆಗಾ ಯೂನಿಟ್ಸ್‌ಗೆ ಜಂಪ್ ಆಗಿದೆ, ಅಂದರೆ 2,431 ಮೆಗಾ ಯೂನಿಟ್ ಹೆಚ್ಚು ವಿದ್ಯುತ್ ಬೇಡಿಕೆ ಬಂದಿದೆ. ಈ ಅಡಿಷನಲ್ ವಿದ್ಯುತ್ ವಿತರಣೆಗೆ ಪುನಃ ನಾವು ಕೆಪಿಟಿಸಿಎಲ್‌ಗೆ 500 ಕೋಟಿ ರೂಪಾಯಿಗಳು ಪ್ಲಸ್ ಆರು ನೂರು ಕೋಟಿ ರೂಪಾಯಿಗಳು, ಅಂದರೆ ಒಟ್ಟು 1,100 ಕೋಟಿ ರೂಪಾಯಿಗಳು ಅಡಿಷನಲ್ ಆಗಿ ಕೆಪಿಟಿಸಿಎಲ್‌ಗೆ ಎಕ್ಸ್‌ಪೆಂಡಿಚರ್ ಬಂದಿದೆ, ರಾಜ್ಯ ಸರ್ಕಾರವೂ ಈ ನಾಡಿನ ಜನತೆಗೆ ಒಂದು ಭರವಸೆಯನ್ನು ಈ ಸದನದ ಮೂಲಕ ಕೊಡಬಯಸುವಂಥಾದ್ದು ಏನೆಂದರೆ ಕುಡಿಯುವ ನೀರಿಗೆ ಮತ್ತು ರೈತರಿಗೆ ನಿರ್ಭಾದಿತವಾಗಿ 24 ಗಂಟೆಗಳು ಕರೆಂಟ್ ಕೊಡುತ್ತೇವೆಂದು ಹೇಳಿದ್ದೇವೆ. ಯಾವುದೇ ಕಷ್ಟ ಬಂದರೂ, ಸಂಕಷ್ಟಗಳು ಬಂದರೂ, ಆರ್ಥಿಕ ತೊಂದರೆಗಳು ಬಂದರೂ, ಮತ್ತೆ ಗ್ರಿಡ್‌ಗಳಿಂದ ತೊಂದರೆಯಾದರೂ ಕೂಡ, ನಾವು ವ್ಯವಸಾಯಕ್ಕೆ ಮತ್ತೆ ಕುಡಿಯುವ ನೀರಿಗೆ ವಿದ್ಯುಚ್ಛಕ್ತಿ ಕೊರತೆ ಮಾಡುವುದಿಲ್ಲವೆಂದು ಹೇಳಬಯಸುತ್ತೇನೆ. ಈಗ ನಾವು ಸಪ್ಲೈ ಮಾಡುತ್ತಿದ್ದೇವೆಂಬುದು ಮುಖ್ಯ, ಹೇಗಾದರೂ ಮಾಡಿ ಆರು ಗಂಟೆಗಳು ಕೊಡಿ ಎಂದು ಹೇಳಬಹುದು. ಆದರೆ 6 ಗಂಟೆ, 8 ಗಂಟೆ, 12 ಗಂಟೆ ಎಂದು ಹೇಳಬಹುದು. ಆದರೆ ನಾವು ಈಗ ಕೊಡುತ್ತಿರುವಂಥಾದ್ದು ಮೊದಲನೆಯ ಬ್ಯಾಚ್‌ಗೆ 6 ಗಂಟೆಗಳ ಕಾಲ 3 ಫೇಸ್ ಕರೆಂಟ್ ಅನ್ನು ಕೊಡುತ್ತಿದ್ದೇವೆ. 10 ಗಂಟೆಗಳ ಕಾಲ ಸಿಂಗಲ್ ಫೇಸ್ ಕರೆಂಟ್ ಕೊಡುತ್ತಿದ್ದೇವೆ. ಅಂದರೆ ಒಟ್ಟು 16 ಗಂಟೆಗಳು ಆಗುತ್ತದೆ. ಸೆಕೆಂಡ್ ಬ್ಯಾಚ್‌ಗೆ 4 ಗಂಟೆಗಳು ಮೂರು ಫೇಸ್ ಸಪ್ಲೈ, 7 ಗಂಟೆಗಳು ಮೂರು ಫೇಸ್ ಎಂದು ರಾತ್ರಿಯ ವೇಳೆಯಲ್ಲಿ ಕೊಡುತ್ತಿದ್ದೇವೆ. 5 ಗಂಟೆಗಳ ಕಾಲ ಸಿಂಗಲ್ ಫೇಸ್ ಕರೆಂಟ್ ಅನ್ನು ರಾತ್ರಿ ವೇಳೆಯಲ್ಲಿ ಕೊಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : 3 ಫೇಸ್ ಕೊಡುವಂಥಾ ಸಮಯ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : 3 ಫೇಸಸ್ ಕರೆಂಟ್ 6 ಗಂಟೆಗಳ ಕಾಲ ಡೇ ಟೈಮ್‌ನಲ್ಲಿ, 10 ಗಂಟೆಗಳು ರಾತ್ರಿ ವೇಳೆಯಲ್ಲಿ ಕೊಡುವಂಥಾದ್ದು, 4 ಗಂಟೆ ಮತ್ತು 3 ಫೇಸ್ ಕರೆಂಟ್ ಅನ್ನು, ಸೆಕೆಂಡ್ ಬ್ಯಾಚ್ ಎಂದು, ಎರಡು ಬ್ಯಾಚ್‌ಗಳನ್ನು ಮಾಡಿದ್ದೇವೆ. 7 ಗಂಟೆಗಳು ರಾತ್ರಿಯ ವೇಳೆಯಲ್ಲಿ ಕೊಡುತ್ತಿದ್ದೇವೆ. 5ಗಂಟೆ ಸಿಂಗಲ್ ಫೇಸ್ ರಾತ್ರಿ ವೇಳೆಯಲ್ಲಿ ಕೊಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ತಾವು 3 ಫೇಸಸ್ ಕರೆಂಟ್ 6 ಗಂಟೆಗಳ ಕಾಲ ಕೊಡುತ್ತಿಲ್ಲ. ಇದನ್ನು ಬೇಕಾದರೆ ವೆರಿಫೈ ಮಾಡಿ, ಹಗಲು ಹೊತ್ತಿನಲ್ಲಿ ಕೊಡುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಕೊಡುತ್ತಿದ್ದಾರೆ, ಇದಕ್ಕೆ ಮಂತ್ರಿಗಳೇ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಹಗಲು ಹೊತ್ತು 3 ಫೇಸ್ ಎಷ್ಟು ಗಂಟೆಗಳು ಕೊಡುತ್ತೀರಿ?

ಶ್ರೀ ಬಸವರಾಜ ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ 6 ಗಂಟೆಗಳು ಕೊಡುತ್ತೇವೆ, ನಾವು ಎರಡು ಗುಂಪುಗಳನ್ನು ಮಾಡಿದ್ದೇವೆ. ಅದು ಒಂದು ಕಡೆ ಹಗಲು 6 ಗಂಟೆಗಳು, ಮತ್ತೊಂದು 4 ಗಂಟೆಗಳು, ಮತ್ತೆ ರಾತ್ರಿ 7 ಗಂಟೆಗಳು, ರಾತ್ರಿ 11 ರಿಂದ 6 ಗಂಟೆಗಳು ಒಳಗೆ ಎಂದರೆ 3 ಫೇಸ್ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ನಾನು 3 ಫೇಸ್ 6 ಗಂಟೆಗಳು ಏನು ಇದೆ. ಅದನ್ನು ಬೆಳಿಗ್ಗೆ ಹೊತ್ತಿನಲ್ಲಿ ಕೊಡಿ ಎಂದು ಹೇಳುತ್ತಿದ್ದೇವೆ. ನೀವು ಹೋಗಿ ನೋಡಿ, ರಾತ್ರಿ 11 ಗಂಟೆಯಿಂದ, 12

ಗಂಟೆಗೆ ಕೊಟ್ಟರೆ, ಅಲ್ಲಿ ಹೆಣ್ಣುಮಕ್ಕಳು ಗಿರಣಿಗೆ ಹಿಟ್ಟುಮಾಡಿಸಲು ಹೇಗೆ ಹೋಗಬೇಕು; ರೈತರು ಹೊಲಕ್ಕೆ ಹೇಗೆ ಹೋಗಬೇಕು?

ಶ್ರೀ ಬಸವರಾಜ ಹೆಚ್. ಪಾಟೀಲ್ : ನಮ್ಮ ಉದ್ದೇಶ 6 ತಾಸು ಕೊಡಬೇಕೆಂದು ಇದೆ, ಆದರೆ ಟ್ರಾನ್ಸ್‌ಫಾರ್ಮರ್‌ಗಳಿಗೆ ಆ ಭಾರ ಹೆಚ್ಚಿಗೆ ಆಗಿ, ಆ ಲೈನ್‌ಗೆ ಹೆಚ್ಚಿಗೆ ಭಾರವಾಗಿ ತೊಂದರೆಯಾಗುತ್ತದೆಂದು ಹೇಳಿ, ನಾವು ರಾತ್ರಿ ಮತ್ತು ಬೆಳಿಗ್ಗೆ ಎಂದು ಪರಿವರ್ತನೆ ಮಾಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಡಿಸೆಂಬರ್‌ನಿಂದ ಏಪ್ರಿಲ್ ತಿಂಗಳವರೆಗೆ ಹಿಂಗಾರಿನ ಬೆಳೆಗೆ 82 ರಿಂದ 85 ಮಿಲಿಯನ್ ಯೂನಿಟ್ ಪವರ್ ಬೇಕಾಗುತ್ತದೆ. ಆದರೆ ಈ ಸಾರಿ ಒಟ್ಟು ಬೇಡಿಕೆ 107 ಮಿಲಿಯನ್ ಯೂನಿಟ್ಸ್ ಪ್ರತಿ ನಿತ್ಯ ಇರುವಂಥಾದ್ದು, ಆದರೆ ನಾವು 93 ರಿಂದ 97 ಮಿಲಿಯನ್ ಯೂನಿಟ್ಸ್ ಪವರ್ ಅನ್ನು ಸಪ್ಲೈ ಮಾಡುತ್ತಿದ್ದೇವೆ.

8.20 ಪಿಎಂ

ಅಗ್ರಿಕಲ್ಚರ್‌ಗೆ ಅವರೇಜ್ ಪವರ್ ಸಪ್ಲೈ ಮಾಡುವುದಕ್ಕೆ ಖರ್ಚಾಗುವುದು 3 ರೂ. 70 ಪೈಸೆ ಪರ್ ಯೂನಿಟ್. ಎಷ್ಟರಲ್ಲಿ ನಾವು ಪವರ್ ಸಪ್ಲೈ ಮಾಡುತ್ತಿದ್ದೇವೆ. ಅಂದರೆ ಒಂದು ಯೂನಿಟ್‌ಗೆ 73 ಪೈಸೆಯಂತೆ ರೈತರಿಂದ ರಿಕವರ್ ಮಾಡುತ್ತಿದ್ದೇವೆ. ಹಾರ್ಡ್ಲಿ ಶೇ. 15 ಅಥವಾ 10 ಪೈಸೆ ಒಂದು ಯೂನಿಟ್‌ಗೆ ವಾಪಸ್ ಬರುತ್ತಿದೆ. ಆದುದರಿಂದ ಇದಕ್ಕೋಸ್ಕರ ರಾಜ್ಯಸರ್ಕಾರ ಮೂರು ಸಾವಿರ ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಟ್ಟಿರುವುದನ್ನು ಆಯವ್ಯಯದಲ್ಲಿ ಹೇಳಿದ್ದಾರೆ. ಇನ್ನು ಮುಂದೆ ಮಂಡನೆ ಮಾಡುವ ಆಯವ್ಯಯದಲ್ಲಿ ಇನ್ನು ವಿಸ್ತರವಾಗಿ ಪ್ರಸ್ತಾಪ ಮಾಡಬಹುದು. ಇದರ ಜೊತೆಗೆ ಕುಡಿಯುವ ನೀರಿನ ಯೋಜನೆಗೆ ವಿದ್ಯುತ್ ಅನ್ನು ಯಾವ ಕಾರಣಕ್ಕೂ ಡಿಸ್ಕನೆಕ್ಟ್ ಮಾಡಬಾರದೆನ್ನುವ ಆದೇಶವನ್ನು ರಾಜ್ಯಸರ್ಕಾರ ಈಗಾಗಲೇ ಕೆಪಿಟಿಸಿಎಲ್‌ಗೆ ಕೊಟ್ಟಿದೆ; ಆ ರೀತಿಯಾಗಿ ತೀರ್ಮಾನವನ್ನು ನಾವು ಮಾಡಿದ್ದೇವೆ. ಹೀಗೆ ಕೊಡುವ ಹಣಕ್ಕೆ ತ್ರೈಮಾಸಿಕವಾಗಿ ಹಣ ಕಟ್ಟಬೇಕೆಂದು ಸರ್ಕಾರ ನಿಗದಿಮಾಡಿದೆ. ಹೊಸ ಸಿಸ್ಟಂ, ಬ್ಯಾಂಕ್ ಡಿಮಾಂಡ್‌ಡ್ರಾಫ್ಟ್ ಮೂಲಕ ಪಂಚಾಯಿತಿಗಳು ನೇರವಾಗಿ ಹಣವನ್ನು ಕಟ್ಟುವ ಕಾರ್ಯಕ್ರಮವನ್ನು ನಾವು ಈಗಾಗಲೇ ಹಮ್ಮಿಕೊಂಡಿದ್ದೇವೆ. ಆದರೆ ಪಂಚಾಯತ್‌ರಾಜ್ಯದ ಮೊದಲನೆ ಚಾರ್ಜ್ ಈ ವಿದ್ಯುತ್‌ಗೆ ಕಟ್ಟುವುದು ಎನ್ನುವುದನ್ನು ಕೂಡ ನಾವು ಕಳುಹಿಸಿದ್ದೇವೆ. ಬೇಸ್ಕಾಂ, ಮೆಸ್ಕಾಂನವರು ಇವರೆಲ್ಲಾರೂ ಈಗಾಗಲೇ ಶೇ. 90 ರಷ್ಟು ಇನ್‌ಸ್ಟಲೇಷನ್ಸ್ ಏನಿದ್ದಾವೆ ಅವಕ್ಕೆ ಮೀಟರ್‌ಗಳನ್ನು ಅಳವಡಿಸಿದ್ದಾರೆ, ಇನ್ನು ಕೆಲವು ಕಡೆ ಶೇ 10 ರಷ್ಟು ಕಡಿಮೆ ಇರುವುದಕ್ಕೆ ಮೀಟರ್ ಅಳವಡಿಸಲು ಪೂರ್ಣವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಹಾಗೆ ನಗರವ್ಯಾಪ್ತಿಗೆ ಬರುವ ಬಳಕೆದಾದರಿಗೆ 24 ಗಂಟೆಗಳ ಕಾಲ ವಿದ್ಯುತ್ ಕೊಡುವ ವ್ಯವಸ್ಥೆ ಈಗಲೂ ಜಾರಿಯಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್ : ಶೇಕಡ 70 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿದ್ದಾರೆ ಅವರ ಬಗ್ಗೆ ಹೇಳಲು ಸರ್ಕಾರ ತಯಾರಿಲ್ಲ. ಇಲ್ಲಿರುವ ಬೆಂಗಳೂರಿನವರ ಬಗ್ಗೆ ಹೇಳುತ್ತಿದ್ದೀರಿ ಅಷ್ಟೆ. ಗ್ರಾಮೀಣ ಪ್ರದೇಶದಕ್ಕೆ ಬೆಳಿಗ್ಗೆ 6 ಗಂಟೆಗಳ ಕಾಲ ನಿಮಗೆ ಕೊಡಲಾಗುವುದಿಲ್ಲ. ನಿಮಗೆ ಯಾವುದು ಹೇಳಬೇಕೆಂದು ಅನಿಸುತ್ತದೆಯೋ ಅದರ ಬಗ್ಗೆ ತಾವು ಹೇಳುತ್ತಿದ್ದೀರಿ.

ಶ್ರೀ ಆರಗ ಜ್ಞಾನೇಂದ್ರ : ಇವರ ಸರ್ಕಾರದಲ್ಲಿ ಗ್ರಾಮೀಣ ಪ್ರದೇಶದ ಜನರು ಎರಡನೆ ದರ್ಜೆಯವರು!

ಶ್ರೀ ಡಿ.ಬಿ. ಚಂದ್ರೇಗೌಡ : ಅವರು (ನಗರದವರು) ದುಡ್ಡಾದರೂ ಕೊಡುತ್ತಾರೆ, ಇಲ್ಲಿ ಪೂರ್ತಿ ಹಣ ಕೊಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ಅವರೇನು ಪುಕಟ್ಟೆ ಕೇಳುತ್ತಾರಾ ? ಶೇಕಡ 10 ರಷ್ಟು ಕೊಡುತ್ತಾರೆ. ಹೊಟ್ಟೆ ತುಂಬಲು ಬೆಳೆದು ಕೊಡುತ್ತಾರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಈಗ 24 ಗಂಟೆ ನಗರ ಪ್ರದೇಶಕ್ಕೂ 16 ಗಂಟೆ ನಗರ ಪ್ರದೇಶಕ್ಕೂ ವಿದ್ಯುತ್ ಕೊಡುತ್ತಿದ್ದೇವೆನ್ನುವ ಮಾತನ್ನು ಹೇಳುತ್ತಿದ್ದೇವೆ. ಇದನ್ನು ಜೂನ್‌ವರೆಗೆ ಇದೆ ರೀತಿಯಾಗಿ ಮುಂದುವರೆಸಿಕೊಂಡು ಹೋಗುತ್ತೇವೆನ್ನುವ ಭರವಸೆಯನ್ನು ಈ ಮೂಲಕ ಕೊಡಲು ನಾನು ಇಚ್ಛೆಪಡುತ್ತೇನೆ. ಜನರೇಷನ್‌ನಲ್ಲಿ ನಮಗೆ 2250 ಮೆ.ವಾ. ಅಷ್ಟು ಕೊರತೆ ಇವತ್ತಿನವರೆಗೆ ಕೆಪಾಸಿಟಿನಲ್ಲಿ ಇದೆ. ಈ 2250 ಮೆ.ವಾ ಅಷ್ಟು ವಿದ್ಯುತ್ ಅನ್ನು ಜನರೇಷನ್ ಕೆಪಾಸಿಟಿಗೆ ಸೇರಿಸಲು ಸಾಧ್ಯವಾಗದೇ ಇದ್ದರೆ, ಇನ್ನು ಒಂದೆರಡು ವರ್ಷಗಳಲ್ಲಿ 3450 ಮೆ.ವಾ 10ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ನಮಗೆ ಡಿಫಿಸಿಟ್ ಬರುತ್ತದೆ. 5300 ಮೆ.ವಾ. ಅನ್ನು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಂದರೆ 20.11.12ರ ಹೊತ್ತಿಗೆ ಮುಗಿಸುವ ಯೋಜನೆ ಇದೆ. ಈಗ 290 ಆಲಮಟ್ಟಿಯಲ್ಲಿ, 1400 ಬಿಡದಿಯಲ್ಲಿ 500 ಬಳ್ಳಾರಿಯಲ್ಲಿ, 210 ಆರ್‌ಟಿಪಿಎಸ್‌ನಲ್ಲಿ, 230 ಮೆ.ವಾ ವರಾಹಿ ಯೋಜನೆಯಲ್ಲಿ ಹೀಗೆ 2630 ಮೆ.ವಾ ವಿದ್ಯುತ್ ಅನ್ನು ಜನರೇಟ್ ಮಾಡುತ್ತೇವೆ. ಇದನ್ನು ಈ ವರ್ಷ ಸೇರಿಸಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇನ್ನು ಬಿಡದಿಯಲ್ಲಿ ಪ್ಲಾಂಟ್‌ಗೆ ಫೌಂಡೇಷನ್ ಹಾಕಿಲ್ಲ.

ಶ್ರೀ ಬಸವರಾಜ ಪಾಟೀಲ್ ಹುಮ್ನಾಬಾದ್ (ಇಂಧನ ರಾಜ್ಯ ಸಚಿವರು) : ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ 2600 ಮೆ.ವಾ ವಿದ್ಯುತ್ ಉತ್ಪಾದನೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಅದು ಕಾರ್ಯಕ್ರಮವೆಂದಷ್ಟೆ ಹೇಳಿ, ಅದು ಆ್ಯಡ್ ಆಗದೆ; ಆ್ಯಡ್ ಆಗಿದೆ ಎಂದು ಏಕೆ ಹೇಳುತ್ತೀರಿ; ಇಷ್ಟು ಹೇಳುವುದಕ್ಕೆ ಮತ್ತ್ಯಾರೂ ನಿಮಗೆ ಸಿಗಲಿಲ್ಲವೇ ನಾವೇ ಸಿಕ್ಕಿದ್ದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಚಂದ್ರೇಗೌಡರು ಸಂಬಂಧಪಟ್ಟ ಮಂತ್ರಿಗಳಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಸಂಬಂಧಪಟ್ಟ ಮಂತ್ರಿಗಳು ಕಳೆದ ಮೂರು ವರ್ಷಗಳಲ್ಲಿ 1999, 2000, 2001, 2002, 2003ನಲ್ಲಿ ನಮ್ಮ ಗ್ರಿಡ್‌ಗೆ ಸೆಂಟ್ರಲ್ ಗ್ರಿಡ್‌ನದ್ದು ಬಿಟ್ಟು ಎಷ್ಟು ಅಡಿಷನಲ್ ಪವರ್ ಅನ್ನು ಜನರೇಟ್ ಮಾಡಿ ಮೆ.ವಾ. ಸೇರಿಸಿದ್ದೀರಿ ಎಂಬುದು ನಮಗೆ ಬೇಕು; ಬೇರೆ ಏನನ್ನೂ ಕೇಳುತ್ತಿಲ್ಲ. How many Mega watts of power has been added to the Grid?

ಶ್ರೀ ಬಸವರಾಜ ಪಾಟೀಲ್ ಹುಮ್ನಾಬಾದ್ : ರಾಯಚೂರು ಥರ್ಮಲ್ ಪ್ಲಾಂಟ್ 210 ಮೆ.ವಾ. ನದು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, ನಾವು ಯಾವುದೇ ಯೋಜನೆ ಮಾಡಬೇಕಾದರೂ ಒಂದೇಸಾರಿ, ಒಂದೇ ವರ್ಷದಲ್ಲಿ ಪೂರ್ತಿಮಾಡುತ್ತೇವೆಂದು ಹೇಳಲಾಗುವುದಿಲ್ಲ. ಹಂತ ಹಂತವಾಗಿ, ಭೂಸ್ವಾಧೀನ ಮಾಡಿಕೊಳ್ಳಬೇಕು, ಟೆಕ್ನಿಕಲ್ ಮಂಜೂರಾತಿಯಾಗಬೇಕು. ಫೈನಾನ್ಷಿಯಲ್ ಟೈಆಫ್ ಆಗಬೇಕು, ಇವೆಲ್ಲಾ ಆಗುವುದಕ್ಕೆ ತೊಂದರೆಯಾಗುತ್ತಿದೆ. ಅದನ್ನು ಸರಿಪಡಿಸಿ, 1400 ಮೆ.ವಾ ಬಿಡದಿಯಲ್ಲಿ ಉತ್ಪಾದನೆ ಮಾಡಬೇಕೆಂದಿದ್ದೇವೆ. ಆಗಲೇ ಆಲಮಟ್ಟಿಯಲ್ಲಿ 15 ಮೆ.ವಾ

ಜನವರಿಯಲ್ಲಿ ಜನರೇಟ್ ಮಾಡುತ್ತಿದ್ದೇವೆ. ಉಳಿದದ್ದು 270 ಮೆ.ವಾ ಉತ್ಪಾದನೆಯನ್ನು 6 ತಿಂಗಳಲ್ಲಿ ಮುಗಿಯುವ ಹಂತದಲ್ಲಿದೆ. ಜನವರಿಯಲ್ಲಿ ಗ್ರಿಡ್‌ಗೆ ಕೊಡುತ್ತಿದ್ದೇವು ಉಳಿದೆಲ್ಲಾ ಪೂರ್ಣಗೊಂಡಿದೆ. ಹಂತ ಹಂತವಾಗಿ ಬಹುತೇಕ 6 ತಿಂಗಳು ಅಥವಾ ಒಂದು ವರ್ಷದಲ್ಲಿ 270 ಮೆ.ವಾ ಗ್ರಿಡ್‌ಗೆ ಕೊಡುತ್ತೇವೆ.ಎಲ್ಲಾ ಪ್ರೋಗೆಸ್‌ನಲ್ಲಿದೆ.

ಶ್ರೀ ಬಿ. ಸೋಮಶೇಖರ್ : ಅಂದರೆ ನಾಲ್ಕೂವರೆ ವರ್ಷಗಳಲ್ಲಿ ಜೆ.ಹೆಚ್. ಪಟೇಲರು ಮೂರು ವರೆ ವರ್ಷ ಮುಖ್ಯಮಂತ್ರಿಯಾಗಿದ್ದರು. ಆ ಮೂರು ವರ್ಷಗಳಲ್ಲಿ 800 ಮೆ.ವಾ ಪವರ್ ಉತ್ಪಾದನೆ ಮಾಡಿ ಗ್ರಿಡ್‌ಗೆ ಸೇರಿಸಿರುವುದನ್ನು ತಾವೇ ಅಕ್ನಾಲೇಜ್ ಮಾಡಿದ್ದೀರಿ. ಈಗ ತಾವು 210 ಮೆ.ವಾ, 7 ಆರ್‌ಟಿಪಿಎಸ್ ಯೂನಿಟ್ ಬಿಟ್ಟರೆ, ಆಲಮಟ್ಟಿಯಲ್ಲಿ 15 ಮೆ.ವಾ ಬಿಟ್ಟರೆ ಇನ್ನು ಒಂದು ಯೂನಿಟ್ ಅನ್ನು ಎಲ್ಲಿ ಉತ್ಪಾದನೆ ಮಾಡಿದ್ದೀರಿ ಹೇಳಿ; ನಾಲ್ಕೂವರೆ ವರ್ಷ ನಿರಂತರವಾಗಿ ಅಧಿಕಾರದಲ್ಲಿ ಈ ಸರ್ಕಾರವಿದೆ. ಸುಮ್ಮನೆ ಬುರಡೆ ಬಿಡುತ್ತಿದ್ದೀರಲ್ಲಾ ನೀವು.

ಶ್ರೀ ಬಸವರಾಜ ಪಾಟೀಲ್ ಹುಮ್ನಾಬಾದ್ : ನಾವು ಇಂಡಿಪೆಂಡೆಂಟ್ ಪವರ್ ಪಾಜೆಕ್ಟ್‌ನಲ್ಲಿ 450 ಮೆ.ವಾ ನಮಗೆ ಈಗ ಬರುತ್ತಿದೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಮೊದಲನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ದಿವಂಗತ ಮಾಜಿ ಮುಖ್ಯಮಂತ್ರಿ ಶ್ರೀ ಜೆ.ಹೆಚ್. ಪಟೇಲ್ ಅವರನ್ನು 800 ಮೆ.ವಾ ಪವರ್ ಸೇರಿಸಿದರೆಂದ ಹೊಗಳಿದರು. ಈಗ ನೀವು ಬಿಟ್ಟು ಹೋಗುತ್ತಿದ್ದೀರಿ. ಎಷ್ಟು ಆ್ಯಡ್ ಮಾಡಿದ್ದೀರಿ ಎಂಬುದನ್ನು ಹೇಳಿ ಇನ್ನೂರು ಚಿಲ್ಲರೆ ಆ್ಯಡ್‌ಮಾಡಿ 2000, 3000 ಪ್ಲಾನ್ ಹಾಕಿದ್ದೇವೆ ಎಂದು ಏಕೆ ತಪ್ಪು ಮಾಹಿತಿಯನ್ನು ಕೊಡುತ್ತೀರಿ?

ಶ್ರೀ ಬಿ. ಸೋಮಶೇಖರ್ : ಈಗ ನೀವು ನಮ್ಮ ರಾಜ್ಯದಲ್ಲಿ ಉತ್ಪತ್ತಿ ಮಾಡುತ್ತಿರುವುದು 235 ಮೆಗಾವ್ಯಾಟ್ಸ್. 400 ಮೆ.ವಾ ವಿದ್ಯುತ್ ಅನ್ನು ಎರಡೂವರೆ ರೂ. ಒಂದು ಯೂನಿಟ್‌ಗೆ ಕೊಟ್ಟು ಪವರ್ ಟ್ರೇಡಿಂಗ್ ಕಾರ್ಪೊರೇಷನ್‌ನಿಂದ ತರುತ್ತಿದ್ದೀರಿ. ಅದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ ಎಂಬುದನ್ನು ಹೇಳಿ. ಕರ್ನಾಟಕದಲ್ಲಿ ಕಳೆದ ನಾಲ್ಕೂವರೆ ವರ್ಷಗಳಿಂದ ಇದುವರೆಗೂ ಏಕೆ ಉತ್ಪತ್ತಿ ಮಾಡಲಿಲ್ಲ? ನೆಗೋಷಿಯೇಷನ್ ಎಷ್ಟಾಗಿದೆ?

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತೇನೆ. ಪ್ರತಿದಿನ 63 ಮೆಗಾ ಯೂನಿಟ್ಸ್ ಪವರ್ ನಮ್ಮ ಜನರೇಷನ್ ಸ್ಟೇಷನ್ನಿನಿಂದ ಬರುತ್ತಿದೆ. ಅದರಲ್ಲಿ ಶೇಕಡಾ 45ರಷ್ಟು ಹೈಡಲ್ ಜನರೇಷನ್ ಆಗಿದೆ. ಆದರೆ ಈ ವರ್ಷ ಮಾನ್‌ಸೂನ್ ವಿಫಲವಾದುದ್ದರಿಂದ ಕೇವಲ ಶೇಕಡಾ 30ರಷ್ಟು ಮಾತ್ರ ವಿದ್ಯುತ್ ಜಲವಿದ್ಯುತ್ ಯೋಜನೆಗಳಿಂದ ಉತ್ಪತ್ತಿಯಾಗುತ್ತಿದೆ. ನೀವು ಬಳ್ಳಾರಿ ಯೂನಿಟ್ ಬಗ್ಗೆ ಕೇಳಿದಿರಿ. ಬಳ್ಳಾರಿ ಯೂನಿಟ್‌ನಲ್ಲಿ ಏಕೆ ತಡವಾಗುತ್ತಿದೆ ಎಂದು ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಬಳ್ಳಾರಿ ಪವರ್ ಸ್ಟೇಷನ್ನಿಗೆ ಈಗಾಗಲೇ ಟೆಂಡರ್ ಕರೆದು ಆಗಿದ್ದು, ಟೆಂಡರ್ ಕಾಂಟ್ರಾಕ್ಟ್ ಬಿಹೆಚ್‌ಇಎಲ್‌ಗೆ ಅವಾರ್ಡ್ ಆಗಿದೆ. ಆದರೆ, ಇದು ತಡವಾಗಲು ಕಾರಣಗಳೆಂದರೆ, ಸೈಟ್ ಆಫ್ ಚೇಂಜ್ ಆಯಿತು ಮತ್ತು delay in the allotment of........

ಶ್ರೀ ಬಿ. ಸೋಮಶೇಖರ್ : ಏಕೆ ಡಿಲೇ ಆಯಿತು ಎಂದರೆ, ಅದನ್ನು ನಾಲ್ಕು ವರ್ಷಗಳ ಹಿಂದಿನಿಂದಲೂ ಸ್ಕೋಡಾ ಕಂಪನಿಗೆ ಕೊಡಬೇಕು ಎಂದು ತಾವು ಮಾಡಿದ್ದಿರಿ. ಅದನ್ನು 1999ರಲ್ಲೇ ಇದನ್ನು ಮಾಡಬಹುದಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಏಕೆ ಡಿಲೇ ಆಯಿತು ಎನ್ನುವುದಕ್ಕೆ ನೀವೇ ಉತ್ತರ ಹೇಳಿ, ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಹುಮ್ನಾಬಾದ್ : ಅದೊಂದೇ ಅಲ್ಲ, ಸ್ಕೋಡಾ ಕಂಪನಿಗೆ ಕೊಡಬೇಕು ಎನ್ನುವ ಉದ್ದೇಶದಿಂದ ತಡವಾಗಲಿಲ್ಲ. ಇತರ ಕಾರಣಗಳೆಂದರೆ, ಮೊದಲನೆಯದಾಗಿ, ಸೈಟ್ ಚೇಂಜ್ ಮಾಡುವುದು ಆಯಿತು. ಕೇಂದ್ರ ಸರ್ಕಾರದಿಂದ ಅದಕ್ಕೆ ಬೇಕಾದಂಥ ಕೋಲ್‌ನಲ್ಲಿ ಅಲಾಟ್‌ಮೆಂಟ್ ಆಗುವುದರಲ್ಲಿ ಡಿಲೇ ಆಯಿತು. ಸ್ಕೋಡಾ ಕಂಪನಿಯ ಬಗ್ಗೆ ತಾವೇ ಇದೇ ಮನೆಯಲ್ಲಿ ಅಬ್ಜಕ್ಷನ್ ಮಾಡಿದಿರಿ. ಹಿಂದೆ ಸ್ಕೋಡಾ ಕಂಪನಿಗೆ ಕೊಡಬೇಕು ಎನ್ನುವ ವಿಚಾರವಿತ್ತು. ಅದಕ್ಕೆ ತಾವು ಅಬ್ಜಕ್ಷನ್ ಮಾಡಿದಾಗ ನಾವು ಪುನಃ ವಿಚಾರ ಮಾಡಿ, ಎರಡನೆಯ ಸಲ ಟೆಂಡರ್ ಕರೆದು ಬಿ ಹೆಚ್ ಇ ಎಲ್ ಗೆ ಕೊಡಲು ಆರು ತಿಂಗಳ ಕಾಲ ಹಿಡಿಯಿತು. ನಮ್ಮ ದೇಶದ ಕಂಪನಿಯೇ ಆದ ಬಿ ಹೆಚ್ ಇ ಎಲ್ ಗೆ ಕೊಡಲು, ಟೆಕ್ನಿಕಲ್ ಕಾರಣಗಳಿಂದಾಗಿ ಸ್ವಲ್ಪ ಡಿಲೇ ಆಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಹೇಳಿದುದ್ದನ್ನೆಲ್ಲಾ ನೀವು ಒಪ್ಪಿಕೊಂಡು ಬಿಡಬೇಕು ಎನ್ನುವುದೇನೂ ಇಲ್ಲ. ಅದೇ ರೀತಿ, ನೀವು ವಿರೋಧ ಮಾಡುತ್ತೀರಿ ಎಂದು ನಾವು ಬೇಸರವನ್ನೂ ಮಾಡಿಕೊಂಡಿಲ್ಲ. ಆದರೆ ಸದನಕ್ಕೆ ಮಾಹಿತಿಯನ್ನು ಕೊಡುವಾಗ....

ಶ್ರೀ ಬಿ. ಸೋಮಶೇಖರ್ : ಅದು ಸತ್ಯಕ್ಕೆ ಹತ್ತಿರವಾಗಿರಬೇಕಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಸತ್ಯಕ್ಕೆ ದೂರವಾಗಿದ್ದರೆ ಪ್ರಿವಿಲೇಜ್ ಹಾಕಿ ಸ್ವಾಮಿ. ನೀವೂ ಸರ್ಕಾರ ನಡೆಸಿಲ್ಲವೇ?

ಶ್ರೀ ಬಿ. ಸೋಮಶೇಖರ್ : ನಾವು ಈ ರೀತಿ ನಡೆಸಲಿಲ್ಲ. ನಮ್ಮ ಆಡಳಿತದ ಮೂರೂವರೆ ವರ್ಷಗಳ ಅವಧಿಯಲ್ಲಿ 802 ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪತ್ತಿ ಮಾಡಿದೆವು.

ಶ್ರೀ ಡಿ.ಬಿ. ಚಂದ್ರೇಗೌಡ : ಹೊರಗಡೆಯಿಂದ ಒಂದು ಯೂನಿಟ್ಟಿಗೆ 2 ರೂಪಾಯಿ 65 ಪೈಸೆಯಂತೆ ಸುಮಾರು 800 ಮೆಗಾವಾಟ್ ಪವರನ್ನು ಕೊಂಡುಕೊಳ್ಳುತ್ತಿದ್ದೇವೆ.

Sri P.G.R. Sindhia : It is burden on the State Government.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ? ಕರೆಂಟು ಮೇಲಿಂದ ಇಳಿಯುತ್ತದೇನು ಅಥವಾ ಅದನ್ನು ಜನರೇಟ್ ಮಾಡಿ ಕೊಡಿಡಬಹುದೇ? ಅದನ್ನು ಕೂಡಿಡಲೂ ಅವಕಾಶವಿಲ್ಲ. ಒಂದು ಪ್ರಾಜೆಕ್ಟನ್ನು ಇವತ್ತು ಶುರುಮಾಡಿದರೆ, ಅದು ಪೂರ್ತಿಯಾಗಲು ಎಷ್ಟು ದಿವಸ ಹಿಡಿಯುತ್ತದೆ. ಏನು ಪರಿಸ್ಥಿತಿ ಎನ್ನುವುದು ಮಂತ್ರಿಯಾಗಿ ಕೆಲಸ ಮಾಡಿದ ನಿಮಗೂ ಗೊತ್ತಿರುತ್ತದೆ. ಈಗಿರತಕ್ಕಂಥ ವಾಸ್ತವ ಸ್ಥಿತಿಯನ್ನು ನಾವು ಹೇಳಿದ್ದೇವೆ.

ಇನ್ನು, ಬಹಳ ಮುಖ್ಯವಾಗಿರತಕ್ಕಂಥಾದ್ದು ರೈತರ ಆತ್ಮಹತ್ಯೆಯ ವಿಷಯ. ಎಸ್.ಎಸ್. ಪಾಟೀಲರು ಅದನ್ನು ಕೇಳುತ್ತಿದ್ದರು. ನನ್ನ ಹತ್ತಿರ ಇರತಕ್ಕಂಥ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ಒಟ್ಟು ಆಗಿರತಕ್ಕಂಥ ರೈತರ ಆತ್ಮಹತ್ಯೆಯ ಪಟ್ಟಿಯಲ್ಲಿ, ಬರಗಾಲದಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಬೇರೆಬೇರೆ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಬೇರೆಬೇರೆ ಮಾಡಿ ನಿಮಗೆ ಕೊಡುತ್ತೇನೆ. ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದು, ಆತ್ಮಹತ್ಯೆ ಮಾಡಿಕೊಂಡಂಥ ರೈತರಿಗೆ ಮಾತ್ರ, ಅಂದರೆ ಅಸಿಸ್ಟೆಂಟ್ ಕಮೀಷನರ್‌ರವರ ಅಧ್ಯಕ್ಷತೆಯಲ್ಲಿ

ನೇಮಕ ಮಾಡಿರುವ ಸಮಿತಿಯು ಯಾರಿಗೆ ಪರಿಹಾರ ಕೊಡಬೇಕೆಂದು ಶಿಫಾರಸು ಮಾಡುತ್ತದೋ, ಅವರೆಲ್ಲರಿಗೂ ಪರಿಹಾರವನ್ನು ಕೊಟ್ಟಿದ್ದೇವೆ, ಇನ್ನೂ 24 ಪ್ರಕರಣಗಳಲ್ಲಿ ಪರಿಹಾರ ಕೊಡುವುದು ಬಾಕಿ ಇದೆ. ಅದನ್ನು ಈ ತಿಂಗಳಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಈಗ ಬಂದಿರುವ ಪಟ್ಟಿಯ ಪ್ರಕಾರ 159 ಜನರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅಷ್ಟು ಜನರಿಗೆ ಡಿಸ್ಪರ್ಸ್ ಆಗಿದೆ.

ಶ್ರೀ ಎಸ್.ಎಸ್. ಪಾಟೀಲ್ : 102 ಜನ ಎಂದು ನನಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಇವತ್ತಿನ ಉತ್ತರವನ್ನು ತೆಗೆದುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : 324 ಜನ ರೈತರು ಸತ್ತಿದ್ದಾರೆ. ಅವರೆಲ್ಲರಿಗೂ ನೀವು ಕೊಡಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಹತ್ತಿರ ಇರುವ ದಾಖಲೆಯ ಪ್ರಕಾರ ಇನ್ನೂ 24 ಜನಗಳಿಗೆ ಕೊಡುವುದು ಬಾಕಿ ಇದೆ. ಅದನ್ನು ಈ ತಿಂಗಳಲ್ಲಿ ಕೊಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದು ತಪ್ಪು.

ಶ್ರೀ ಡಿ.ಬಿ. ಚಂದ್ರೇಗೌಡ : ಅದು ತಪ್ಪು ಎಂದರೆ ನಿಮ್ಮ ಹತ್ತಿರ ಇರುವುದೇ ಸರಿ ಎಂದು ತಿಳಿದುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಹಾಗಾದರೆ, ನೀವು ಹೇಳಿದುದ್ದಕ್ಕೇ ನಾವು ಹೂ ಅಂದು ಬಿಡಬೇಕೇ? 324 ಜನ ಎಂದು ನೀವೇ ಉತ್ತರ ಕೊಟ್ಟಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಬಹಳ ಮುಖ್ಯವಾದ ಮತ್ತೊಂದು ಅಂಶವೆಂದರೆ, ಮನೆ ಕಟ್ಟಿತಕ್ಕಂಥ ಕಾರ್ಯಕ್ರಮ. ಈ ಮನೆ ಕಟ್ಟತಕ್ಕಂಥ ಕಾರ್ಯಕ್ರಮವನ್ನು ಸುಮಾರು 1990-91ನೇ ಸಾಲಿನಲ್ಲಿ ಅಂದಾಜು ಮಾಡಿಸಿದೆವು.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಅದನ್ನು ನೀವು ಮಾಡಿದ್ದೀರಿ ಎಂದು ನಾವೇ ಒಪ್ಪಿಕೊಂಡಿದ್ದೇವಲ್ಲಾ. ನಿಮ್ಮ ವಿರೋಧ ಪಕ್ಷದವರೇ ಒಪ್ಪಿಕೊಂಡಿರುವಾಗ ನೀವು ಅದರ ಬಗ್ಗೆ ಏನೂ ಹೇಳಬೇಕಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಒಪ್ಪಿಕೊಂಡಿದ್ದೀರಿ. ಆದರೆ, ನನ್ನ ಬಾಯಿಂದ ದಾಖಲೆಗೆ ಹೋಗಬೇಕಲ್ಲವೇ? ಈ ಕಾರ್ಯಕ್ರಮದಲ್ಲಿ ಎಂಟೂವರೆ ಲಕ್ಷ ಮನೆಗಳನ್ನು ಕಟ್ಟಿಸಿರುವುದು ಒಂದೇ ಅಲ್ಲ. ಬಹಳ ಮುಖ್ಯವಾಗಿ ಇದರಲ್ಲಿ ಒಂದು ಅಂಶ ಏನು ಮಾಡಿದ್ದೇವೆಂದರೆ ನಿಮ್ಮ ಹಳೆಯ ಬಾಕಿಯಾದ ಒಂದು ಲಕ್ಷದ ಮೂವತ್ತೊಂಭತ್ತು ಸಾವಿರ ಮನೆಗಳನ್ನೂ ಪೂರ್ತಿಗೊಳಿಸಿದ್ದೇವೆ. ಮೇಲಾಗಿ ಹೆಣ್ಣುಮಕ್ಕಳ ಹೆಸರಿನಲ್ಲಿ ಮನೆಗಳ ದಾಖಲೆಯನ್ನು ಮಾಡುತ್ತಿದ್ದೇವೆ. ಇದು ದುರುಪಯೋಗವಾಗಬಾರದು, ಬೇರೆಯವರಿಗೆ ಮನೆ ಮಾರಿಕೊಳ್ಳಬಾರದು ಎನ್ನುವ ಸದಿಚ್ಛೆಯಿಂದ ಹೆಣ್ಣು ಮಕ್ಕಳ ಹೆಸರಿಗೆ ದಾಖಲೆ ಮಾಡುವ ಈ ಮ್ಯಾಸೀವ್ ಕಾರ್ಯಕ್ರಮದ ಬಗ್ಗೆ ನೀವೇ ಸರ್ಕಾರದ ಬೆನ್ನನ್ನು ತಟ್ಟಿದ್ದೀರಿ. ಆದ್ದರಿಂದ, ನಾನೂ ಕೂಡ ನಿಮ್ಮ ಅಭಿಪ್ರಾಯದಂತೆ ಬೆನ್ನನ್ನು ಚಪ್ಪರಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಒಂದು ಮನೆಗೆ 20 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದು ಸಾಕಾಗುವುದಿಲ್ಲ. ಇನ್ನೂ ಐದು ಸಾವಿರ ರೂಪಾಯಿಗಳನ್ನು ಕೊಡಿ ಎಂದು ಹೇಳಿದ್ದೆವು.

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ನಾವು ಬಜೆಟ್‌ನಲ್ಲಿ ಪ್ರಸ್ತಾಪ ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಬಜೆಟ್‌ನಲ್ಲಿ ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಬಹುದಿತ್ತಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಸಲಹೆಯನ್ನು ಪರಿಶೀಲನೆ ಮಾಡಲು ನಾನು ಇದನ್ನು ಮಾನ್ಯ ಮುಖ್ಯಮಮತ್ರಿಗಳ ಗಮನಕ್ಕೆ ತರುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ಅಂಶವೆಂದರೆ ನಮ್ಮ 'ಯಶಸ್ವಿನಿ' ಕಾರ್ಯಕ್ರಮ. ಈ ಕಾರ್ಯಕ್ರಮ ಬಹಳ ಒಳ್ಳೆಯ ಕಾರ್ಯಕ್ರಮ ಎಂದು ಒಪ್ಪಿಕೊಂಡಿದ್ದಾರೆ, ಸಂತೋಷ. ಅದಕ್ಕಾಗಿಯೇ ನಾನು ಹೇಳಿದೆ, ನೀವು ಒಪ್ಪಿಕೊಂಡಂಥ, ಮೆಚ್ಚಿಕೊಂಡಂಥ ಇಂಥ ಕಾರ್ಯಕ್ರಮಗಳನ್ನು ಸರ್ಕಾರ ಜಾರಿಗೊಳಿಸಿದ ಕಾರಣದಿಂದಲೇ ಪ್ರತಿಪಕ್ಷದವರಾದ ನೀವು ಜವಾಬ್ದಾರಿಯಿಂದ ನಮ್ಮ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಲಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದಕ್ಕೆ ನಾವು ಬೆನ್ನು ಚಪ್ಪರಿಸಿಕೊಳ್ಳಬಾರದೇ?

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ತರುವಂಥ ಬೇಕಾದಷ್ಟು ವಿಷಯಗಳಿದ್ದವು. ಆದರೆ, (ಮಲ್ಲಿಕಾರ್ಜುನ ಖರ್ಗೆಯವರನ್ನುದ್ದೇಶಿಸಿ) ಅಲ್ಲಿ ಕುಳಿತಿದ್ದಾರಲ್ಲಾ, ಅವರು ಮಾಡಿದ ಹಾಗೆ ನಾವು ಮಾಡಲು ಹೋಗಲಿಲ್ಲ. ಅವರು ಇಲ್ಲಿದ್ದಾಗ, ನಾವು ಕೆಲಸ ಮಾಡಿದಾಗಲೂ ಅದನ್ನು ಮಾಡಿದರು, ಏನು ವಿಷಯವಿದ್ದರೂ ಮಾಡಿದರು. ಆದರೆ ನಾವು ಅದನ್ನು ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವನ್ನೆಲ್ಲಾ ಮುಂಡರಗಿಯಲ್ಲಿ ಬಿಟ್ಟು ಬಂದಿದ್ದೀರಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಬಹಳ ಮುಖ್ಯವಾದಂಥ ಮತ್ತೊಂದು ಅಂಶವೆಂದರೆ ರಸ್ತೆ ಕಾಮಗಾರಿ. ಈ ವಿಷಯವಾಗಿ ಮಾತನಾಡಿದ ಶ್ರೀಮಾನ್ ಸಿಂಧ್ಯಾರವರು ಮತ್ತು ಎಲ್ಲರೂ, ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಆದರೆ ರಸ್ತೆಗಳಲ್ಲಿರುವ ಗುಂಡಿಗಳನ್ನು ತುಂಬಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ 20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದಕ್ಕಾಗಿಯೇ, ದಿನಾಂಕ 14–1–04ರ ಸರ್ಕಾರಿ ಆಜ್ಞೆಯ ಪ್ರಕಾರ ವಿಶೇಷವಾಗಿ ಗುಂಡಿ ಮುಚ್ಚುವ ಕಾರ್ಯಕ್ರಮಕ್ಕಾಗಿ ಪ್ರತಿ ತಾಲ್ಲೂಕಿಗೆ 20 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲ, ಅದು ಹೊಸ ರಸ್ತೆಗಳಿಗೆಂದು ಇಟ್ಟಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಅದರಲ್ಲಿ ನಾವು ಹೇಳಿದ್ದೇವೆ. ರಸ್ತೆ ರಿಪೇರಿಗೆಂದೇ ಇಟ್ಟಿದ್ದೇವೆ.

ಅಧ್ಯಕ್ಷರು : ಏಕೆ ಮಧ್ಯೆಮಧ್ಯೆ ಮಾತನಾಡುತ್ತೀರಿ. ಅವರು ಪೂರ್ತಿಯಾಗಿ ಹೇಳಿಬಿಡಲಿ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಇವರು ಕ್ಲಾರಿಫಿಕೇಷನ್‌ಗೆ ಒಂದು ಅಥವಾ ಎರಡು ಗಂಟೆ ತೆಗೆದುಕೊಳ್ಳಲಿ. ಆದರೆ ಅವರು ಪೂರ್ತಿ ಉತ್ತರ ಹೇಳುವವರೆಗೆ ಇರಬೇಕು. ಅವರಿಗೂ ಸಾಕಷ್ಟು ಟೈಂ ಇದೆ.

ಅಧ್ಯಕ್ಷರು : ಅವರಿಗೆ ಮಧ್ಯೆ ಮಾತನಾಡಬೇಡಿ ಎಂದು ಹೇಳುತ್ತಿದ್ದೇನಲ್ಲಾ.

ಶ್ರೀ ಬಿ.ಆರ್. ನೀಲಕಂಠಪ್ಪ : ಅವರಿಗೆ ಹೇಳಿ ಎಂದಲ್ಲ ನಾನು ನಿಮಗೆ ಹೇಳುತ್ತಿರುವುದು, ಜನರಲ್ಲಾಗಿ, ಎಲ್ಲರನ್ನೂ ಕಂಟ್ರೋಲ್ ಮಾಡುವ ಕೆಪಾಸಿಟಿ ನಿಮ್ಮದು. ನಾವು ಎಲ್ಲರಿಗೂ ಹೇಳುವುದಕ್ಕಾಗುವುದಿಲ್ಲ. ನೀವು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ಮಧ್ಯೆ ಇಂಟರ್‌ಪ್ಟ್ ಮಾಡಬೇಡಿ ಎಂದು ಹೇಳುತ್ತಿದ್ದೇನಲ್ಲಾ. ನೀಲಕಂಠಪ್ಪನವರೇ, ಈ ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ನೀವು ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಗುಂಡಿ ಮುಚ್ಚುವ ಕಾರ್ಯಕ್ರಮವೆಂದರೆ, ಬೀರೂರಿನಿಂದ ಚಿಕ್ಕಜಾಜೂರಿಗೆ ಹೋದಹಾಗೆ ಎಂದುಕೊಂಡಿದ್ದಾರೆ. ಅಲ್ಲಿ ಎತ್ತಿನ ಗಾಡಿಗಳೂ ಹೋಗುವುದಿಲ್ಲ.

ಅಧ್ಯಕ್ಷರು : ಚಂದ್ರೇಗೌಡರೇ, ತಾವು ಯಾರಿಗೂ ಯೀಲ್ಡ್ ಆಗಬೇಡಿ. ನೀಲಕಂಠಪ್ಪನವರೇ ನೀವು ಕುಳಿತುಕೊಳ್ಳಿ, ಮಧ್ಯೆ ಇಂಟರಪ್ಟ್ ಮಾಡಬೇಡಿ ಎಂದು ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ : ಪ್ರತಿಯೊಂದ ಮಾತಿಗೂ ಅವರು ಪದೇ ಪದೇ ತಡೆ ಮಾಡಿದರೆ ಹೇಗೆ? ನೀವು ಅದನ್ನು ದಯವಿಟ್ಟು ಕಂಟ್ರೋಲ್ ಮಾಡಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಹೌದು, ಪ್ರತಿಯೊಂದನ್ನೂ ಚರ್ಚೆ ಮಾಡುತ್ತಿದ್ದರೆ ವಿಷಯ ಹೊರಕ್ಕೆ ಬರುತ್ತದೆ. ಅದಕ್ಕೆ ಶ್ರೀ ನೀಲಕಂಠಪ್ಪನವರು ಮಧ್ಯೆ ಹೇಳುವುದೇನಿದೆ?

ಶ್ರೀ ಬಿ.ಆರ್. ನೀಲಕಂಠಪ್ಪ : ಬರೀ ಚರ್ಚೆ ಆಗಲಿ. ಈ ರೀತಿ ಮಧ್ಯೆ disturb ಮಾಡುವುದು ಏನಿದು?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 10 ಸಾವಿರ ಕಿ.ಮೀ. ರಸ್ತೆಯನ್ನು ಮೊದಲನೆ ಬಾರಿಗೆ ಈ ಸರ್ಕಾರ ಮೇಲ್ದರ್ಜೆಗೇರಿಸಿ Major District Roads ಆಗಿ ಪರಿವರ್ತನೆ ಮಾಡಿ ಅದರ ಅಭಿವೃದ್ಧಿಗಾಗಿ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದೆ. ಸುಮಾರು 2300 ಕಿ.ಮೀ. ರಸ್ತೆಯನ್ನು ವಿಶ್ವಬ್ಯಾಂಕಿನ ಸಹಾಯದಿಂದ ಪಡೆದುಕೊಂಡಂಥ ಸ್ಕೀಂನಲ್ಲಿ 2030 ಕೋಟಿ ರೂ.ನ aided projects ನಲ್ಲಿ ಈಗಾಗಲೇ ಹೆಚ್ಚು ಕಡಿಮೆ ಎಲ್ಲಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಬೇಡಿಯಪ್ಪಾ Please don't disturb. ದಯವಿಟ್ಟು ಮಧ್ಯೆ ಎದ್ದು intervene ಮಾಡಬೇಡಿ. ಅವರು ಪೂರ್ತಿ ಮಾತನಾಡಿ ಮುಗಿಸದೆ ಇರುವಾಗ ಇಲ್ಲಿ ಮಧ್ಯೆಮಧ್ಯೆ ಎದ್ದು ಮಾತನಾಡುವುದು ಯಾವ ಚರ್ಚೆ ಆಗುತ್ತದೆ? ಶ್ರೀ ನೀಲಕಂಠಪ್ಪನವರು ಆಗ ಹೇಳಿದ್ದು ಸರಿಯಾಗಿದೆ. ದಯವಿಟ್ಟು ಸುಮ್ಮನಿರಿ. ಅವರು ಪೂರ್ತಿ ಮಾತನಾಡಿ ಮುಗಿಸಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶ್ರೀ ಎಸ್.ಎಸ್. ಪಾಟೀಲರೆ, ಬಿಜಾಪುರದಲ್ಲಿ ಏನು ಭಾಷಣ ಮಾಡಿದಿರಿ ಎನ್ನುವುದನ್ನು ಮರೆತುಹೋಗಿದ್ದೀರಾ? 'ಗುಂಡಿ ಬಿದ್ದಾವಾ ಅಂದರೆ ಬಂಡಿ ಮೇಲೆ ಹೋಗಾಕ್ಕೆ ಆಗಲ್ಲರೀ, ನೀರು ಕುಡಿಯಕ್ಕೆ ಸಿಗಲಿಲ್ಲವೆಂದರೆ ಬೀರು ಕುಡಿಯಿರಿ ಎಂದು ನೀವು ಹೇಳಿದಿರಿ. ಆ ರೀತಿ ನೀವು ಹೇಳಿದವರು ನಮಗೆ ಬುದ್ಧಿ ಹೇಳುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ದುಡ್ಡು ಬಿಡುಗಡೆ ಮಾಡಿಲ್ಲ ಎಂದು ಅವರು ಹೇಳಿದರು. ನಾವು ಬಿಡುಗಡೆ ಮಾಡಿರತಕ್ಕಂಥ ಹಣ ಎಷ್ಟು ಎನ್ನುವುದನ್ನು ಹೇಳಿಬಿಡುತ್ತೇನೆ. 1999ರಿಂದ 2004ರ ವರೆಗೆ ಅಲೋಕೇಷನ್ ಮಾಡಿರತಕ್ಕಂಥದ್ದು 1548 ಕೋಟಿ ರೂಪಾಯಿಗಳು. ನಾನ್ ಪ್ಲಾನ್‌ನಲ್ಲಿ 971 ಕೋಟಿ ರೂಪಾಯಿಗಳು. ಎಲ್.ಓ.ಸಿ.ನಲ್ಲಿ 978.39 ಕೋಟಿ ರೂಪಾಯಿಗಳು ಮತ್ತು ನಾನ್ ಪ್ಲಾನ್‌ನಲ್ಲಿ

707 ಕೋಟಿ ರೂಪಾಯಿಗಳು ಇಲ್ಲಿಯವರೆಗೆ ಬಿಡುಗಡೆ ಆಗಿದೆ. 471 ಕೋಟಿ ರೂಪಾಯಿಗಳನ್ನು ಕೆಲಸಗಳಿಗಾಗಿ ಈಗಾಗಲೇ ನಾವು ಜಾರಿ ಮಾಡಿದ್ದೇವೆ. ಬಾಕಿ ಇರತಕ್ಕಂಥ ಪಟ್ಟಿ ತಮ್ಮ ಹತ್ತಿರ ಏನೋ ಇರಬಹುದು ನನ್ನ ಹತ್ತಿರ ಇಲ್ಲ. ನನಗೆ ಬಹಳ ವ್ಯಥೆ ಆಗಿದ್ದು ಏನೆಂದರೆ, ಅಕ್ಷರ ದಾಸೋಹ ಯೋಜನೆ ಜಾರಿಯಲ್ಲಿ ದೋಷ ಇದೆಯೆಂದು ಹೇಳಿದರೆ ಅದನ್ನು ಸರಿಪಡಿಸಿಕೊಳ್ಳಬಹುದು. ಆದರೆ ಅದರಿಂದ ಏನೋ ಬಹಳ ದೊಡ್ಡ ಹಾನಿಯಾಗಿದೆ ಎನ್ನುವ ತರಹದಲ್ಲಿ ಮಾನ್ಯ ಎಸ್.ಎಸ್. ಪಾಟೀಲರಂಥ ಹಿರಿಯ ಸದಸ್ಯರು ಮಾತನಾಡಿದರೆ ಹೇಗೆ? ದಯಮಾಡಿ ತಾವು ಈ ತರಹ ಸ್ವೀಪಿಂಗ್ ಸ್ಟೇಟ್‌ಮೆಂಟ್ಸ್ ಮಾಡಿದರೆ ಸರಿ ಎನಿಸುವುದಿಲ್ಲ. ಸುಮಾರು 44 ಲಕ್ಷ ಮಕ್ಕಳಿಗೆ ಈ ಬಿಸಿಯೂಟದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈಗ ನಮ್ಮಲ್ಲಿರತಕ್ಕಂಥ ಮಾಹಿತಿ ಪ್ರಕಾರ 1 ಲಕ್ಷದ 22 ಸಾವಿರ ಮಕ್ಕಳು ಹೆಚ್ಚಿಗೆ ಶಾಲೆಗೆ ಸೇರ್ಪಡೆಯಾಗಿದ್ದಾರೆ. ಕೆಲವು ಕಡೆ ಶೇಕಡ 3ರಷ್ಟು ಆಗಿದೆ ಇನ್ನು ಕೆಲವು ಕಡೆ ಶೇಕಡ 15ರಷ್ಟು ಆಗಿದೆ. ಪ್ರಸ್ತುತದಲ್ಲಿ ಒಂದರಿಂದ 5ನೇ ತರಗತಿ ವರೆಗಿರುವ ಮಕ್ಕಳಿಗೆ ಮಾತ್ರ ಈ ಸೌಲಭ್ಯ ಇರತಕ್ಕಂಥದ್ದು. ಹಾಗೆಯೇ ಸ್ತ್ರೀಶಕ್ತಿ ವಿಚಾರದಲ್ಲಿ ಆಗಲೇ ಸಾಕಷ್ಟು ಹೇಳಿದ್ದೇವೆ. ಸುಮಾರು 50 ಕೋಟಿ ರೂಪಾಯಿಗಳನ್ನು ನಾವು ಒಂದು ಲಕ್ಷ 50 ಸಾವಿರ ಸ್ತ್ರೀಶಕ್ತಿ ಗುಂಪುಗಳಿಗೆ ಕೊಟ್ಟಿದ್ದೇವೆ. ಅವರು ಸುಮಾರು 146 ಕೋಟಿ ರೂಪಾಯಿಗಳನ್ನು ಉಳಿಕೆ ಮಾಡಿದ್ದಾರೆ. ಆದ್ದರಿಂದ ಎಲ್ಲಕ್ಕಿಂತ ಮುಖ್ಯವಾಗಿ ಒಂದೆರಡು ಅಂಶಗಳನ್ನು ನಾನು ಇಲ್ಲಿ ನೆನಪಿಸಿಕೊಳ್ಳಬೇಕು. ಬಹಳ ಮುಖ್ಯವಾಗಿ ಈ ಒಳ ಮೀಸಲಾತಿ ವಿಚಾರ ಅನೇಕ ವರ್ಷಗಳ ಕಾಲ ದೀರ್ಘವಾಗಿ ಚರ್ಚೆಗೆ ಬರದೆ ನೆನೆಗುದಿಗೆ ಸಿಕ್ಕಿದಂಥ ವಿಚಾರ. ನಮ್ಮ ಸಚಿವರಾದಂಥ ಮಾನ್ಯ ಕೃಷ್ಣಪ್ಪನವರು ವಿಶೇಷವಾದಂಥ ಆಸಕ್ತಿಯನ್ನು ವಹಿಸಿ ಈಗ ಒಂದು ಆಯೋಗವನ್ನು ರಚನೆ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದಕ್ಕೆ ನೀವೆಲ್ಲರೂ ಒಪ್ಪಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು, ನಾವೆಲ್ಲರೂ ಒಪ್ಪಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ಅದಕ್ಕೆ ಆಯೋಗದ ವ್ಯವಸ್ಥೆ ಬೇಕಾಗಿರಲಿಲ್ಲ.

(ಗೊಂದಲ)

Mr. Speaker :- Please don't interrupt. ಶ್ರೀ ಪಾಟೀಲರೆ, ಮಧ್ಯೆ ಮಧ್ಯೆ ಮಾತನಾಡಬೇಡಿ ಎಂದು ಹೇಳಿದ್ದೇನೆ. ಪುನಃ ಏಕೆ ಮಾತನಾಡುತ್ತಿದ್ದೀರಿ? Let him complete.

ಶ್ರೀ ಡಿ.ಬಿ. ಚಂದ್ರೇಗೌಡ : ಈ 20ನೇ ತಾರೀಖಿಗೆ ಒಳ ಮೀಸಲಾತಿ ಆಯೋಗವು ತನ್ನ ಕಾರ್ಯಚಟುವಟಿಕೆಯನ್ನು ಪ್ರಾರಂಭಮಾಡುತ್ತಿದೆ. ಇನ್ನು KUIDFC ವಿಚಾರದಲ್ಲಿ ಒಂದು ಶಬ್ಧವನ್ನೂ ಸಹ ಹೇಳಲಿಲ್ಲ ಎಂಬ ಅಂಶವನ್ನು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ನಮ್ಮ ಚೀಫ್ ಸೆಕ್ರೆಟರಿಯವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಪುಟ 23ರಲ್ಲಿ 24ನೇ ಪ್ಯಾರಾವನ್ನು ಓದಬೇಕು. ಅದರಲ್ಲಿ "It is proposed to pose another project to the ADB seeking assistance for the development of 20 towns of Northern Karnataka and new districts." ಈ ಪ್ರಸ್ತಾಪವನ್ನು ನಾವು ಮಾಡಿದ್ದೇವೆ. ಮಾಡಿ ನಾನು ಇದೇ ಕಾರಣಕ್ಕಾಗಿ ಅಲ್ಲಿ ನಡೆಯತಕ್ಕಂಥ ವಿಶೇಷ ಅನುದಾನಕ್ಕಾಗಿ ಎ.ಡಿ.ಬಿ.ಯವರ ಪ್ರಾಜೆಕ್ಟ್‌ಗೆ ವಿದೇಶಕ್ಕೆ ಹೋಗಬೇಕಾಗಿತ್ತು. ಆದರೆ ಅನೇಕ ಕಾರಣಗಳಿಂದಾಗಿ ನಾನು ಹೋಗಲಿಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಜಗದೀಶ್‌ಶೆಟ್ಟರ್ : 1600 ಕೋಟಿ ರೂ ಪ್ರಾಜೆಕ್ಟ್.

ಶ್ರೀ ಡಿ.ಬಿ. ಚಂದ್ರೇಗೌಡ : 1600 ಕೋಟಿ ರೂ ಪ್ರಾಜೆಕ್ಟ್ ಎಂದು ಹೇಳಿದ್ದಾರೆ.

ಶ್ರೀ ಜಗದೀಶ್‌ಶೆಟ್ಟರ್ : ಇವಾಗ ಹೇಳುತ್ತೀರಿ. ಆದರೆ ಅದರಲ್ಲಿ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅಮೌಂಟ್ ಮೆನ್‌ಷನ್ ಇದರಲ್ಲಿ ಮಾಡಿಲ್ಲ. ಏಕೆಂದರೆ ಅಗ್ರಿಮೆಂಟ್ ಇನ್ನೂ ಆಗಿಲ್ಲ ನೆಗೊಶಿಯೇಷನ್ಸ್ ಹೆಚ್ಚುಕಡಿಮೆ ಕಂಪ್ಲೀಟ್ ಆಗಿದೆ. ಅದನ್ನು take off ಮಾಡುವುದಕ್ಕಾಗಿ ನಾವು ಒಂದು ತಾರೀಖನ್ನು ನಿಗದಿ ಮಾಡಿದ್ದೆವು. ಅದು ಹುಬ್ಬಳ್ಳಿಯಲ್ಲಿ ಆಗಬೇಕೋ ಅಥವಾ ಬೆಂಗಳೂರಿನಲ್ಲಿ ಆಗಬೇಕೋ ಎಂದು ಸ್ವಲ್ಪ ವ್ಯತ್ಯಾಸ ಇದೆ. ಆ ಕಾರಣಕ್ಕಾಗಿ ಪ್ರಾಜೆಕ್ಟ್ take off ಮಾಡುವುದು ಸ್ವಲ್ಪ ನಿಧಾನ, ಆದರೆ ಎಲ್ಲಾ ಕೆಲಸಕಾರ್ಯಗಳು take offಗೆ ಏನೇನು ಬೇಕೋ ಅಂಥ ಮೂಲ ವ್ಯವಸ್ಥೆಗಳನ್ನೆಲ್ಲಾ ನಾವು ಈಗ ಸಿದ್ಧ ಮಾಡಿಕೊಂಡಿದ್ದೇವೆ. ಈಗಾಗಲೇ ತುಮಕೂರಿನಿಂದ ಬೆಂಗಳೂರಿನವರೆಗೆ ಆಗಿರತಕ್ಕಂಥ ತುಮಕೂರು, ರಾಮನಗರ, ಮಂಡ್ಯಾ ಮೈಸೂರು ಮತ್ತು ಈ ಪ್ರದೇಶದಲ್ಲಿ ಅಂದರೆ ಚನ್ನಪಟ್ಟಣದ ಅಭಿವೃದ್ಧಿ ಕೆಲಸ ಮುಗಿದಿದೆ. ಸುಮಾರು 900 ಚಿಲ್ಲರೆ ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ನಾವು ದಕ್ಷಿಣ ಕನ್ನಡದಲ್ಲಿ ಮಂಗಳೂರಿನಿಂದ ಹಿಡಿದು ಕಾರವಾರದವರೆಗೆ 9 ರಿಂದ 10 ಪಟ್ಟಣಗಳ ಅಭಿವೃದ್ಧಿಗಾಗಿ ಕುಡಿಯುವ ನೀರು ಇರಬಹುದು, ಒಳಚರಂಡಿ ವ್ಯವಸ್ಥೆ ಇರಬಹುದು, ಇದಕ್ಕಾಗಿ ನಾವು ವ್ಯವಸ್ಥೇ ಮಾಡಿದ್ದೇವೆ. ಬಹಳ ಸೊಗಸಾಗಿ ಆಗಿರತಕ್ಕಂಥ ಕಾರ್ಯಕ್ರಮವಾಗಿದೆ. ತಾವು ಆ ಭಾಗಕ್ಕೆ ಹೋದರೆ ಒಂದೆರಡು ಕಡೆ ನೋಡಿಕೊಂಡು ಬರಬಹುದು. ಆದ್ದರಿಂದ ಇದನ್ನು ತಾವು ಪ್ರಸ್ತಾಪ ಮಾಡಿದ್ದೀರಿ ಇದನ್ನು ವಿಶೇಷವಾಗಿ ಸರ್ಕಾರ ಗಮನಿಸಿದೆ ಎನ್ನುವ ಮಾತನ್ನು ಹೇಳಿ, ಇನ್ನೂ ಅನೇಕ ವಿಚಾರಗಳನ್ನು ಮುಂದೆ ನಾವು ಫೆಬ್ರವರಿ ತಿಂಗಳಿನಲ್ಲಿ ಬಜೆಟ್ ಅನ್ನು ಮಂಡಿಸುವಂಥ ಕಾಲದಲ್ಲಿ ಈ ಕಾರ್ಯಕ್ರಮಗಳ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಬಹುದು. ಇನ್ನು ಈ ಪಡಿತರ ಚೀಟಿ ವಿಚಾರದಲ್ಲಿ ನಾವು ಕೊಟ್ಟಷ್ಟಾದರೂ ಕೊಡಿ ಎಂದು ಹೇಳಿದ್ದಾರೆ. ಒಂದು ಆದೇಶವನ್ನಂತೂ ಈಗ ಸರ್ಕಾರ ಕೊಟ್ಟಿದೆ. ಈ ಹಿಂದೆ ಎಷ್ಟು ಹಸಿರು ಕಾರ್ಡುಗಳನ್ನು ಕೊಟ್ಟಿತ್ತೋ ಆ ಎಲ್ಲಾ ಕಾರ್ಡುಗಳನ್ನು ನೀವು ಹಳದಿ ಕಾರ್ಡುಗಳಾಗಿ ಪರಿವರ್ತಿಸಿ ಯಾರು ಅನರ್ಹರು ಇದ್ದಾರೋ ಅವರನ್ನು ಗುರುತಿಸಿ ಸಾಕಷ್ಟು ಪರಿಶೀಲಿಸಿದ ಮೇಲೆ ಆ ಕಾರ್ಡುಗಳನ್ನು ವಿತರಣೆ ಮಾಡಬೇಕೆನ್ನುವಂಥ ಮಾತನ್ನು ಹೇಳಿದ್ದೇವೆ. ಬಹಳ ಮುಖ್ಯವಾದ ಮತ್ತೊಂದು ವಿಚಾರವನ್ನು ನಾವು ಪ್ರಸ್ತಾಪ ಮಾಡಿದ್ದೆವು. ಇದು ಒಂದು ರಾಷ್ಟ್ರೀಯ ಸಮಸ್ಯೆ. ಈ ರಾಷ್ಟ್ರೀಯ ಸಮಸ್ಯೆ ಎಂದು ಹೇಳಿದರೆ, ಸ್ವಲ್ಪ ಮಟ್ಟಿಗೆ ಆಂಧ್ರಪ್ರದೇಶದಿಂದ ಈ ನಕ್ಸಲೈಟ್ ಚಳುವಳಿ ಈಚೆಗೆ ಕರ್ನಾಟಕವನ್ನು ಪ್ರವೇಶ ಮಾಡಿರತಕ್ಕಂಥದ್ದು, ಅದರಲ್ಲೂ ವಿಶೇಷವಾಗಿ ನಮ್ಮ ಭಾಗದ ಮಲೆನಾಡು ಪ್ರದೇಶದಲ್ಲಿ ಆಗಿರತಕ್ಕಂಥ ಸ್ಥಳಗಳ ಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ವರದಿಗಳು ಬರುತ್ತಿವೆ. ಈಗ ಒಂದೆರಡು ಹಗರಣಗಳೂ ಕೂಡ ಬಹಿರಂಗವಾಗಿವೆ. ಇಂಥ ಪ್ರದೇಶದಲ್ಲಿ ಜನ ಸ್ವಲ್ಪ ಜಾಗೃತರಾಗಿರಬೇಕು.

8.50 ಪಿಎಂ

ಒಂದು ಕಷ್ಟ ಏನಾಗಿದೆ ಎಂದರೆ, ಒಂದು ಕಡೆ ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್, ಮತ್ತೊಂದೆಡೆ ಸರ್ವೋಚ್ಚ ನ್ಯಾಯಾಲಯ ಈ ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್ ವ್ಯಾಪ್ತಿಯೊಳಗೆ ಬರುವ ಪ್ರದೇಶದಲ್ಲಿ ಮಾನಿಟರಿಂಗ್ ಕಮಿಟಿ ಮಾಡಿ, ಪ್ರತಿನಿತ್ಯ ಮನುಷ್ಯ ಹೋದರೂ ತೊಂದರೆಗೆ ಸಿಕ್ಕಿಹಾಕಿಕೊಳ್ಳುವ ಪರಿಸ್ಥಿತಿ. ಮಗದೊಂದು ಕಡೆ, ಫಾರೆಸ್ಟ್ ಮತ್ತು ರೆವಿನ್ಯೂ ಇಲಾಖೆಯವರು ಭೂಮಿಯ ಮಾಪನ

ಸರಿಯಾಗಿ ಆಗದೆ, ಯಾವ ಭೂಮಿ ಯಾವ ಪ್ರದೇಶಕ್ಕೆ ಸೇರಿದೆ ಎನ್ನುವುದು ಗೊತ್ತಿಲ್ಲ. ನಾಲ್ಕನೆಯದು, ಆ ಗ್ರಾಮೀಣ ಪ್ರದೇಶದಲ್ಲಿ ತಲೆತಲಾಂತರದಿಂದ ಅಲ್ಲೇ ಹುಟ್ಟಿ, ಅಲ್ಲೇ ಬೆಳೆದು, ಅಲ್ಲೇ ಬಾಳಿ, ಅಲ್ಲೇ ಸಾಯಬೇಕಾದ ಜನ. ಆ ಜನಕ್ಕೆ ಒಂದು ರೀತಿಯ ದಿಕ್ಕು ತಪ್ಪಿಸುವ ಕೆಲಸವನ್ನು ಈ ಸಂಘಟನೆಗಳು ಮಾಡುತ್ತಿವೆ. ಫಾರೆಸ್ಟ್ ಇಲಾಖೆಯವರು, ಫಾರೆಸ್ಟ್ ಕನ್ಸರ್ವೇಷನ್ ಆಕ್ಟ್ ಬಂದಿದೆ. ಆದ್ದರಿಂದ, ನೀವು ತಕ್ಷಣ ಆ ಜಾಗವನ್ನು ಖಾಲಿ ಮಾಡಿ ಎನ್ನುತ್ತಾರೆ. ಇದರ ಜೊತೆಗೆ, ಸ್ವಲ್ಪ ನಾವು ಸುಧಾರಿಸಿಕೊಂಡು ಹೋಗಿ ಎಂದು ಹೇಳೋಣವೆಂದರೆ, ಸರ್ವೋಚ್ಚ ನ್ಯಾಯಾಲಯ ಪ್ರತಿನಿತ್ಯ ಇದನ್ನು ಮಾನಿಟರ್ ಮಾಡುವ ವ್ಯವಸ್ಥೆ ಇದೆ ಆದ್ದರಿಂದ, ಈ ವಿವರಗಳನ್ನು ನಾವು ಗಮನಿಸಿ, ಈಗಾಗಲೇ ತೊಂದರೆಗೊಳಗಾದ ಪ್ರದೇಶಗಳಲ್ಲಿ ಒಂದು ಸಮಗ್ರ ಯೋಜನೆಯನ್ನು ತಯಾರು ಮಾಡಿ, ಸುಮಾರು 60 ಕೋಟಿ ರೂ. ಅಂದಾಜಿನಲ್ಲಿ ಅವರಿಗೆ ಪುನರ್ವಸತಿಯನ್ನು ಕಲ್ಪಿಸಬೇಕಾಯಿತು. ಇದು ಹೊಸದಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಟೈಗರ್ ಪ್ರಾಜೆಕ್ಟ್ ಎಂದು ಮಾಡಿ, ಸುಮಾರು 732 ಕುಟುಂಬಗಳನ್ನು ನ್ಯಾಷನಲ್‌ಗಾಗಿ ಅಲ್ಲಿಗೆ ಸ್ಥಳಾಂತರಿಸಿದ್ದೇವೆ. ಬಹುಶಃ ಅದು ಇಡೀ ರಾಷ್ಟ್ರದಲ್ಲೇ ಅತ್ಯಂತ ಪ್ರತಿಷ್ಠಿತವಾದ ಒಂದು ಸ್ಥಳಾಂತರದ ಕೆಲಸ. 600 ಚಿಲ್ಲರೆ ಕುಟುಂಬಗಳನ್ನು ತಾವು ಶಿವಮೊಗ್ಗಕ್ಕೆ ಹೋಗುತ್ತಾ, ದಾರಿಯಲ್ಲಿ ತರೀಕೆರೆಯಿಂದ ಮುಂದಕ್ಕೆ ನೋಡುತ್ತೀರಿ. ಅಂಥ ಒಂದು ಪ್ರಾಜೆಕ್ಟ್‌ನ್ನು ತಯಾರಿಸಿ, ಅವರಿಗೆ ಕೊಟ್ಟಿದ್ದೇವೆ. ಯಾರನ್ನೂ ಬಲವಂತವಾಗಿ ಬಿಡಿಸುವ ಕಾರ್ಯಕ್ರಮವಿಲ್ಲ. ಅಲ್ಲೇ ಬದುಕಬೇಕೆನ್ನುವ ಜನರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತೇವೆ. ಈ ತೊಂದರೆಗೆ ಸಿಕ್ಕಿಹಾಕಿಕೊಂಡ ಪ್ರದೇಶಗಳಿಗೆ ಸಂಬಂಧಿಸಿದಂತೆ ಮಾನ್ಯ ಗೃಹ ಸಚಿವರನ್ನು, ನಾನು ಪೊಲೀಸ್ ಇಲಾಖೆಯವರನ್ನು ಸಂಪರ್ಕಿಸಿದ್ದೇನೆ. ವಿಶೇಷವಾದ ಟಾಸ್ಕ್‌ಫೋರ್ಸ್ ಮಾಡಿ, ಜನರಿಗೆ, ಅವರಿಂದ ರಕ್ಷಣೆ ಸಿಗುತ್ತಿಲ್ಲವೆಂಬ ಭಾವನೆ ಇದೆ. ಅದನ್ನು ಹೋಗಲಾಡಿಸುವುದಕ್ಕೆ ಈ ಟಾಸ್ಕ್‌ಫೋರ್ಸ್ ಮಾಡುವ ಆಲೋಚನೆ ಮಾಡಿದ್ದೇವೆ. ಇವಿಷ್ಟು ವಿಚಾರಗಳನ್ನು ಮಾನ್ಯ...

ಶ್ರೀ ಆರಗ ಜ್ಞಾನೇಂದ್ರ : ಪ್ಯಾಕೇಜ್ ಅನೌನ್ಸ್ ಮಾಡಿದ್ದೀರಲ್ಲಾ, ಅದೇನಾಯಿತು?

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಹೊರಬರುತ್ತೀರೆಂದರೆ, ನಿಮ್ಮನ್ನು ಬಿಡುಗಡೆಗೆ ತರಬಹುದು. ನೀವು ಒಳಗಡೆ ಇದ್ದು, ಪ್ರಾಜೆಕ್ಟ್ ಕೊಡುವುದಕ್ಕಾಗುತ್ತದೆಯೇ, ಯಾರಿಗೆ ಕೊಡುವುದು? 60 ಕೋಟಿ ರೂ.ಗಳನ್ನು ರೀಹ್ಯಾಬಿಲೇಟೇಷನ್ ಪ್ಯಾಕೇಜ್‌ಗಾಗಿ ಕೊಟ್ಟಿದ್ದೇವೆ. ನಾನು ಹೇಳುತ್ತೇನೆ. ರೀಹ್ಯಾಬಿಲೇಟೇಷನ್ ಪ್ರಾಜೆಕ್ಟ್. ನಾನು ವಿವರಗಳನ್ನು ನಿಮಗೆ ಕೊಡುತ್ತೇನೆ. ಇಷ್ಟು ಅಂಶಗಳನ್ನು ತಮ್ಮ ಮೂಲಕ ತಿಳಿಸಬಯಸುತ್ತೇನೆ. ಮಾನ್ಯ ಎಸ್.ಎಸ್. ಪಾಟೀಲರು, ಸರ್ಕಾರದ ಕಡೆಯಿಂದ ಬಾವಿ ತೆಗೆಸುವ ಕಾರ್ಯಕ್ರಮಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರೆಂದು ಹೇಳಿದರು. ನನಗೆ ಸಿಕ್ಕಿರುವ ಮಾಹಿತಿಯಲ್ಲಿ, ಈಗಾಗಲೇ ರಾಜ್ಯ ಸರ್ಕಾರ ಕಳೆದ ವರ್ಷ 14.90 ಕೋಟಿ ರೂ.ಗಳನ್ನು ಈ ಸಾರಿ 9.02 ಕೋಟಿ ರೂ.ಗಳನ್ನು ಹೊಸ ಬೋರ್‌ವೆಲ್ ತೆಗೆಯಲು ಹಣ ಬಿಡುಗಡೆ ಮಾಡಿದ್ದೇವೆ. ಈ ಸಾರಿ ಕೇಂದ್ರ ಸರ್ಕಾರ ಅನುಮತಿ ಕೊಟ್ಟರೆ, ಇನ್ನೂ ಹೊಸ ಬೋರ್‌ವೆಲ್‌ಗಳನ್ನು ತೆಗೆಯುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಇಷ್ಟು ವಿಚಾರಗಳನ್ನು ಪ್ರಸ್ತಾಪಿಸಿ, ಇಷ್ಟು ದೀರ್ಘ ಕಾಲ ಚರ್ಚೆಯಲ್ಲಿ ಪಾಲ್ಗೊಂಡು ಸರ್ಕಾರಕ್ಕೆ ಸಲಹೆ, ಮಾರ್ಗದರ್ಶನವನ್ನು ತಾವು ಮಾಡಿದ್ದೀರಿ. ಅದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇನ್ನೂ ವಿಸ್ತೃತವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭ

ಬಂದರೆ, ಅದನ್ನು ತೆಗೆದುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಶಾಸಕರ ನಿಧಿ ಬಗ್ಗೆ ಹೇಳಿದ್ದೇವೆ. ಇದು ಬಡ್ಜೆಟ್‌ಗೆ ಸಂಬಂಧಪಟ್ಟಿದ್ದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ್ : ಹೋದ ಬಡ್ಜೆಟ್‌ನಲ್ಲಿ ಅನೌನ್ಸ್ ಮಾಡಿದ ಹಣ ರಿಲೀಜ್ ಆಗಿಲ್ಲವಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : 15 ದಿವಸಗಳಲ್ಲಿ ಬರುತ್ತಿದೆ. ನೋಡೋಣ. ಕರ್ನಾಟಕ ರಾಜ್ಯಪಾಲರು ರಾಜ್ಯದ ವಿಧಾನ ಮಂಡಲದಲ್ಲಿ ದಯಪಾಲಿಸಿದ ಭಾಷಣವನ್ನು ತಾವು ಸಂಪೂರ್ಣವಾಗಿ ಅನುಮೋದನೆ ಮಾಡಬೇಕು. ಒಮ್ಮತದ ನಿರ್ಣಯವನ್ನು ಮಾಡಿ, ರಾಜ್ಯಪಾಲರಿಗೆ ವಂದನೆಯನ್ನು ಮಾಡುವ ನಿರ್ಣಯವನ್ನು ಕಳುಹಿಸಿಕೊಡಲು ತಾವೆಲ್ಲಾ ಸಹಕರಿಸಬೇಕೆಂದು ಅತ್ಯಂತ ವಿನಯದಿಂದ ನಿಮ್ಮನ್ನೆಲ್ಲಾ ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ನಾವು ಸ್ಪೆಸಿಫಿಕ್ ಆಗಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದೆವು. ಪ್ಯಾಕೇಜ್‌ಗಳ ಬಗ್ಗೆ ಏನೂ ಮಾತನಾಡಲಿಲ್ಲ. ನೇಕಾರರ ಪ್ಯಾಕೇಜ್ ಏನಾಯಿತು? ಅದರ ಬಗ್ಗೆ ಏನೂ ಹೇಳಲಿಲ್ಲ. ಶಾಸಕರ ನಿಧಿ ಬಗ್ಗೆ......

ಶ್ರೀ ಅಲ್ಲಂ ವೀರಭದ್ರಪ್ಪ (ಜಲಸಂಪನ್ಮೂಲ ಸಚಿವರು) : ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಿದಂತೆ, ಬೆಳಗಾಂ ಜಿಲ್ಲೆಯ ಚಿಕ್ಕೋಡಿ, ಅಥಣಿ, ರಾಯಭಾಗ್ ತಾಲ್ಲೂಕುಗಳಿಗೆ ಕೊಯ್ನಾ ನದಿಯಿಂದ ಒಂದು ಟಿಎಂಸಿ ನೀರನ್ನು ಕುಡಿಯಲು ಬಿಡುವುದಕ್ಕೆ ಈಗಾಗಲೇ ಮಹಾರಾಷ್ಟ್ರ ಸರ್ಕಾರ ಒಪ್ಪಿದೆ. ಈ ಪ್ರಕ್ರಿಯೆ ಬರುವ ವಾರದಿಂದ ಪ್ರಾರಂಭವಾಗುತ್ತದೆ. ಹಾಗೂ ನಮ್ಮ ಕರ್ನಾಟಕದ ಭೀಮಾ ನದಿಯಲ್ಲಿರುವ 4 ಬ್ಯಾರೇಜುಗಳಿಗೆ ಮತ್ತು ಮಹಾರಾಷ್ಟ್ರದ 4 ಬ್ಯಾರೇಜುಗಳಿಗೆ ಅಲ್ಲಿ ಬರುವ ರೈತರ ಸಮಸ್ಯೆಗಳಾಗಲಿ, ಕುಡಿಯುವ ನೀರಿಗಾಗಲಿ, ನಾವು ಎರಡೂ ಸರ್ಕಾರಗಳು ಒಪ್ಪಿಗೆ ಕೊಟ್ಟು, ಅವರು 5 ಬ್ಯಾರೇಜುಗಳನ್ನು ಫುಲ್ ಮಾಡಬೇಕೆಂದೂ ಹಾಗೂ ನಾವು 3 ಬ್ಯಾರೇಜುಗಳನ್ನು ಫುಲ್ ಮಾಡಬೇಕೆಂದು ನಿರ್ಧರಿಸಲಾಗಿದೆ. ಏಕೆ ಈ ಒಪ್ಪಿಗೆ ನೀಡಿದ್ದೇವೆಂದರೆ, ಬೆಳಗಾವಿಗೆ ನೀರನ್ನೇನು ಕೊಡಬೇಕಾಗಿತ್ತು. ಅದನ್ನು ಕೊಡುವುದಿಲ್ಲವೆಂದು. ನಾವು ಇಡೀ ತಾಲ್ಲೂಕಿನಿಂದ ನೀರು ಬಿಡುತ್ತೇವೆಂದು ಹೇಳಿದ್ದಕ್ಕೆ ಅವರು ಒಪ್ಪಿಕೊಂಡು ಒಂದು ಟಿಎಂಸಿ ನೀರಿಗೆ, ಏನೂ ಹಣ ಕೇಳಿದೆ ಕೊಡುತ್ತಿದ್ದಾರೆ. ಪ್ರತಿಸಲ ನಾವು ಒಂದು ಟಿಎಂಸಿ ನೀರಿಗೆ 3--4 ಕೋಟಿ ರೂ. ಕೊಡುತ್ತಿದ್ದೆವು. ಈಗ ನೀರು ಬಿಡಬೇಕು. ಮಾರ್ಚ್ ತಿಂಗಳಲ್ಲಿ 1.5 ಟಿಎಂಸಿ ನೀರನ್ನು ಬಿಡಬೇಕೆಂದು ಹೇಳಿದ್ದೇವೆ. ತಾವು ಇನ್ನೊಂದು ಪ್ರಶ್ನೆ ಕೇಳಿದ್ದಿರಿ, ಕಳಸ ಮತ್ತು ಬಂಡೂರು ನಾಲೆ ಬಗ್ಗೆ, ಜೋಡಣೆ ಮಾಡಬೇಕು. ಇದನ್ನು ಮಾಡುವುದರಿಂದ ಮಲಪ್ರಭಾ ಯೋಜನೆಗೆ ಕೂಡ ಅನುಕೂಲವಾಗುತ್ತದೆ. ಅದಕ್ಕಿಂತ ಹೆಚ್ಚಾಗಿ ಇವತ್ತು ಹುಬ್ಬಳ್ಳಿ-ಧಾರವಾಡಕ್ಕೆ ಕುಡಿಯುವ ನೀರಿಗೆ 7 ಟಿಎಂಸಿ ನೀರು ಬೇಕಾಗುತ್ತದೆಂಬುದು ತಮಗೆಲ್ಲ ಗೊತ್ತಿರುವ ವಿಷಯ. ತಮಗೆ ಗೊತ್ತಿದೆ. ಈ ಕಳಸ ಮತ್ತು ಬಂಡೂರು ನಾಲೆಗಳು ನದಿಯ ಮಹದಾಯಿ ಟೆರಿಟರಿಯಲ್ಲಿ ಬರುತ್ತದೆ. ಇದು ಕೂಡ ಬಹಳ ಥಿಕ್ ಫಾರೆಸ್ಟ್ ಮೂಲಕ ಬರುತ್ತಿದೆ. ಈ ಯೋಜನೆ ತೆಗೆದುಕೊಳ್ಳಬೇಕಾದರೆ, ನಾವು ಸೆಂಟ್ರಲ್ ಗೌರ್ನಮೆಂಟ್ ಮೂಲಕ ಫಾರೆಸ್ಟ್ ಇಲಾಖೆಯಿಂದ ಪರ್ಮಿಷನ್ ತೆಗೆದುಕೊಳ್ಳಬೇಕಾಗಿದೆ. ಅದು ಬಹಳ ನಿರೀಕ್ಷೆಯಲ್ಲಿದೆ. ನಾವು ಇವತ್ತು ಕುಡಿಯುವ ನೀರಿಗೆ ಕೇಳಿದ್ದೇವೆ. ನಮ್ಮ ಪಾಲಿನ 40 ಟಿಎಂಸಿ ಇದ್ದರೂ ಕೂಡ ಕೂಡಲೇ ವಾಟರ್ ಡ್ರಿಂಕಿಂಗ್ ಪ್ರಾಬ್ಲಂ ಎಂದು ಹೇಳಿ 7 ಟಿಎಂಸಿಗೆ ಈ ಜೋಡಣೆಯಿಂದ ಅನುಕೂಲವಾಗುತ್ತದೆ ಕೇಳಿದ್ದೇವೆ. ಫಾರೆಸ್ಟ್ ಇಲಾಖೆಯಿಂದ

ಕ್ಲಿಯರೆನ್ಸ್ ಬಂದ ನಂತರ, ಈ ಕಾರ್ಯವನ್ನು ಪ್ರಾರಂಭಿಸುತ್ತೇವೆಂದು ಹೇಳುತ್ತಿದ್ದೇವೆ. ತಾವು ಬಾಗಲಕೋಟೆ, ಪ್ಯಾಕೇಜ್ ಬಗ್ಗೆ ಕೊಡುವ ಬಗ್ಗೆ ಹೇಳಿದ್ದೀರಿ. ಈಗಾಗಲೇ 5 ಕೋಟಿ ರೂ.ಗಳನ್ನು ನಾವು ಖರ್ಚು ಮಾಡಿದ್ದೇವೆ. 40 ಕೋಟಿ ರೂ. ಈಜ್ ಇನ್ ಪ್ರೋಸೆಸ್. 400 ಕೋಟಿ ರೂ.ಗಳನ್ನು ಈಗ ನಾವೇನು ಕಾಂಪನ್‌ಸೇಷನ್ ಕೊಡಬೇಕು, ಆ ಕಾಂಪನ್‌ಸೇಷನ್ ಫಾರ್ಮಾಲಿಟೀಸ್ ನಡೆಯುತ್ತಿವೆ. ಕೂಡಲೇ ಆ 400 ಕೋಟಿ ರೂ.ಗಳನ್ನು ನಾವು ಬಿಡುಗಡೆ ಮಾಡುತ್ತೇವೆ. ಅದಕ್ಕೆ ಸಿದ್ಧರಾಗಿದ್ದೇವೆ. ಬಳ್ಳಾರಿ ಪ್ಯಾಕೇಜ್ ಬಗ್ಗೆ ಕೇಳಿದ್ದೀರಿ. 3000 ಕೋಟಿ ರೂ.ಗಳಲ್ಲಿ 2,500 ಕೋಟಿ ರೂ.ಗಳು, ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಅಗ್ರಿಮೆಂಟ್ ಆಗಿದೆ, 16 ತಿಂಗಳೊಳಗೆ ಪ್ರಾರಂಭಿಸಬೇಕೆಂದು ಹೇಳಿ, ಈಗಾಗಲೇ 5–6 ಕೋಟಿ ರೂ. ಅವರು ಖರ್ಚು ಮಾಡಿದ್ದಾರೆ. ಅದು 16 ತಿಂಗಳೊಳಗೆ ಕಮೆನ್ಸ್ ಆಗುತ್ತದೆ. ಅದರ ಬಗ್ಗೆ ಅಗ್ರಿಮೆಂಟ್ ಆಗಿದೆ. ಈಗ 500 ಕೋಟಿ ರೂ.ಗಳಲ್ಲಿ ಕೂಡ ಈಗ ನಾವು 300 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಪ್ರತಿಯೊಂದು ಹಂತ ಹಂತದಲ್ಲೂ ಸಹ ಟೆಂಡರ್ ಕರೆಯಲು, ಯಾವ ಟೆಂಡರ್‌ನಲ್ಲಿ ಈ ಕೆಲಸವಾಗುತ್ತದೋ, ಅದಕ್ಕೆ ಬಾಕಿ ಹಣ ಕೊಡಲು ನಾವು ಪ್ರಯತ್ನಿಸುತ್ತಿದ್ದೇವೆ. ಈ ಪ್ಯಾಕೇಜ್ ಬಗ್ಗೆ ನಾವೊಂದೇ ಮೀಟಿಂಗ್ ಮಾಡಿಲ್ಲ. ವಿಧಾನ ಪರಿಷತ್ತಿನ ಶಾಸಕರಾದ ಮಾನ್ಯ ಎಂ.ಪಿ. ಪ್ರಕಾಶ್‌ರವರೂ ಕೂಡ ಪ್ರತಿ ಮೀಟಿಂಗ್‌ನಲ್ಲಿ ಭಾಗವಹಿಸಿ, ನಮಗೆ ಶಹಭಾಷ್‌ಗಿರಿ ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ತಮಗೆ ಬೇಕಾದವರಿಗೆ 5 ಕೋಟಿ ರೂ. 10 ಕೋಟಿ ರೂ ರಿಲೀಸ್ ಮಾಡುತ್ತಿದ್ದಾರೆ. ನಾವು ಸಾಕಷ್ಟು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೇಳಿದ್ದೆವು. ನೇಕಾರರ ಪ್ಯಾಕೇಜ್ ಬಗ್ಗೆ ಏನು ಎಂಬುದರ ಬಗ್ಗೆ ವಿಷಯವೇನನ್ನೂ ಹೇಳಲಿಲ್ಲ. ಡಾ॥ ನಂಜುಂಡಪ್ಪನವರ ವರದಿಯ ಅನುಷ್ಠಾನದ ಬಗ್ಗೆ ಏನೂ ಮಾತನಾಡಲಿಲ್ಲ. ಹೈಕೋರ್ಟ್ ಬೆಂಚ್ ಉತ್ತರ ಕರ್ನಾಟಕದಲ್ಲಿ ಮಾಡುವ ಬಗ್ಗೆ ಸರ್ಕಾರದ ಕಡೆಯಿಂದ ಏನೂ ಸ್ಪಂದನ ಬರಲಿಲ್ಲ. ಅಂದರೆ ನಿಜವಾದಂಥ ವಿಷಯಗಳು ಏನಿವೆ ಅದರ ಬಗ್ಗೆ ಸರ್ಕಾರದವರು ಮಾತನಾಡಲಿಕ್ಕೆ ತಯಾರಿಲ್ಲ. ಆ ಮೇಲೆ ಶಾಸಕರ ನಿಧಿಗೆ 40 ಲಕ್ಷ ರೂಪಾಯಿಗಳನ್ನು ಕೊಡುವ ಬಗ್ಗೆ ಬಜೆಟ್‌ವರೆಗೆ ಕಾಯಬೇಕಾಗಿಲ್ಲ. ಇದನ್ನು ಹಿಂದೆಯೇ ಕೊಡುತ್ತೇವೆಂದು ಸರ್ಕಾರದ ಕಡೆಯಿಂದ announce ಮಾಡಿದ್ದಿರಿ. ಪುನಃ ಇದಕ್ಕೆ ಬಜೆಟ್ ಸಲುವಾಗಿ ಏಕೆ ಕಾಯಬೇಕು? ಕಳೆದ ವರ್ಷ 40 ಲಕ್ಷ ರೂಪಾಯಿ ಬಿಡುಗಡೆ ಆಗಬೇಕಾಗಿತ್ತು. ಆದರೆ ಆ ಹಣ ಬಿಡುಗಡೆ ಆಗಿಲ್ಲ. ಅದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಏನು? ಸರ್ಕಾರದವರು ಇವತ್ತು ಏನು ಮಾಡುತ್ತಿದ್ದಾರೆಂದರೆ ಕಾಂಗ್ರೆಸ್ ಕಾರ್ಯಕರ್ತರು ಯಾರಿದ್ದಾರೆ ಅವರಿಗೆ ಮುಖ್ಯಮಂತ್ರಿಗಳೇ ತಮ್ಮ ನಿಧಿಯಿಂದ ಅವರ ಅಧಿಕಾರದಿಂದ ಕೊಟ್ಟುಕೊಂಡು ಹೋಗಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ತುರುವೇಕೆರೆ ಶಾಸಕರ ಕ್ಷೇತ್ರದಲ್ಲಿ ಜಗ್ಗೇಶ್ ಎಂಬುವವರು, ನಿಮ್ಮ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಮೆಂಬರ್ ಅವರಾಗಿದ್ದಾರೆ. ಅವರು direct ಆಗಿ ಮುಖ್ಯಮಂತ್ರಿಗಳ ಹತ್ತಿರ ಹೋಗಿ 20 ಲಕ್ಷ ರೂಪಾಯಿಗಳನ್ನು ರಸ್ತೆ ಅಭಿವೃದ್ಧಿಗೆಂದು ಮಂಜೂರು ಮಾಡಿಸಿಕೊಂಡು ಬರುತ್ತಾರೆ. ಇದು ಕರ್ನಾಟಕ ಸರ್ಕಾರದ ನಡವಳಿಕೆಗಳು. ಇದು Government Order. ಶಾಸಕರು ಹೋದರೆ ಹಣ ಸಿಗುವುದಿಲ್ಲ. ಶಾಸಕರಿಗೆ 40 ಲಕ್ಷ ರೂ ಹಣ ಕೂಡ ಇಲ್ಲ. ಆದರೆ ಇವತ್ತು ನಿಮ್ಮ ಕಾಂಗ್ರೆಸ್‌ನ ಕಾರ್ಯಕರ್ತರು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಹಣ ತೆಗೆದುಕೊಳ್ಳುವುದಕ್ಕೆ ಇವತ್ತು

Government Order ಆಗುತ್ತದೆ. ಹೀಗಾಗಿ ಇವತ್ತು ಶಾಸಕರ ನಿಧಿ ಎಂದರೆ, ಕಾಂಗ್ರೆಸ್‌ನವರು ಬಹುಶಃ ಇವತ್ತು ಏತಕ್ಕೆ ಸುಮ್ಮನೆ ಕುಳಿತುಕೊಂಡಿದ್ದಾರೆಂದರೆ ಅವರಿಗೆ ಮುಖ್ಯ ಮಂತ್ರಿಗಳಿಂದ ನೇರವಾಗಿ 40 ಲಕ್ಷ ರೂ ಒಂದು ಕೋಟಿ ರೂ ಹಣ ಬೇಗನೆ ರಿಲೀಸ್ ಆಗುತ್ತದೆ. ಆದರೆ ಪ್ರತಿಪಕ್ಷದ ಶಾಸಕರಿಗೆ ಇವತ್ತು ಅಭಿವೃದ್ಧಿಗೆ ಹಣ ಸಿಗುತ್ತಿಲ್ಲ. ಇಲ್ಲಿ ಒಂದು ಉದಾಹರಣೆ ಇದೆ ಇದನ್ನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಕಳುಹಿಸಿಕೊಡುತ್ತಿದ್ದೇನೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ ಇದರ ಮುಖಾಂತರ injustice ಮಾಡುತ್ತಿದ್ದೀರಿ ಅನ್ಯಾಯಗಳನ್ನು ಮಾಡುತ್ತಿದ್ದೀರಿ. ಎಲ್ಲಾ ಶಾಸಕರನ್ನು ಸಮಾನವಾಗಿ ನೋಡುವಂಥದ್ದು ಆಗಬೇಕು. ಆದರೆ ಅದು ಆಗುತ್ತಿಲ್ಲ. ಅದಕ್ಕೆ ಇದೇ ಒಂದು ಉದಾಹರಣೆ. ಇವತ್ತು ಕಾಂಗ್ರೆಸ್‌ನ ಮುಖ್ಯಮಂತ್ರಿಗಳು ಕಾಂಗ್ರೆಸ್‌ನ ಕಾರ್ಯಕರ್ತರಿಗೆ ಯಾವ ರೀತಿ encouragement ಕೊಡುತ್ತಿದ್ದೀರಿ ಅನ್ನುವಂಥದ್ದಕ್ಕೆ ಇದು ಒಂದು ಉದಾಹರಣೆ. ಆ ಜಗ್ಗೇಶ್ ಎನ್ನುವವರಿಗೆ ಏನಾದರೂ ಅಧಿಕಾರ ಇದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಒಂದ್ನಿಮಿಷ, ತಾವು ಹೈಕೋರ್ಟ್ ವಿಚಾರ ಪ್ರಸ್ತಾಪ ಮಾಡಿದಿರಿ. ಅದು ನನಗೆ ಸಂಬಂಧಪಟ್ಟ ವಿಚಾರವಾದ್ದರಿಂದ ಒಂದು ಅಂಶ ಹೇಳಿಬಿಡುತ್ತೇನೆ. ಕಾನೂನು ಮಂತ್ರಿಗಳಾಗಲೀ, ಮುಖ್ಯ ಮಂತ್ರಿಗಳಾಗಲೀ ಮುಖ್ಯ ನ್ಯಾಯಮೂರ್ತಿಯವರನ್ನು ಭೇಟಿ ಮಾಡಿಲ್ಲ. ಅವರ ಜೊತೆ ಚರ್ಚೆ ಮಾಡಿಲ್ಲ. ತೀರ್ಮಾನ ತೆಗೆದುಕೊಂಡಿಲ್ಲವೆಂದು ತಾವು ಹೇಳಿದ್ದೀರಿ. ಆದರೆ ನಾನು ಎರಡು ಸಾರಿ ಅವರನ್ನು ಮುಖತಃ ಭೇಟಿ ಮಾಡಿದ್ದೇನೆ. ಮೀಟಿಂಗ್ ಆದಮೇಲೆ ಪುನಃ 2 ಸಾರಿ ಅವರನ್ನು ಭೇಟಿ ಮಾಡಿ ಹೈಕೋರ್ಟ್ ವಿಚಾರವಾಗಿ ಏನಾದರೂ ನಿರ್ಣಯವನ್ನು ತೆಗೆದುಕೊಳ್ಳಬೇಕೆನ್ನುವ ಒತ್ತಡವನ್ನು ತಂದಿದ್ದೇವೆ. The ball is in the court of High Court. ನಾನು ತಮಗಷ್ಟು ಮಾಹಿತಿ ಕೊಡಬಹುದು. ನಾವು ಸೀರಿಯೆಸ್ಸಾಗಿ ವಿಚಾರವನ್ನು ಮುಖ್ಯನ್ಯಾಯಾಧೀಶರ ಜೊತೆಗೂ ಚರ್ಚೆ ಮಾಡಿದ್ದೇವೆ. ಮುಖ್ಯಮಂತ್ರಿಗಳು ಕೂಡ ಚರ್ಚೆ ಮಾಡಿದ್ದಾರೆ. ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳುವವರು ಅವರು, ಆದುದರಿಂದ ಮತ್ತೆ....

ಶ್ರೀ ಜಗದೀಶ್ ಶೆಟ್ಟರ್ : ಮುಖ್ಯಮಂತ್ರಿಗಳು ಹೋಗಬೇಕಾಗಿತ್ತು ಇವತ್ತಿನವರೆವಿಗೂ ಹೋಗಿಲ್ಲ. He is not interested. The Government is not interested to establish the Bench.

ಶ್ರೀ ಡಿ.ಬಿ. ಚಂದ್ರೇಗೌಡ : ಹೋಗಿದ್ದಾರೆ ಅವರ ಜೊತೆ ಮಾತನಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ನಾನು ಇಲ್ಲಿ ಹೇಳುವುದು ಏನೆಂದರೆ, ಸರ್ಕಾರ ಸ್ಪಷ್ಟವಾದಂಥ ಯಾವುದೇ ಭರವಸೆಯನ್ನು, ಉತ್ತರವನ್ನು ಕೊಡಲಿಲ್ಲ. ಆಮೇಲೆ ನಾವು ಆಗಲೇ ಸಿಬಿಐ ಕೇಸ್ ರೆಫರ್ ಮಾಡಿದ್ದೇನೆ. * * ಅವರು ತಕ್ಷಣ ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ. ಅದಕ್ಕಾಗಿ ಸರ್ಕಾರ ಸರಿಯಾದಂಥ ಉತ್ತರವನ್ನು ಕೊಡಲಿಲ್ಲ.

ಅಧ್ಯಕ್ಷರು : ಒಂದ್ನಿಮಿಷ, ತಾವು ಈಗ ಲಾಸ್ಟ್ ಸೆಂಟೆನ್ಸ್ ಏನು ಹೇಳಿದಿರಿ, ಸಿಬಿಐದ ಬಗ್ಗೆ, ದಯವಿಟ್ಟು, ಇಲ್ಲಿ ಕೇಳಿ. ಶಾಸನ ಸಭೆಗೆ ಯೋಗ್ಯವಲ್ಲದ ಪದಗಳು, "1996ನೇ ಇಸ್ವಿ ಪ್ರಧಾನಿಯವರ ಮಗ ಎನ್ನುವ ಪದವನ್ನು ತೆಗೆದು ಹಾಕಲಾಗಿದೆ" ಇಲ್ಲಿ ನಮ್ಮ ಹೌಸ್‌ನಲ್ಲಿ ನಡೆದಿರುವುದು.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

"ದಿನಾಂಕ 23–7–96 ರಂದು ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಯು.ಆರ್. ಸಭಾಪತಿಯವರು ಪ್ರಧಾನಿಯವರ ಮಗ ಎಂದು ಉಪಯೋಗಿಸಿದ್ದನ್ನು ಮಾನ್ಯ ಸಭಾಧ್ಯಕ್ಷರು ಪ್ರಧಾನಿಯವರ ಮಗ ಎನ್ನುವ ಪದವನ್ನು ಕಡತದಿಂದ ತೆಗೆಯಲು ಆದೇಶಿದರು" ಅದೇರೀತಿ ಮೇಲಿನ ತೀರ್ಪಿನ ಆಧಾರದಂತೆ ಈಗಾಗಲೇ ತಿಳಿಸಿದಂತೆ ಮಾನ್ಯ ವಿರೋಧ ಪಕ್ಷದ ನಾಯಕರು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಉಪಯೋಗಿಸಿದ ಮುಖ್ಯಮಂತ್ರಿಗಳ ಅಳಿಯ ಎನ್ನುವ ಪದವನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ ಏನು ತಪ್ಪಿದೆ? ಇದರಲ್ಲಿ ತಪ್ಪಿಲ್ಲ ತಾವು ದಯವಿಟ್ಟು ಇದನ್ನು ರೀಕನ್ಸಿಡರ್ ಮಾಡಬೇಕು ಎನ್ನುವುದು ನಮ್ಮ ಮನವಿ.

ಅಧ್ಯಕ್ಷರು : ಅದು ಕನ್‌ವೆನ್‌ಷನ್. This is my order.

ಶ್ರೀ ಜಗದೀಶ್ ಶೆಟ್ಟರ್ : ಇದೊಂದು ಭ್ರಷ್ಟ ಸರ್ಕಾರ.

ಅಧ್ಯಕ್ಷರು : This is my order. ರೂಲಿಂಗ್ ಕೊಟ್ಟಿದ್ದೇನೆ. ದಯವಿಟ್ಟು ರೂಲಿಂಗ್ ಅನ್ನು ಪ್ರಶ್ನೆ ಮಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾನು ಎಫ್.ಐ.ಆರ್. ಕೊಟ್ಟಿದ್ದೇನೆ. ಆ ಕಂಪನಿ ಏನು ಇದೆ ಅದು

ಅಧ್ಯಕ್ಷರು : ನಾನು ರೂಲಿಂಗ್ ಕೊಟ್ಟಿದ್ದೇನೆ. ದಯವಿಟ್ಟು ರೂಲಿಂಗ್ ಪ್ರಶ್ನೆ ಮಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇಲ್ಲಿ ಅಧಿಕಾರಿಗಳ ಒತ್ತಡ, ರಾಜಕೀಯ ಒತ್ತಡ ಅದಕ್ಕಾಗಿ ಇವತ್ತು ಇಲ್ಲಿ ಹೈಟೆಕ್ ಭ್ರಷ್ಟಚಾರವಾಗಿದೆ. ಸರ್ಕಾರ ಅದಕ್ಕೆ ರಾಜೀನಾಮೆ ಕೊಟ್ಟು ಹೋಗಬೇಕು.

ಅಧ್ಯಕ್ಷರು : ನೋಡಿ ವಿರೋಧ ಪಕ್ಷದ ನಾಯಕರು ಆಗಿ ಈ ರೀತಿ ರೂಲಿಂಗ್ ಬಗ್ಗೆ ದಯವಿಟ್ಟು ಚರ್ಚೆ ಮಾಡಬೇಡಿ, Please. I am requesting you. Don't question the ruling given by the Chair.

ಶ್ರೀ ಜಗದೀಶ್ ಶೆಟ್ಟರ್ : ಭ್ರಷ್ಟ ವ್ಯಕ್ತಿಗೆ ರಕ್ಷಣೆ ಮಾಡುವಂಥದ್ದು ನಡೆಯುತ್ತಿದೆ. ಅದಕ್ಕಾಗಿ ನಾವು ಪ್ರೊಟೆಸ್ಟ್ ಮಾಡುತ್ತಿದ್ದೇವೆ. ಭ್ರಷ್ಟರನ್ನು ರಕ್ಷಣೆ ಮಾಡುವಂಥ ಸರ್ಕಾರಕ್ಕೆ ನಾನು ಪ್ರೊಟೆಸ್ಟ್ ಮಾಡಿ ಇವತ್ತು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಏನು ಉತ್ತರ ಕೊಟ್ಟಿದ್ದಾರೆ, ಈ ಉತ್ತರದಲ್ಲಿ ನಾನು ಮೊದಲೇ ಹೇಳಿದ ಹಾಗೆ ಒಂದು ಸ್ವಲ್ಪ ಹತ್ತಿರದಲ್ಲೂ ಉತ್ತರ ಸಿಕ್ಕಿಲ್ಲ. ವಾಸ್ತವಿಕತೆಗೂ ತಮ್ಮ ಉತ್ತರಕ್ಕೂ ಬಹಳ ದೂರ ಉತ್ತರ ಕೊಟ್ಟಿದ್ದೀರಿ. ಇಲ್ಲಿ ಒಂದು ಏನು ಹೇಳಿದಿರಿ, ನಮ್ಮ ಸರ್ಕಾರದಲ್ಲಿ ಮುಖ್ಯಮಂತ್ರಿಗಳ ಒಂದು ಅವಿಶ್ವಾಸ ನಿರ್ಣಯ ಮಂಡಿಸಿಲ್ಲ. ಇದೊಂದು ಬಹಳ ಸಂತೋಷದ ವಿಚಾರ ಎಂದು ಹೇಳಿದ್ದೀರಿ. ಮತ್ತೊಂದು ವಿಚಾರ ಹೇಳಿದ್ದೀರಿ, ನಮ್ಮ ಲೀಡರ್ ಮೇಲೆ ಎಲ್ಲರ ವಿಶ್ವಾಸ ಇತ್ತು

ನಾಲ್ಕೂವರೆ ವರ್ಷಗಳ ಕಾಲ ಪೂರ್ಣಗೊಳಿಸುತ್ತಿದ್ದಾರೆ ಇದು ನಮ್ಮ ದೊಡ್ಡ ಸಾಧನೆ, ಅದಕ್ಕೆ ಪುಷ್ಠೀಕರಿಸಬೇಕಾದರೆ ಈಗಾಗಲೇ ಒಂದು ಉದಾಹರಣೆಯನ್ನು ಕೊಟ್ಟಿದ್ದಾರೆ. ಯಾರು ಮಾನ್ಯ ವಿರೋಧ ಪಕ್ಷದ ನಾಯಕರು, ನಾನು ನನ್ನ ಕ್ಷೇತ್ರದಲ್ಲಿಯೇ 15 ಲಕ್ಷ ರೂಪಾಯಿನ ಒಂದು ಬಹಳ ಕೆಟ್ಟು ಹೋಗಿರತಕ್ಕಂಥ ರಸ್ತೆಯನ್ನು, ಊರಿಗೆ ಹೋಗುವುದಕ್ಕೆ ಆಗುತ್ತಿಲ್ಲ, ಊರಿನ ಜನ ಬಿಟ್ಟಿಲ್ಲ ಎಂದು ನಾನು, ಇವರಿಗೆ ಆರ್‌ಡಿಪಿಆರ್ ಗೆ ಮನವಿ ಮಾಡಿಕೊಂಡೆ, ಎರಡು ಸಾರಿ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ರೆಕಮೆಂಡೇಷನ್ ಮಾಡಿದರು, 3054 ನಲ್ಲಿ ಇದಕ್ಕೆ ಬಿಡುಗಡೆಯನ್ನು ಜಿಲ್ಲಾ ಪಂಚಾಯ್ತಿಗೆ ಮಾಡಬಹುದು ಎಂದು ಒಬ್ಬ ಶಾಸಕನಾಗಿ, ಇಲಾಖೆಯ ರೆಕಮೆಂಡೇಷನ್ ಮಾಡಿದರೂ ಆರು ತಿಂಗಳಿನಿಂದ ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ಇವರು ಏನು ಮಾಡಿದ್ದಾರೆ. ಅಲ್ಲಿ ಕೊಡತಕ್ಕಂಥ 1 ಕ್ವಾರ್ಟಲಿ, 2 ಕ್ವಾರ್ಟಲಿ, 3 ಕ್ವಾರ್ಟಲಿ ನೀವು ಕೊಡಿ ಎಂದು ಹೇಳಿ ಅವರು ನಮಗೆ ಕೊಟ್ಟಿಲ್ಲ. ಅಂಥದ್ದರಲ್ಲಿ ಒಬ್ಬ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಗೆ ಯಾರಾದರೊಬ್ಬರಿ ಸರ್ಕಾರದ ನೀತಿಯಲ್ಲಿ ಪ್ರಿಯಾಂಬಲ್‌ನಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಜಗ್ಗೇಶ್ ಎನ್ನುವವರು ಕೇಳಿದ್ದಾರೆ. 20 ಲಕ್ಷ ರೂಪಾಯಿ ಎಂದು ಬಿಡುಗಡೆ ಮಾಡಿರತಕ್ಕಂಥದ್ದು ಒಂದು, 22 ಮಂತ್ರಿಗಳ ಪರಿಶೀಲನಾ ಸಮಿತಿಯನ್ನು ರಚನೆ ಮಾಡಿರುವ ಬಗ್ಗೆ ತಾವು ಉತ್ತರ ಹೇಳಲಿಲ್ಲ. ಪರಿಶೀಲನಾ ಸಮಿತಿ ರಚನೆ ಮಾಡಿ 22 ಮಂತ್ರಿಗಳು ನೀವು ಟಿಸಿಹೆಚ್. ಬಿಇಡ್, ಡಿಯೆಡ್, ಇದರಲ್ಲಿ ಹಂಚಿಕೊಳ್ಳತಕ್ಕಂಥದ್ದು ಮಾಡಿರುವುದರಿಂದಲೇ ವಿವೇಚನಾ ಕೋಟಾದಿಂದ ಸೈಟುಗಳನ್ನು ಯಾರಿಗೆ ಅರ್ಹತೆ ಇಲ್ಲದೆ ಇರತಕ್ಕಂಥವರಿಗೆಲ್ಲಾ ವಿತರಣೆ ಮಾಡಿರತಕ್ಕಂಥದ್ದನ್ನೇ ಎಲ್ಲವನ್ನೂ ಮ್ಯಾನೇಜ್ ಮಾಡಿ ಇವತ್ತು ನಾಲ್ಕು ವರ್ಷ ಮುಂದುವರಿಸಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ ವಿಧಿ ಇಲ್ಲ. ಆದುದರಿಂದ ಇದನ್ನು ಬೆನ್ನು ತಟ್ಟಿಕೊಳ್ಳತಕ್ಕಂಥದ್ದಲ್ಲ. ವಿದ್ಯುಚ್ಛಕ್ತಿ ವಿತರಣೆಯಲ್ಲಿ ತಾವು ಕೊಟ್ಟಿರುವ ಮಾಹಿತಿಯಲ್ಲಿ, ಇರತಕ್ಕಂಥ ಮಾಹಿತಿಗೂ ಬಹಳ ದೂರ ಇದೆ. ವಿದ್ಯುಚ್ಛಕ್ತಿ ಕೊರತೆಯನ್ನು ನಿವಾರಿಸಲು ಈ ಸರ್ಕಾರಕ್ಕೆ ನೂರಕ್ಕೆ ನೂರರಷ್ಟು ವಿಫಲವಾಗಿದೆ. ಬೇರೆ ರಾಜ್ಯಗಳಿಂದ ತಂದಿರತಕ್ಕಂಥ ಇದರಲ್ಲಿ ಹೆಚ್ಚು ಹಣವನ್ನು ಕೊಟ್ಟು ಅದರಲ್ಲಿ ಏನೇನು ವ್ಯವಹಾರಗಳು ನಡೆದಿದೆ ಅದನ್ನು ಕೊಟ್ಟು ನಾನೂರಕ್ಕೂ ಹೆಚ್ಚು ಮೆಗಾವ್ಯಾಟ್ ವಿದ್ಯುತ್ ತಂದು....

ಶ್ರೀ ಡಿ.ಬಿ. ಚಂದ್ರೇಗೌಡ : ಬೇರೆ ಸರ್ಕಾರದಿಂದ ತರುವುದರಲ್ಲಿ ಏನು ವ್ಯವಹಾರ ನಡೆಯುತ್ತದೆ? ಸರ್ಕಾರ ಎನ್ನುವ ಪದವನ್ನು ನೀವೇ ಬಳಸುತ್ತೀರಿ.

ಶ್ರೀ ಬಿ. ಸೋಮಶೇಖರ್ : ಇದು ಪಿಟಿಸಿ ಅದರಿಂದ ತಂದು ಸರ್ಕಾರಕ್ಕೆ ಇವತ್ತು ಹೊರೆ ಹಾಕಿದ್ದಾರೆ ಅದನ್ನು ಸರಿಯಾದ ಉತ್ತರ ಕೊಟ್ಟಿಲ್ಲ. ಪಡಿತರ ಚೀಟಿಯ ಬಗ್ಗೆ ಇವತ್ತು ಸಂಪೂರ್ಣವಾಗಿ ವಿತರಣೆ ಮಾಡತಕ್ಕಂಥದ್ದರಲ್ಲಿ ಹಾಗೂ ಗುರುತಿಸತಕ್ಕಂಥದ್ದರಲ್ಲಿ ದೊಡ್ಡ ಗೊಂದಲವಾಗಿದೆ. ಇಡೀ ರಾಜ್ಯಾದ್ಯಂಥ ಇಡೀ ಗೊಂದಲವಾಗಿದೆ ಇದಕ್ಕೆ ಸರಿಯಾದಂಥ ಉತ್ತರ ಕೊಟ್ಟಿಲ್ಲ. ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ನೂರಕ್ಕೆ ಎಪ್ಪತ್ತೈದು ಭಾಗ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಿಲ್ಲ. ಅದಕ್ಕೂ ಹಣವನ್ನು ಬಿಡುಗಡೆ ಮಾಡಿಲ್ಲ. ಆ ರೈತರ ಆತ್ಮಹತ್ಯೆಯ ಬಗ್ಗೆ ಒಂದು ಸಾರಿ 524 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ತಾವೇ ವರದಿಯನ್ನು ಕೊಟ್ಟುಬಿಟ್ಟಿದ್ದೀರಿ, ಅದರಲ್ಲಿ ತಾವು ಕೊಟ್ಟಿರತಕ್ಕಂಥದ್ದು ಕೇವಲ 52 ಜನರಿಗೆ ಮಾತ್ರ ಕೊಟ್ಟಿದ್ದೀರಿ ಎಂದು ಹೇಳಿದಿರಿ, ಅದನ್ನು ಸರಿಯಾದಂಥ ಉತ್ತರ ಸಿಕ್ಕಿಲ್ಲ ನಮಗೆ. ಮತ್ತೊಂದು

ವಿಚಾರ ಎತ್ತಿದ್ದೆವು, ಈ ಖಾತೆಯ ವಿತರಣೆಯಲ್ಲಿ, ಸಿಎಂಸಿ ಇರಲಿ ಮತ್ತು ಗ್ರಾಮ ಪಂಚಾಯ್ತಿ ಇರಲಿ ಸಂಪೂರ್ಣವಾಗಿ ನಿಂತಿದೆ, 5 ಸಿಎಂಸಿ ಗಳಲ್ಲಿ ಇರಬಹುದು. ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಇರಬಹುದು ಖಾತೆ ವಿತರಣೆ ಮಾಡದೇ ತುಂಬಾ ಗೊಂದಲವಾಗಿದೆ. ಅದರ ಬಗ್ಗೆ ನಾವು ಎತ್ತಿದ್ದೆವು ತಾವು ಉತ್ತರ ಕೊಟ್ಟಿಲ್ಲ. ಬೆಂಗಳೂರು ಪ್ರಾಧಿಕಾರದಲ್ಲಿ ಡಿ-ನೋಟೀಫಿಕೇಷನ್ ಮಾಡಿರತಕ್ಕಂಥದ್ದು ಕೆಐಎಡಿಬಿ ನಲ್ಲಿ ನೂರಾರು ಎಕರೆ ಜಮೀನನ್ನು ಕೊಟ್ಟಿರತಕ್ಕಂಥದ್ದು ಇದು ಯಾವುದರ ಬಗ್ಗೆಯೂ ಉತ್ತರ ಕೊಟ್ಟಿಲ್ಲ. ರಾಜ್ಯಪಾಲರು ಮಾಡಿರತಕ್ಕಂಥ ಭಾಷಣ ಸಂಪೂರ್ಣವಾಗಿ ಟೊಳ್ಳು ಇರತಕ್ಕಂಥ ಭಾಷಣ ಮತ್ತು ನೂರಕ್ಕೆ ನೂರು ಸುಳ್ಳು ಇರತಕ್ಕಂಥ, ಸತ್ಯಕ್ಕೆ ದೂರ ಇರತಕ್ಕಂಥ ಭಾಷಣ, ಇದನ್ನು ನಾವು ಪ್ರತಿಭಟನೆ ಮಾಡಿ ನಾವು ಇವತ್ತು ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಎಬಿಪಿಜೆಡಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಇರುತ್ತೇನೆ ನಾನೇನೂ ವಾಕ್‌ಔಟ್ ಮಾಡುವುದಿಲ್ಲ. ನನಗೆ ಉತ್ತರ ಕೊಟ್ಟರೆ ಸಾಕು. ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಖಚಿತವಾಗಿ ಉತ್ತರವನ್ನು ಕೆಲವು ವಿಷಯಗಳ ಮೇಲೆ ನಾನು ಬಯಸುತ್ತೇನೆ. ಒಂದು ನಾನು ಮಾತನಾಡುವಾಗ ಬಹಳ ಮುಖ್ಯವಾಗಿ ಮಾತನಾಡಿರತಕ್ಕಂಥದ್ದು, ತಾವು ಕ್ಯಾಬಿನೆಟ್‌ನಲ್ಲಿ ಇದನ್ನು ಚರ್ಚೆ ಮಾಡಿದ್ದೀರಿ, ಈ ಕೆಎಸ್‌ಆರ್‌ಟಿಸಿ ಗೆ 20 ಕಿಲೋಮೀಟರ್ ಟೌನ್ ಸುತ್ತ ಸುತ್ತಾಡಲಿಕ್ಕೆ ಪರ್ಮಿಷನ್ ಕೊಡತಕ್ಕಂಥ ಒಂದು ನೋಟಿಫಿಕೇಷನ್ ಮಾಡಿದ್ದಿರಿ, ಅದರಿಂದ take it from me in the next 20 months K.S.R.T.C. will become a Company which has to be auctioned. It will become Pauper. 70 ಸಾವಿರ ಜನರಲ್ಲಿ 30 ಸಾವಿರ ಜನರು ಕೆಲಸ ಕಳೆದುಕೊಳ್ಳುತ್ತಾರೆ. ಯಾರು ಇದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಅಡ್ವೈಸ್ ಮಾಡಿದ್ದಾರೆ ಎನ್ನುವುದು ನನಗಿನ್ನೂ ಅರ್ಥವಾಗುತ್ತಿಲ್ಲ. ನಿಮ್ಮ ಕ್ಯಾಬಿನೆಟ್ ಮಂತ್ರಿಗಳಿಗೆ ನಾನು ಇದನ್ನು ಬಹಳ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. don't destroy that Corporation. It is making a profit of Rs. 150 Crores. It is a model organization in the entire country today. We have toiled for that. ದಯಮಾಡಿ ಅದನ್ನು ಪರಿಶೀಲಿಸತಕ್ಕಂಥ ಭರವಸೆ ಕೊಡಿ ನನಗೆ, I know you cannot say - ಎದ್ದುಕೊಂಡು ನಿಲ್ಲಿಸಿ ಬಿಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. Atleast you give me an assurance. You give an assurance to the people of Karnataka that we will re-consider this issue. ಎಂದು ದಯಮಾಡಿ ಇದು ಒಂದು ಆಗಲೇಬೇಕು. ಯಾರೋ somebody I don't know who has gone to the ears of the Chief Minister ಯಾರೋ ಹೋಗಿ ಅವರ ಕಿವಿ ಕಚ್ಚುತ್ತಾರೆ ಎನ್ನುವುದು ನನಗಿನ್ನೂ ಅರ್ಥವಾಗುತ್ತಿಲ್ಲ. It is going to be ruined. ದಯವಿಟ್ಟು ಅದನ್ನು ಮಾಡಿ, ಎರಡನೇಯದಾಗಿ, ನಮ್ಮ ಶಾಸಕರು ಇರಲಿ, ವಿರೋಧ ಪಕ್ಷದವರು, ನಾವು ಹೇಗೋ ತಪ್ಪಿಸಿಕೊಂಡು ಬಿಡುತ್ತೇವೆ, ಏನ್ರೀ ಕಾಂಗ್ರೇಸ್‌ನವರು ಮಾಡಿರುವುದು ನಮಗೇನು ಹೋಗಿ ಕೇಳ್ರೀ ಅವರಿಗೆ, ಕಾಂಗ್ರೆಸ್‌ಗೆ ಓಟು ಕೊಡಬೇಡಿ ಬುದ್ಧಿ ಕಲಿಸಿ ಎಂದು ಹೇಳುತ್ತೇವೆ. ಹಳದಿ ಕಾರ್ಡುಗಳನ್ನು ವಿತರಣೆ ಮಾಡತಕ್ಕಂಥ ವಿಚಾರದಲ್ಲಿ have a deadline. ನೀವು ಫೆಬ್ರವರಿ 10

ಅಸೆಂಬ್ಲಿ ಡಿಸಾಲ್ವ್ ಮಾಡುವುದಾದಲ್ಲಿ ಅಟ್‌ಲಿಸ್ಟ್ 10 ರೂ ಒಳಗಡೆ ಆದರೂ ಸಹಿತ ಇದನ್ನು ನಾವು ಮಾಡುತ್ತೇವೆ ಎಂದು ಹೇಳಿ ನಿಮ್ಮ ಅಧಿಕಾರಿಗಳಿಗೆ ನಿರ್ದೇಶನ ಕೊಟ್ಟು, 70 ಲಕ್ಷ ಹಸಿರು ಕಾರ್ಡು ಇತ್ತು ಅವರಿಗೆಲ್ಲಾ ಟೆಂಪರಿವರಿ ಚೀಟಿಗಳನ್ನು ಕೊಡುತ್ತಿದ್ದಾರೆ. ದಯಮಾಡಿ ಹಳದಿ ಕಾರ್ಡುಗಳನ್ನು ಮಾನ್ಯ ಚಂದ್ರೇಗೌಡರವರೇ, I am not expecting ನೀವು ಮಾಡಿ ನಾಳೆ ಡೇಟ್ ಕೊಡಿ ಎಂದು ಕೇಳುವುದಿಲ್ಲ. ಅಟ್‌ಲಿಸ್ಟ್ ಪರಿಶೀಲನೆ ಮಾಡಿ ನೆಕ್ಸ್ಟ್ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ, ಹಳದಿ ಕಾರ್ಡ್ ಹಂಚತಕ್ಕಂಥ ವಿಚಾರದಲ್ಲಿ ಬಹಳ ಅನ್ಯಾಯ ಆಗುತ್ತದೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಮತ್ತೆ ಇದರಿಂದ ಬಡವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇದನ್ನು ದಯವಿಟ್ಟು ಸರಿಪಡಿಸತಕ್ಕಂಥ ಭರವಸೆಯನ್ನು ಕೊಡಬೇಕು. ಹಾಗೆಯೇ, ಈಗಾಗಲೇ ಮಾನ್ಯ ಕೃಷ್ಣೇಬೈರೇಗೌಡರು ಹೇಳಿದ ಹಾಗೆ, ಸಣ್ಣ ಕೈಗಾರಿಕೆಗಳಿಗೆ ಮತ್ತು ಇಟ್ಟಿಗೆ ಫ್ಯಾಕ್ಟರಿಗಳಿಗೆ ಕೊಡಬೇಕಾಗಿರತಕ್ಕಂಥ 25 ಪರ್ಸೆಂಟ್ ಸಬ್ಸಿಡಿ ಹಣವನ್ನು ಮಾರ್ಚ್ ತಿಂಗಳೊಳಗಾಗಿ ಬಿಡುಗಡೆ ಮಾಡಿ. ಒಂದೇ ಸಾರಿ 350 ರಿಂದ 400 ಕೋಟಿ ರೂ ಹಣವನ್ನು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ. ಆದರೆ, 400 ಕೋಟಿ ರೂಪಾಯಿಗಳನ್ನು ನಾಳೆದಿವಸ ಬಿಡುಗಡೆ ಮಾಡುತ್ತೇವೆಂದು ಈಗಾಗಲೇ ಇಲ್ಲಿ ಯಾರೋ ಹೇಳಿದರು. ಇಷ್ಟೊಂದು ಹಣ ಬಿಡುಗಡೆ ಮಾಡುವುದಕ್ಕೆ ಹಣ ಎಲ್ಲಿದೆ? ಕೊನೇಪಕ್ಷ ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿರತಕ್ಕಂಥ 25 ಪರ್ಸೆಂಟ್ ಸಬ್ಸಿಡಿ ಹಣವನ್ನು ಮಾರ್ಚ್ ತಿಂಗಳೊಳಗಾಗಿ ಬಿಡುಗಡೆ ಮಾಡುವುದಕ್ಕೆ ಪರಿಶೀಲನೆ ಮಾಡತಕ್ಕಂಥ ಭರವಸೆಯನ್ನು ಇವತ್ತು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹಾಗೆಯೇ, ಇವತ್ತಿನದಿವಸ ಕಬ್ಬಿನ ಬಾಕಿ ಹಣ ಕೊಡದೇ ಇರುವುದರಿಂದ ರೈತರು ಬಹಳ ತೊಂದರೆಗೀಡಾಗಿದ್ದಾರೆ. They are really in distress. Do something for them. All developmental works have come to a grinding halt. ಇವತ್ತಿನ ದಿವಸ ಕಾವೇರಿ ಜಲ ನಿಗಮ ಮತ್ತು ಕೃಷ್ಣ ಜಲ ನಿಗಮ ಮಾಡಿ ಇದಕ್ಕಾಗಿ ಹಣ ಕಲೆಕ್ಟ್ ಮಾಡಿದ ರೀತಿಯಲ್ಲಿಯೇ ಕಬ್ಬಿಗೂ ಸಹಿತ ಮಾಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದೇವೆಂದು ಮಾನ್ಯ ಸಚಿವರಾದಂಥ ಶ್ರೀ ಮಹದೇವ್‌ರವರು ಹೇಳಿರತಕ್ಕಂಥದ್ದನ್ನು ನಾನು ಪತ್ರಿಕೆಯಲ್ಲಿ ನೋಡಿದ್ದೇನೆ. ದಯವಿಟ್ಟು ಇದನ್ನು ಮಾಡಿ ತಕ್ಷಣವೇ ಬಾಕಿ ಹಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಗುತ್ತಿಗೆದಾರರಿಗೆ ಕೊಡಬೇಕಾಗಿರತಕ್ಕಂಥ ಬಾಕಿ ಹಣದ ಬಗ್ಗೆ ಬಹಳ ನೋವಿನಿಂದ ಇಲ್ಲಿ ಹೇಳಬೇಕಾಗಿದೆ. ಎಲ್.ಓ.ಸಿ. ರಿಲೀಜ್ ಮಾಡಿ ಎಂದು ನಾನು ಯಾವುದೇ ಗುತ್ತಿಗೆದಾರನ ಪರವಾಗಿ ಶಿಫಾರಸ್ಸು ಮಾಡುತ್ತಿಲ್ಲ. ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಇಲ್ಲಿರತಕ್ಕಂಥ ಅಧಿಕಾರಿಗಳನ್ನು ತಕ್ಷಣವೇ ಕೇಳಿ ತಿಳಿದುಕೊಳ್ಳಬಹುದು. ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಒಂದು ಸಾವಿರ ಗ್ರಾಮಗಳನ್ನು ತೆಗೆದುಕೊಂಡಿದ್ದೀರಿ. ಸದರಿ ಯೋಜನೆಗಾಗಿ 30 ಪರ್ಸೆಂಟ್ ಹಣವನ್ನು ಬಿಡುಗಡೆ ಮಾಡಲಾಗಿದೆ. ಇನ್ನು 70 ಪರ್ಸೆಂಟ್ ಹಣವನ್ನು ಬಿಡುಗಡೆ ಮಾಡಿಲ್ಲ. ಆದರೆ, ಕೇವಲ ಪ್ರಚಾರಕ್ಕೋಸ್ಕರ ಸ್ವಚ್ಛಗ್ರಾಮ ಯೋಜನೆಯಡಿಯಲ್ಲಿ ಒಂದು ಸಾವಿರ ಗ್ರಾಮಗಳನ್ನು ತೆಗೆದುಕೊಳ್ಳಗಾಗಿದೆ ಎಂದು ಹೇಳುತ್ತಾ ಬಂದಿದ್ದೀರಿ. Before you take up other Swachcha Gramas, ಕಳೆದ ನಾಲ್ಕು ವರ್ಷಗಳಲ್ಲಿ ಒಂದು ಸಾವಿರ ಸ್ವಚ್ಛಗ್ರಾಮಗಳ ಕೆಲಸ ಮಾಡಿಸಿರತಕ್ಕಂಥದ್ದಕ್ಕೆ ಇನ್ನೂ ಹಣ ಕೊಡದೇ ಇರುವುದರಿಂದ ಇವತ್ತಿನದಿವಸ ಗುತ್ತಿಗೆದಾರರು ಹಣಕ್ಕೆ ಬಡ್ಡಿ ಕಟ್ಟಿಕೊಂಡು ಸಾಯತಕ್ಕಂಥ ಪರಿಸ್ಥಿತಿಗೆ

ಬಂದಿದ್ದಾರೆ. ಸ್ವಚ್ಛ ಗ್ರಾಮಗಳು ಬಹಳ ತೊಂದರೆಗೆ ಸಿಲುಕಿದೆ. ಆದ್ದರಿಂದ ಇದಕ್ಕೆ ಹಣ ಬಿಡುಗಡೆ ಮಾಡಿ ಎಂದು ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರಿಗೆ ದೂರವಾಣಿ ಮುಖಾಂತರ ಹೇಳಿದ್ದಕ್ಕೆ 22 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಬಾಕಿ ಉಳಿದಿರತಕ್ಕಂಥ ಹಣವನ್ನು ಈಗಲಾದರೂ ಬಿಡುಗಡೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಒಂದು ಆರ್ಡರ್ ಮಾಡಿ. ಶಾಸಕರು ಹೇಳತಕ್ಕಂಥದ್ದನ್ನು ತಾವು ಕೇಳುವುದಕ್ಕೆ ಹೋಗಬೇಡಿ. ಮತ್ತೆ ಜಗ್ಗೇಶ್ ಅಥವಾ ಇನ್ಯಾರನ್ನಾದರೂ ಕೇಳಿಕೊಳ್ಳಿ. ಅದರ ಬಗ್ಗೆ ನಮಗೇನೂ ಹೊಟ್ಟೆಕಿಚ್ಚು ಇಲ್ಲ. ಜನರು ಏನು ಬೇಕು ಆ ತೀರ್ಮಾನ ತೆಗೆದುಕೊಳ್ಳುತ್ತಾರೆ. ನಾವು ಕೆಲಸ ಮಾಡಿಯೂ ಕೂಡ ಎಲೆಕ್ಷನ್‌ನಲ್ಲಿ ಗೆದ್ದಿದ್ದೇವೆ. ಮತ್ತೆ ಕೆಲಸ ಮಾಡದೇ ಕೂಡ ಎಲೆಕ್ಷನಲ್ಲಿ ಗೆದ್ದಿದ್ದೇವೆ. ಈ ಕೆಲಸಗಳಿಗೂ ಮತ್ತು ಎಲೆಕ್ಷನ್‌ಗೆ ಯಾವುದೇ ರೀತಿಯ ಸಂಬಂಧವಿಲ್ಲ ಎನ್ನತಕ್ಕಂಥದ್ದು ನಿಮಗೂ ಗೊತ್ತಿದೆ ಮತ್ತು ನಮಗೂ ಸಹ ಗೊತ್ತಿದೆ. ಯಾವುದೋ ಒಂದು ಅಲೆ ಹರಿಯುತ್ತಿರುತ್ತದೆ. ಇದರ ಮೇಲೆ ಜನ ವೋಟು ಕೊಡುತ್ತಾರೆ. ಕುಡಿಯುವ ನೀರಿನ ವಿಚಾರಕ್ಕೆ ಸಂಬಂಧಪಟ್ಟಂತೆ ಇರತಕ್ಕಂಥ ಆರ್ಡ್‌ರನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ಡೆಪ್ಯುಟಿ ಕಮೀಷನರ್, ತಹಸೀಲ್ದಾರ್ ಮತ್ತು ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಸೇರಿಕೊಂಡು ಎಲ್ಲಿ ಸೋರ್ಸ್ ಟೋಟಲ್ ಆಗಿ ಡ್ರೈ ಅಪ್ ಆಗಿರತಕ್ಕಂಥ ಏರಿಯಾದಲ್ಲಿ ಒಂದು ಸೋರ್ಸ್ ಮಾಡುವಂತೆ ಡೆಪ್ಯುಟಿ ಕಮೀಷನರ್‌ವರೆಗೆ ಇನ್‌ಸ್ಟ್ರಕ್ಷನ್ ಕೊಡಿ. ನಮ್ಮ ಕಡೆ ಅಂದರೆ, ಬಯಲು ಸೀಮೆ ಪ್ರದೇಶಗಳಾದ ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಬೆಂಗಳೂರು, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಿಗೆ ಲಾರಿಗಳಲ್ಲಿ ಕುಡಿಯುವ ನೀರನ್ನು ಕೊಟ್ಟಿರತಕ್ಕಂಥದ್ದು ಕಡಿಮೆ. ಆದರೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಈ ಸಮಸ್ಯೆ ಕಾಮನ್ ಆಗಿದೆ. ಇವತ್ತಿನದಿವಸ ನಮ್ಮ ಕಡೇನೆ ಇಷ್ಟೊಂದು ತೊಂದರೆಯಿರುವಾಗ ಇನ್ನು ಅವರಿಗೆ ಇನ್ನೆಷ್ಟು ತೊಂದರೆ ಆಗಿರಬಹುದು? ಈ ಸಂದರ್ಭದಲ್ಲಿ ನಾನು ತಮ್ಮಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕುಡಿಯುವ ನೀರಿನ ವಿಚಾರದಲ್ಲಿ ಯಾವುದಾದರೊಂದು ಖಚಿತವಾದ ಉತ್ತರ ಹೇಳಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ನೀವು ಪಾರ್ಲಿಮೆಂಟ್ ಎಲೆಕ್ಷನ್ ಜೊತೆಯಲ್ಲಿಯೇ ಬೇಕಾದರೆ ಚುನಾವಣೆ ಮಾಡಿಕೊಳ್ಳಿ ಅಥವಾ ಪಾರ್ಲಿಮೆಂಟ್ ಎಲೆಕ್ಷನ್ ಮಾತ್ರವೇ ಆಗಲಿ. ಆದರೆ, ನಮಗಿಂತ ಹೆಚ್ಚಾಗಿ ನೀವು ಹಳ್ಳಿಗಳಿಗೆ ಹೋಗುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ I expect a specific answer.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಿಂಧ್ಯರವರು ಕೆ.ಎಸ್.ಆರ್.ಟಿ.ಸಿ. ಬಗ್ಗೆ ನಾನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ನಾನು ಖಂಡಿತ ಪರಿಶೀಲನೆ ಮಾಡುವುದಕ್ಕೆ ನೋಡುತ್ತೇನೆ. ಇವತ್ತಿನದಿವಸ ಪಬ್ಲಿಕ್ ಅಂಡರ್ ಟೇಕಿಂಗ್ ಸಂಸ್ಥೆಗಳಲ್ಲಿ ಲಾಭ ಬರತಕ್ಕಂಥ ಸಂಸ್ಥೆಗಳೇ ಕಡಿಮೆಯಾಗಿದೆ. ಒಂದು ವೇಳೆ ಇದರ ಬಗ್ಗೆ ತಪ್ಪು ಮಾಹಿತಿಯಿಂದ ಇಂಥ ಆದೇಶ ಬಂದಿದ್ದರೆ ಅದನ್ನು ಪುನರ್ ಪರಿಶೀಲನೆ ಮಾಡುವಂತೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇನ್ನು ಹಳದಿ ಕಾರ್ಡ್ ಬಗ್ಗೆ ಹೇಳುವುದಾದರೆ, ಟೆಂಪರ್ವರಿ ಐಡೆಂಟಿಟಿ ರೇಷನ್ ಕಾರ್ಡ್ ಬಗ್ಗೆ ನಾವು ಮೊದಲು ಸಾಕಷ್ಟು

ಪರಿಶೀಲನೆ ಮಾಡಿದ್ದೇವೆ. ಪರಿಶೀಲನೆ ಮಾಡುವುದಕ್ಕೆ ಕಾರಣ ಏನೆಂದರೆ, ಒಂದು ಜಿಲ್ಲೆಯಲ್ಲಿ ಶೇಕಡ 106 ರಷ್ಟು ಕಾರ್ಡ್ ವಿತರಣೆಯಾಗಿತ್ತು. I don't want to mention the name of the district. 100 ಜನ ಕ್ಕೆ ಕೊಡಬೇಕಾಗಿರತಕ್ಕಂಥದ್ದನ್ನು 106 ಜನರಿಗೆ ಹೇಗೆ ನೀಡಲಾಯಿತು ಎಂಬುದರ ಬಗ್ಗೆ ಪರಿಶೀಲನೆ ಮಾಡೋಣವೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ಮತ್ತೆ ಎರಡನೆಯದಾಗಿ, ನೀವು ಈಗಾಗಲೇ ಹೇಳಿದ ಹಾಗೆ ಪರಿಶೀಲನೆ ಮಾಡುವಾಗ ಗೊಂದಲವಾಗಿದ್ದು ನಿಜ. ಮೊನ್ನೆದಿವಸ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಸುಮಾರು ಎರಡು ಗಂಟೆಗಳ ಕಾಲ ಈ ವಿಷಯವನ್ನೇ ಒಂದು ವಸ್ತುವಾಗಿಟ್ಟುಕೊಂಡು ಚರ್ಚೆ ಮಾಡಿದ್ದೇವೆ. ನಾನು ಒಂದು ಕಡೆ ಹೋದಾಗ ಒಬ್ಬ ವ್ಯಕ್ತಿ ನನ್ನ ಹತ್ತಿರ ಬಂದು ಮೊದಲು ನನ್ನ ಹತ್ತಿರ ಮೂರು ಕಾರ್ಡ್ ಹೇಗೆ ಬಂತು ಎಂದು ರೆಕಾರ್ಡ್ ತೆಗೆದು ನೋಡಿದಾಗ ಆತನ ಹತ್ತಿರ ಮೂರುಕಾರ್ಡ್ ಹೇಗೆ ಬಂತು ಎಂದು ರೆಕಾರ್ಡ್ ತೆಗೆದು ನೋಡಿದಾಗ ಆತನ ಹತ್ತಿರ ಮೂರು ಕಾರ್ಡ್ ಇತ್ತು. ಆದರೆ, ಇವತ್ತು ನನ್ನ ಹತ್ತಿರ ಒಂದೂ ಇಲ್ಲ ಎಂದು ಹೇಳಿದ. ಆತನಿಗೆ ಮೂರು ಕಾರ್ಡ್ ಇರತಕ್ಕಂಥದ್ದು ನಿಜ ಎನ್ನತಕ್ಕಂಥದ್ದು ಗೊತ್ತಾಯಿತು. ಇಂಥದ್ದರಲ್ಲಿ ಎರಡು ಕಾರ್ಡ್‌ಗಳನ್ನು ನಿಲ್ಲಿಸತಕ್ಕಂಥದ್ದಕ್ಕೆ ಒಂದು ಪ್ರಯತ್ನ ಮಾಡಿ ಎಂದು ಹೇಳಿದ್ದೇವೆ. ಮತ್ತೊಂದು ಸಮಸ್ಯೆ ಏನೆಂದರೆ, ಗಂಡನಿಗೊಂದು ಕಾರ್ಡ್ ಮತ್ತು ಹೆಂಡತಿಗೊಂದು ಹಾಗೂ ಮಗನಿಗೊಂದು ಕಾರ್ಡ್ ಬೇರೆ ಬೇರೆ ಇತ್ತು. ಇಂಥವುಗಳನ್ನು ತೆಗೆಯುವುದಕ್ಕೋಸ್ಕರವೇ ಸ್ವಲ್ಪ ವೆರಿಫಿಕೇಶನ್ ಮಾಡಿ ಕೊಡಿ ಎಂದು ಹೇಳಿದ್ದೇವಷ್ಟೆ. ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಅವರು ಈಗಾಗಲೇ ಹೇಳಿರತಕ್ಕಂಥದ್ದು ತೀರ ಸತ್ಯಕ್ಕೆ ದೂರವಾದ ಮಾತೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹತ್ತಿರವಾದ ಮಾತುಗಳನ್ನು ಕೆಲವೊಂದು ಹೇಳಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಂದರೆ 70 ಲಕ್ಷ ಕಾರ್ಡ್‌ಗಳನ್ನು ಹಂಚಿಕೆ ಮಾಡತಕ್ಕಂಥ ಸಂದರ್ಭದಲ್ಲಿ ಈ ರೀತಿಯಾದ 1 ಅಥವಾ 2 ಪರ್ಸೆಂಟ್ ಇದ್ದರೆ ಇದನ್ನೂ ಕೂಡ ಪರಿಶೀಲನೆ ಮಾಡಬೇಕೆಂದು ಡೆಪ್ಯುಟಿ ಕಮೀಷನರ್‌ವರಿಗೆ ಆದೇಶವನ್ನು ಕೊಟ್ಟಿದ್ದೇವೆ. ಕ್ಯಾಬಿನೆಟ್ ತೀರ್ಮಾನದ ಪ್ರಕಾರ ಹಳೆಯದು ಎಷ್ಟು ಹಸಿರು ಕಾರ್ಡ್ ಇತ್ತು, ಅವೆಲ್ಲವನ್ನೂ ಕೂಡ ಹಳದಿ ಕಾರ್ಡ್‌ಗೆ ಪರಿವರ್ತಿಸಬೇಕೆಂದು ಮತ್ತು ನಾನು ಈಗಾಗಲೇ ಹೇಳಿದಂಥ ಪ್ರಸಂಗಗಳು ಎಲ್ಲಿವೆ ಅಲ್ಲಿ ಮಾತ್ರ ಕಡಿಮೆ ಮಾಡಬೇಕೆಂದು ಹೇಳಿದ್ದೇವೆ. ಮತ್ತೆ ಇದೇ ರೀತಿಯಾದ ಇನ್‌ಸ್ಟ್ರಕ್ಷನ್ಸ್ ಕೂಡ ಡೆಪ್ಯುಟಿ ಕಮೀಷನರ್‌ವರಿಗೆ ಹೋಗಿದೆ. ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಯವರೆ ಅರ್ಥ ಮಂತ್ರಿಯಾಗಿರುವುದರಿಂದ, ಆಯವ್ಯಯ ಸಧ್ಯದಲ್ಲಿ ಬರುವುದು ಇದೆ. ಆ ಸಂದರ್ಭದಲ್ಲಿ ತಮಗೆ ಸಮಾಧಾನವಾದಂಥ ಉತ್ತರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಸ್ವಚ್ಛಗ್ರಾಮದ ಬಗ್ಗೆ ಹೇಳುವುದಾದರೆ, ತಾವು ಈಗಾಗಲೇ ಹೇಳಿದ ಹಾಗೆ 20 ಲಕ್ಷದಿಂದ ಮತ್ತೆ 10 ಲಕ್ಷಕ್ಕೆ ಪರಿವರ್ತನೆ ಮಾಡಿದ್ದೇವೆ. ಹಾಗೆಯೇ ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕುಡಿಯುವ ನೀರಿನ ವಿಚಾರದ ಬಗ್ಗೆ ಹೇಳುವುದಾದರೆ ಯಾವ ಅಧಿಕಾರಿ ಇರಬಹುದು ಅಥವಾ ಚುನಾಯಿತ ಪ್ರತಿನಿಧಿಯಿರಬಹುದು ಈ ವಿಷಯಕ್ಕೆ ಸಂಬಂಧಪಟ್ಟಂತೆ ಯಾರ ಹತ್ತಿರವೂ ಕೂಡ ಕಾಂಪ್ರಮೈಜ್ ಮಾಡಿಕೊಳ್ಳುವುದಿಲ್ಲ.

ಕುಡಿಯುವ ನೀರಿಗೆ ಎಲ್ಲಿಯೂ ಕೂಡ ಧಕ್ಕೆಯಾಗದಂತೆ ಇದಕ್ಕೆ ಯಾವರೀತಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅವರು ಸಲಹೆ ಮಾಡುತ್ತಾರೆಯೋ ಅದಕ್ಕಿಂತ ಹೆಚ್ಚು ಅಗತ್ಯ ಬಿದ್ದರೂ ಕೂಡ ಸರ್ಕಾರ ಅದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತದೆ ಎಂದು ಹೇಳುತ್ತೇನೆ. ಮತ್ತೆ ಹೊಸ ಬೋರ್‌ವೆಲ್ ತೆಗೆಯುವುದಕ್ಕೆ ಪರ್ಮಿಷನ್ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಮತ್ತೆ ಸಿ.ಆರ್.ಎಫ್. ಹಣವನ್ನು ಇನ್ನೂ ಖರ್ಚು ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ, ಈ ವರ್ಷವೂ ಕೂಡ 9 ಕೋಟಿ ರೂಪಾಯಿಗಳನ್ನು ಬರೀ ಬೋರ್‌ವೆಲ್ ತೆಗೆಯತಕ್ಕಂಥ ಕಾರ್ಯಕ್ರಮಕ್ಕೆ ರಾಜ್ಯದ ವತಿಯಿಂದ ಬಿಡುಗಡೆ ಮಾಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ತಾವು ಈಗಾಗಲೇ ಕೊಟ್ಟಿರತಕ್ಕಂಥ ಸಲಹೆಗಳನ್ನು ಖಂಡಿತ ಗಮನದಲ್ಲಿಡುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ವಿಷಯವನ್ನು ಕ್ಲಾರಿಫಿಕೇಶನ್ ಮಾಡಬೇಕೆಂದು ಇಷ್ಟಪಟ್ಟಿದ್ದೇನೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಸಂಪೂರ್ಣವಾಗಿ ಉತ್ತರ ಕೇಳಿದ ಮೇಲೆ ಸಿ.ಬಿ.ಐ.ಎನ್‌ಕ್ವಯರಿ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ರಾಜೀನಾಮೆ ಕೊಡಬೇಕೆಂದು ಕೂಗುತ್ತಾ ಹೊರಗಡೆಗೆ ಹೋದರು. ತಾವೂ ಕೂಡ ಒಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ಈ ಸಂದರ್ಭದಲ್ಲಿ ಈ ವಿಷಯವನ್ನು ಸದನದ ಗಮನಕ್ಕೆ ಏತಕ್ಕಾಗಿ ತರುತ್ತಿದ್ದೇನೆಂದರೆ, ಸಿ.ಬಿ.ಐ. ನವರು ತನಿಖೆ ಮಾಡುವಾಗ ಮತ್ತು ಪೋಲೀಸ್‌ನವರು ಇನ್‌ವೆಸ್ಟಿಗೇಶನ್ ಮಾಡುವಂಥ ಸಂದರ್ಭದಲ್ಲಿ ಇಂಥ ವಿಷಯಗಳನ್ನು ಇಲ್ಲಿ ಚರ್ಚೆ ಮಾಡಬಾರದೆಂದು ಮತ್ತು ಡಿಸ್‌ಕರೇಜ್ ಮಾಡಬೇಕು ಎನ್ನತಕ್ಕಂಥ ಅನೇಕ ಉದಾಹರಣೆಗಳು ಮತ್ತು ಇಲ್ಲಿ ಆಗಿರತಕ್ಕಂಥ ಪ್ರಿಸಿಡೆಂಟ್ಸ್ ಸಾಕಷ್ಟಿವೆ. ಈ ಒಂದು ದೃಷ್ಟಿಯಿಂದ ಆ ಮಾತನ್ನು ಇಲ್ಲಿ ಹೇಳಬಾರದೆಂದು ನಾನು ಪ್ರಸ್ತಾಪ ಮಾಡಿದೆ. ಆದರೂ ಕೂಡ ಅವರು ಪ್ರಚಾರಕ್ಕೋಸ್ಕರ ಈ ಮಾತನ್ನು ಹೇಳಿಕೊಂಡು ಹೊರಕ್ಕೆ ಹೋದರು. ನಮ್ಮ ದುರ್ದೈವ ಯಾವ ರೀತಿ ಇದೆ ಎಂದರೆ, ಇಲ್ಲಿ ಚರ್ಚೆಯಾಗತಕ್ಕಂಥ ಯಾವುದೇ ವಿಷಯವಿರಬಹುದು ಉದಾಹರಣೆಗೆ ಹೇಳುವುದಾದರೆ, ತೆಲಗಿಯ ವಿಷಯ ಅಥವಾ ಬೇರೇನು ವಿಷಯ ಅಥವಾ ಅಭಿವೃದ್ಧಿ ಕೆಲಸದ ಬಗ್ಗೆ ಬಹಳ ದೀರ್ಘವಾಗಿ ಉತ್ತರ ಕೊಟ್ಟರೂ ಕೂಡ ಅದು ಅಷ್ಟೊಂದು ಪ್ರಾಮುಖ್ಯವಾಗಿ ಪತ್ರಿಕೆಗಳಲ್ಲಿ ಅಥವಾ ಮೀಡಿಯಾಗಳಲ್ಲಿ ಬರುವುದಿಲ್ಲ. ಆದರೆ, ಇಂಥ ಒಂದು ವಿಷಯವನ್ನು ದೊಡ್ಡ ಪುಟದಲ್ಲಿ ಹಾಕುತ್ತಾರೆ. ಏಕೆಂದರೆ, ಹಿಟ್ ಅಂಡ್ ರನ್ ಅಂದರೆ ಕೊಡುವುದು, ಓಡಿ ಹೋಗೋದು. ಆಮೇಲೆ ನಾವು ಅವರನ್ನು ಹುಡುಕುತ್ತಾ ತಿರುಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಅವರು ಇತ್ತ ಕಡೆ ಕುಳಿತುಕೊಂಡಾಗ ಇದಕ್ಕಿಂತ ಜಾಸ್ತಿ ಇದೇ ರೀತಿಯಾಗಿ ಮಾಡುತ್ತಿದ್ದರು.

ಅಧ್ಯಕ್ಷರು : ವಾಕ್ ಔಟ್ ಮಾಡುತ್ತಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಹಿಟ್ ಅಂಡ್ ರನ್ ಮಾಡುತ್ತಿರಲಿಲ್ಲ. ಹಿಟ್ ಅಂಡ್ ಸಿಟ್ ಅಂದರೆ ಅಲ್ಲಿಯೇ ಕುಳಿತುಕೊಂಡು ಕೇಳುತ್ತಿದ್ದೇವು. ಮತ್ತೆ ಅದಕ್ಕೆ ಉತ್ತರ

ಕೊಡುತ್ತಿದ್ದೆವು. ಆದ್ದರಿಂದ ತಮ್ಮ ಗಮನಕ್ಕೆ ತರುವುದೇನೆಂದರೆ, ಸುಮ್ಮನೆ ಅನೇಕ ಸಾರಿ ಈ ಮಾತುಗಳು ಪದೇ ಪದೇ ಬಂದು ಯಾರಾದರೂ ಮತ್ತೆ ಹೇಳಿದರೆ ತಪ್ಪಾಗುತ್ತದೆ. ಆದ್ದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ತಾವು ಈಗಾಗಲೇ ಒಂದು ರೂಲಿಂಗ್‌ನ್ನು ಸಹ ಕೊಟ್ಟಿದ್ದೀರಿ. ಜೆ.ಸಿ. ಮಲ್ಹೋತ್ರರವರು ಎಡಿಟ್ ಮಾಡಿರತಕ್ಕಂಥ ಕೌಲ್ ಆಂಡ್ ಶಕ್ದರ್ ಪುಸ್ತಕದ 106ನೇ ಪುಟದ ಕೊನೆಯ ಪ್ಯಾರಾವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

9.20 ಪಿಎಂ

> "A question on a subject under police investigation is not disallowed on the ground that the matter is subjudice. However, questions regarding matters under police investigation have discouraged.

ನಾವು ಆದಷ್ಟು ಇದನ್ನು ಡಿಸ್‌ಕರೇಜ್ ಮಾಡಬೇಕು. ಅದಕ್ಕೆ ನಾವು ಪ್ರೋತ್ಸಾಹವನ್ನು ನೀಡಬಾರದು, ಎನ್ನತಕ್ಕಂತಹ ಪ್ರಿಸಿಡೆಂಟ್ಸ್‌ಗಳು ಉದಾಹರಣೆಗಳು ಇವೆ. ಅದಕ್ಕಾಗಿ ಇದು ಇದ್ದ ಮೇಲೆ ಅವರು ಬೇಕಂತಲೇ ಇದನ್ನು ರೈಸ್ ಮಾಡಿ ಹೇಳಿಕೊಂಡು ಹೊರಗಡೆ ಹೋದರು. ಇದನ್ನು ನಾವು ನೇರವಾಗಿ ಸಿಬಿಐಗೆ ಕೊಟ್ಟಿದ್ದೇವೆ ಎಂದು ಹೇಳಿದರೂ ಕೂಡ ಇದನ್ನು ಏಕೆ ಕೊಟ್ಟಿದ್ದೀರಿ, ಏನು ಕೊಟ್ಟಿದ್ದೀರಿ ಎಂದರೆ ಇದರ ಅರ್ಥ ಏನು? ಇವರು ಕಾಲು ಕೆರೆದು ಜಗಳವನ್ನು ತೆಗೆಯುವುದು" ಅಷ್ಟೇ ಹೊರತಾಗಿ ಮತ್ತೇನೂ ಇಲ್ಲ. ಅದಕ್ಕಾಗಿ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಂತಹ ಉದಾಹರಣಗೆಳಿವೆ. ದಯವಿಟ್ಟು ಅಂತಹ ವಿಷಯಗಳು ಕಡತದಲ್ಲಿ ಬಂದಿದ್ದರೆ ತಾವು ಅದನ್ನು ತೆಗೆಸಿಹಾಕಬೇಕು. ಅದಕ್ಕಾಗಿ ರೇಕಾರ್ಡ್‌ನ್ನು Straight ಮಾಡಬೇಕು. ಮತ್ತು ಈ ಒಂದು ರೂಲಿಂಗ್ ಪ್ರಕಾರ ಇದು ಪೆನಾಲೀಸ್‌ನಲ್ಲಿ ಇನ್‌ವೆಸ್ಟಿಗೇಷನ್ ಹಂತದಲ್ಲಿದೆ. ಅವರು ಯಾವಾಗಲೂ ನಂಬಿರುವುದು ಸಿಬಿಐನೇ? ಅವರು ಬೇರೆಯವರನ್ನು ನಂಬಲಿಲ್ಲ. ಡಾ|| ಚಿತ್ತರಂಜನ್‌ದಾಸ್‌ರವರ ಕೇಸ್, ಸೆಟಲ್ ಆಗಲಿಲ್ಲವೆಂದರೂ ಸಿಬಿಐನೆ? ಅನೇಕ ಕೇಸುಗಳನ್ನು ಸಿಬಿಐಗೆ ವಹಿಸಿಕೊಟ್ಟರೂ ಕೂಡ ಅವರೇ ಇರಲಿ ಅನ್ನುತ್ತಾರೆ. ಅವರಿಗೆ ರಾಜ್ಯದ ಪೊಲೀಸರ ಮೇಲೆ ನಂಬಿಕೆ ಕಡಿಮೆ. ಈಗಾಗಲೇ ಇದು ಸಿಬಿಐಗೆ ವಹಿಸಲಾಗಿದೆ. ಇದರ ಬಗ್ಗೆ ಎನ್‌ಕ್ವಯರಿ ನಡೆಯುತ್ತಿದೆ. ಅದು ಏನಾಗುತ್ತದೆಯೋ ಎಂಬುದನ್ನು ಮುಂದೆ ನೋಡೋಣ. ಅದೇ ಒಂದು ನೆಪ ಹೇಳಿಕೊಂಡು ದಯವಿಟ್ಟು ಈ ರೀತಿಯಾಗಿ ಹೇಳಿಕೊಂಡು ಹೋಗಕ್ಕಂಥದ್ದು ಸರಿಯಲ್ಲ. ಅದನ್ನು ತಾವು ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತೇನೆ. ಯಾವ ರೀತಿಯಾಗಿ ಇದು ಕೆಲಸವನ್ನು ಮಾಡುತ್ತದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ವೈಸ್ ಚಾನ್ಸಲರ್‌ರವರನ್ನು ನೇಮಕ ಮಾಡಬೇಕೆಂದು ಹೆಚ್ಚು ಕಡಿಮೆ ಸರ್ಕಾರದವರು ತೀರ್ಮಾನವನ್ನು ಮಾಡಿದೆವು. ಆ ಸಮಯದಲ್ಲಿ ಒಬ್ಬರು ಭದ್ರಾವತಿಯಲ್ಲಿ ಖಾಸಗಿ ಕ್ರಿಮಿನಲ್ ಕೇಸನ್ನು ಹಾಕಿದರು.

ಆ ಕೇಸ್ ಕೋರ್ಟಿನಲ್ಲಿ ರಿಜಿಸ್ಟರ್ ಆಯಿತು. ವೆರಿಫಿಕೇಷನ್‌ನ್ನು ಮಾಡುವಾಗ ಭದ್ರಾವತಿ ಕೋರ್ಟಿನಲ್ಲಿ ಇವರ ಮೇಲೆ ಒಂದು ಕೇಸ್ ಇದೆ. ಅದರಿಂದಾಗಿ ಇವರು ಅನರ್ಹರು ಅಂತ ಈ ಸಾರಿ ಅವರಿಗೆ ಆ ಟರ್ಮ್ ಸಿಗಲೇ ಇಲ್ಲ. ಆ ಕೇಸ್ ಕೊನೆಗೆ ತೀರ್ಮಾನವಾಗಿ ಇದು ಇವರಿಗೆ ಬರೀ ಅನ್ಯಾಯ ಮಾಡಬೇಕೆಂಬ ದೃಷ್ಟಿಯಿಂದಲೇ ದಾವಾ ಹಾಕಿರುವುದು ಎಂದು ಗೊತ್ತಾಗಿ ಕೇಸ್ ವಜಾ ಆದಮೇಲೆ ಅವರು ಮುಂದಿನ ಟರ್ಮ್‌ಗೆ ವೈಸ್ ಚಾನ್ಸಲರ್ ಆದರು. ಆದ್ದರಿಂದ ಇದು ಚಾರಿತ್ರಹರಣಕ್ಕೆ ದಾರಿಯಾಗುತ್ತದೆ. ಇಂತಹದ್ದಕ್ಕೆ ಶಾಸನಸಭೆಯಲ್ಲಿ ಅವಕಾಶ ಇರಬಾರದು. ಬೀದಿ ಇದೆ ಹೋಗೋಣ ಘೋಡಾ ಹೈ ಮೈದಾನ ಹೈ, ವಾರ್ ಫೀಲ್ಡ್‌ನಲ್ಲಿ ಯಾರು ಶತ್ರುಗಳು, ಯಾರು ಮಿತ್ರರೆಂದು ಅಲ್ಲಿ ಗೊತ್ತಾಗುತ್ತದೆ. ಜನರು ಯಾರನ್ನು ಮೆಚ್ಚುತ್ತಾರೋ ಅವರನ್ನೇ ಮೆಚ್ಚುತ್ತಾರೆ, ಈ ರೀತಿಯಾಗಿ ಚಾರಿತ್ರಹರಣಕ್ಕೆ ತಮ್ಮ ಕಾಲದಲ್ಲಿ ಅವಕಾಶವನ್ನು ಕೊಡಬಾರದು ಎಂದು ನಾನು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್‌ಶೆಟ್ಟರ್‌ರವರು ರೆಫರ್ ಮಾಡಿರತಕ್ಕಂಥದ್ದು ಇಷ್ಟೇನೇ, ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರ ಭ್ರಷ್ಟಾಚಾರದ ವಿರುದ್ಧ ದೊಡ್ಡ ಹೋರಾಟ ಮಾಡಿದ್ದೇವೆಂದು ಹೇಳಿ ನಾವು ಎಲ್ಲಾ ಪ್ರಕರಣಗಳನ್ನು ಭ್ರಷ್ಟರಹಿತವಾಗಿ ಸರ್ಕಾರವನ್ನು ಕೊಡುವುದಕ್ಕೆ ಸಂತೋಷವನ್ನು ಪಡುತ್ತೇವೆಂದು ಹೇಳಿದ್ದರು. ಪಾರದರ್ಶಕವಾದ ಸರ್ಕಾರ ಮತ್ತು ನಮ್ಮಲ್ಲಿ ಕರಪ್ಷನ್ ಲೆಸ್, ಕರ್‌ಪಷನ್ ಫ್ರಿಗೌರ್ನಮೆಂಟನ್ನು ಕೊಟ್ಟಿದ್ದೇವೆಂದು ಹೇಳಿ ಸಂತೋಷ ಪಡುತ್ತೇವೆ ಎನ್ನುವುದರ ಬಗ್ಗೆ ವ್ಯಕ್ತ ಮಾಡಿರುವುದರಿಂದ ಅವರು ರೆಫರ್ ಮಾಡಿರತಕ್ಕಂಥದ್ದು ಏನು? ಅವರು ಒಂದು ಎಫ್‌ಐಆರ್‌ನ್ನು ರೆಫರ್ ಮಾಡಿದ್ದಾರೆ. ಅಷ್ಟೆ. ಎಫ್‌ಐಆರ್ ಅದು ಪಬ್ಲಿಕ್ ಡಾಕ್ಯುಮೆಂಟ್, ಇಟ್ಸ್ ಎ ಪಬ್ಲಿಕ್ ಡಾಕ್ಯುಮೆಂಟ್, ನೀವೆಲ್ಲಾ ವಕೀಲರುಗಳು, ಐ ಆ್ಯಮ್ ಎ ಇಂಜಿನಿಯರ್ ನಾನು ವಕೀಲ ಅಲ್ಲ. But anybody can get an FIR. Yes, to the extent ತಾವು ಎಕ್ಸ್‌ಪಂಜ್ ಮಾಡಿದ್ದೀರಿ, ಮಾನ್ಯ ಅಧ್ಯಕ್ಷರೆ, ತಾವು ಈ ಕಡೆ ಕಿವಿಯನ್ನು ಕೊಡಬೇಕು. ತಾವು ಏನು ಎಕ್ಸ್‌ಪಂಜ್ ಮಾಡಿದ್ದೀರಿ, allegations against somebody, ಅವರು ಇಲ್ಲಿ ಬಂದು ಡಿಫೆಂಡ್ ಮಾಡಿಕೊಳ್ಳಲಾಗುವುದಿಲ್ಲ. ಸೋ, ಅದರಿಂದ ನಾನು ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಎಂದು ಹೇಳಿದ್ದೀರಿ. That could be agreed. ಬಟ್ ಫರ್ದರ್ ಏನಿದೆ, ಉದಾ: ನೀವೇನೇಸ್ಟಾಂಪಿಟ್ ಮಾಡಿರತಕ್ಕಂತಹ ಅನೇಕ ಎನ್‌ಕ್ವಯರಿ ಬಗ್ಗೆ, ಪೊಲೀಸ್ ಎನ್‌ಕ್ವಯರಿ ಬಗ್ಗೆ, ನಾನೇ ನಿಮ್ಮ ಜಾಗದಲ್ಲಿ ಕುಳಿತುಕೊಂಡಿದ್ದರೆ ನಾನು ಒಂದನ್ನೂ ಹೇಳುತ್ತಿರಲಿಲ್ಲ. ನಾನು ಹೇಳುತ್ತಿದ್ದುದು the matter is under investigation, I cannot interfere ಎಂದು ಹೇಳುತ್ತಿದ್ದೆ. ಆಗ ಮಾತ್ರ ನೀವು ಎಲ್ಲಾ ಡಿಟೇಲ್ಸ್ ಹೇಳಿದ್ದೀರಿ ನೀವು, ಇಗ ಎಫ್‌ಐಆರ್‌ನ್ನು ರೆಫರ್ ಮಾಡಿರುವ ಬಗ್ಗೆ ಕೌಲ್ ಅಂಡ್ ಶಕ್ದರ್‌ನ್ನು ರೆಫರ್ ಮಾಡುತ್ತಿದ್ದೀರಲ್ಲಾ ಇದು ಯಾವ ನ್ಯಾಯ? ಅದರಿಂದ ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಏನು ಹೇಳುತ್ತೇನೆಂದರೆ, ಅವರು ಅವರ ಸನ್--ಇನ್ ಲಾ ಎಂದು ಏನು ರೆಫರ್ ಮಾಡಿದ್ದಾರೆ, ಅವರು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿ ಆಗುವುದಿಲ್ಲ. Yes, I agree with you. ಮತ್ತೇ ಯಾರದೋ ಹೆಸರು ಬಹಳ ಪುಗಸಟ್ಟೆಯಾಗಿ ವರ್ಣರಂಜಿವಾಗಿ ಕಾಣುತ್ತದೆ ಎಂದು

ಹೇಳಿಬಿಟ್ಟು ಅವರ ಬಗ್ಗೆ ಅವಹೇಳನ ಮಾಡತಕ್ಕಂಥದ್ದು ಸರಿಯಲ್ಲ ಎನ್ನುವಂತಹ ಮಾತನ್ನು ನಾನು ಸಹ ಒಪ್ಪತಕ್ಕಂಥವನೇ, ಆದರೆ ಎಫ್‌ಐಆರ್‌ನ್ನೇ ರೆಫರ್ ಮಾಡಬಾರದು ಎನ್ನತಕ್ಕಂಥದ್ದು ಸರಿಯಾದ ವಾದವಲ್ಲ. ಸ್ವಾಮಿ, ಚಿಕಾಸ್ ಇನ್ ದಿಸ್ ಹೌಸ್ ನೀವು ಓದಿದರಲ್ಲಾ ಒಂದು ಪ್ರಿಸಿಡೆಂಟ್ ಯಾರೋ ಅಧ್ಯಕ್ಷರಾಗಿ ಕುಳಿತುಕೊಂಡಿದ್ದಾಗ ಕೊಟ್ಟಿದ್ದಿದ್ದು, ಅದೇ ರೀತಿ ನಾಳೆ ದಿವಸ ಇದೂ ಕೂಡ ಪ್ರಿಸಿಡೆಂಟಾಗುತ್ತದೆ, ಹಾಗಾದರೆ ನಾವು ಯಾವುದೋ ಪೋರ್ಷನ್‌ನಲ್ಲಿದ್ದುಕೊಂಡು, ಯಾವ ಎಫ್‌ಐಆರ್‌ನ್ನು ಸಹಿತ ನಾವು ಡಿಸ್‌ಕಸ್ ಮಾಡುವುದಕ್ಕೆ ಆಗುವುದೇ ಇಲ್ಲ. ನಿಮಗೆ ಗೊತ್ತಿದೆ ಮಾನ್ಯ ಚಂದ್ರೇಗೌಡರು, ಮಾನ್ಯ ಧರ್ಮಸಿಂಗ್‌ರವರು ವಿರೋಧಪಕ್ಷದಲ್ಲಿದ್ದಾಗ ಚಂದ್ರಸ್ವಾಮಿನೋ ಯಾರ್‍ಯಾರ ಬಗ್ಗೆಯೋ ಎಷ್ಟೊಂದು ಎಫ್‌ಐಆರ್‌ಗಳನ್ನು ತೆಗೆದುಕೊಂಡು ಬಂದು ತೋರಿಸಿಲ್ಲ? ಎಷ್ಟೋ ಎಫ್‌ಐಆರ್‌ಗಳನ್ನು ನಿಮಗೆ ಬೇಕಾದಹಾಗೆ foist ಮಾಡಿದ್ದಿರಾ ಅಂತ ಹೇಳಲಿಲ್ಲ ನಾವು. ಎಫ್‌ಐಆರ್‌ನ್ನು ರೆಫರ್ ಮಾಡಿರತಕ್ಕಂಥದ್ದು ತಪ್ಪು ಎಂದು ಹೇಳತಕ್ಕಂಥದ್ದು ಸರಿಯಲ್ಲ ಸ್ವಾಮಿ ಇದು ನನ್ನ ವಾದವಾಗಿದೆ.

ಅಧ್ಯಕ್ಷರು : ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಏಕೆಂದರೆ, ಇದು ಪೊಲೀಸ್ ಇನ್‌ವೆಸ್ಟಿಗೇಷನ್‌ನಲ್ಲಿದೆ, ಅವರು ಬರೀ ಎಫ್‌ಐಆರ್‌ನ್ನು ಮಾತ್ರ ರೆಫರ್ ಮಾಡಲಿಲ್ಲ. ಅವರ ಹೆಸರುಗಳನ್ನು ಹೇಳಿದರು. ಅಂದರೆ ಅಪ್ರತ್ಯಕ್ಷವಾಗಿ ಇಂತಹವರು ಎನ್ನತಕ್ಕಂತಹ ಮಾತನ್ನು ಹೇಳಿದ ಮೇಲೆ ಆ ಇನ್‌ಫರ್ಮೇಷನ್ ಇದ್ದು ಏನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ರೂಲಿಂಗ್ ಕೊಟ್ಟಿದ್ದು, ಇದನ್ನು ನನ್ನ ಇದರಿಂದ ಹೇಳುತ್ತಿಲ್ಲ. ಮುಂದೆ ಅವರು ಹೇಳುತ್ತಾರೆ ಅಧ್ಯಕ್ಷರೆ, ಅದನ್ನು ನಾನು ಸ್ಪಷ್ಟಪಡಿಸುತ್ತೇ. ಏಕೆಂದರೆ ನಾನು ಅಷ್ಟೇ ಓದಿದಕ್ಕಾಗಿ ಬಹುಶಃ ಅದನ್ನ...

ಅಧ್ಯಕ್ಷರು : 1068 ಸೆಕ್ಸ್ಟ್ ಪೇಜ್‌ನಲ್ಲಿದೆ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಭಾಧ್ಯಕ್ಷರೇ, "However the questions regarding matters under police investigation have been discouraged. Members in possession of any particular reliable information about a matter under police investigation have been advised to pass on that information to the concerned." ಅಂದಾಗ ಅಲ್ಲಿ ಕಳುಹಿಸಲಿ, ಅದಕ್ಕಾಗಿ ಅದರ ಬಗ್ಗೆ ಹೇಳಿದೆ ಅಷ್ಟೆ.

ಅಧ್ಯಕ್ಷರು : ಆಯಿತು, Question regarding matters under police investigation have been-discouraged. Members in possession of any particular reliable information about a matter under police investigation have been advised to pass on that information to the concerned minister." ಈಗ ನಾನು ಓದಿದನಲ್ಲಾ ಅದನ್ನು ಎತ್ತಿಹಿಡಿದು, ಹಾಗೂ ಶ್ರೀಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದನ್ನು ಎತ್ತಿ ಹಿಡಿಯುತ್ತಾರೆ ರೂಲ್ 328 ಪ್ರಕಾರ ಅವರು ಬೆಳಿಗ್ಗೆಯೇ ನನಗೆ ಪಾಸ್

ಆನ್ ಮಾಡಬೇಕಾಗಿತ್ತು. ಇಂತಹವರ ಮೇಲೆ ನಾನು ಇದನ್ನು ಮಾಡುತ್ತೇನೆ, ಇಂತಹ ರೇಕಾರ್ಡ್ಸ್‌ನ್ನು ನಿಮಗೆ ಸಬ್‌ಮಿಟ್ ಮಾಡುತ್ತೇವೆಂದು ಹೇಳಬೇಕಾಗಿತ್ತು ಅದನ್ನು ಸಹ ಹೇಳಲಿಲ್ಲವಲ್ಲಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಕೇಳುತಾ ಇರತಕ್ಕಂಥದ್ದು...

ಅಧ್ಯಕ್ಷರು : ಅವರು ಅದನ್ನು ಹೇಳಲ್ಲಿಲ್ಲವಲ್ಲಾ ನಿಮಗೆ. ರೂಲ್ 328....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಾವು ಆ ಸ್ಥಾನದಲ್ಲಿ ಕುಳಿತುಕೊಂಡಿರತಕ್ಕಂಥವರು ತಾವು ದಯವಿಟ್ಟು ಕೇಳಬೇಕು All these things become precedents. ನಾವು 5–6 ಸಾರಿ ಗೆದ್ದುಬಂದು ಇಲ್ಲಿ ಸರಿಯಾಗಿ ಪ್ರಿಸಿಡೆಂಟ್‌ಗಳು ಆಗದೆಹೋದರೆ ಅದು ಹೇಗೆ ನಾನು ಏನು ಕೇಳುತ್ತಾ ಇರತಕ್ಕಂಥದ್ದು, ಹಾಗಾದರೆ ನೀವು ಎಂಟೈರ್ ಪ್ರೊಸಿಡಿಂಗ್ಸ್‌ನ್ನೇ ನೀವು ಎಕ್ಸ್‌ಪಂಜ್ ಮಾಡುತ್ತಿದ್ದಿರಾ?

Mr. Speaker : I have not given like that. ನೀವು ಏತಕ್ಕಾಗಿ ಊಹೆ ಮಾಡುತ್ತಿದ್ದೀರಿ?

Sri P.G.R. Sindhia : That is what I am asking.

ಅಧ್ಯಕ್ಷರು : ನೀವು ದಯವಿಟ್ಟು ಊಹೆ ಮಾಡಬೇಡಿ,

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಅದರ ಬಗ್ಗೆ ಹೇಳಿ.

Mr. Speaker : Who told you? I never told you. ಅವರು ಏನು ಹೇಳಿದ್ದಾರೋ ಅದನ್ನು ಎತ್ತಿಹಿಡಿಯುತ್ತಾ 328ನೇ ರೂಲ್ ಪ್ರಕಾರ ಅವರು ಮೊದಲೆ ಅಂದರೆ ಬೆಳಿಗ್ಗೆ ನಮಗೆ ಈ ಪೇಪರ್‌ಗಳನ್ನು ಸಬ್‌ಮಿಟ್ ಮಾಡಬೇಕಾಗಿತ್ತು. ನಾನು ಇಂತಹ ವಿಷಯವನ್ನು ಎತ್ತುತ್ತಿದ್ದೇನೆಂದು ಹೇಳಬೇಕಾಗಿತ್ತು. ಅದಕ್ಕೋಸ್ಕರ Whatever matter pertaining to sub-judice, it will be removed.

Sri P.G.R. Sindhia : Which is that matter?

ಅಧ್ಯಕ್ಷರು : ನಾನು ಆಮೇಲೆ ಹೇಳುತ್ತೇನೆ. I will take a decision. ಈಗ ಒಂದು ಪ್ರಕಟಣೆ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಪತ್ರಿಕೆಗಳಲ್ಲೆಲ್ಲಾ ಹೋಗಿರುತ್ತದೆ. ನಮಗೆ ಆಗಬೇಕಾಗಿರುವುದು ಅಷ್ಟೇನೇ?

ಅಧ್ಯಕ್ಷರು : ಪತ್ರಿಕೆಗಳವರಿಗೆ ಎಲ್ಲವನ್ನು ಈಗಾಗಲೇ ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಲ್ಲ, ನನಗೆ ಅರ್ಥವಾಗುತ್ತಿಲ್ಲ. ಹಾಗಾದರೆ ಇದರಲ್ಲಿ ಎಫ್‌ಐಆರ್ ರೆಫರ್ ಮಾಡಿರತಕ್ಕಂಥದ್ದು ತಪ್ಪು ಎಂದು ರೂಲಿಂಗ್ ಕೊಡುವುದಾದರೆ, ಆ ಸ್ಟಾಂಪಿಟ್‌ನಲ್ಲಿ ಏತಕ್ಕಾಗಿ ಕೊಡಲಿಲ್ಲ ನೀವು?

ಅಧ್ಯಕ್ಷರು : ಸದನದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಖರ್ಗೆಯವರು ಏನು ಹೇಳಿದ್ದಾರೆ ಅದನ್ನು ನಾನು ಎತ್ತಿ ಹಿಡಿದಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಬೇಕು ಈಗ ಒಂದು ಪ್ರಕಟಣೆ ಇದೆ.